A.—Sri T. CHANNIAH (Minister for Public Health and Local Self-Government).—

(a)—		Hoskote	Anekal
1954-55	...	49	86
1955-56	...	54	96
(b)—		Rs.	Rs.
1954-55	...	37,330	38,813
1955-56	...	41,625	42,750

Unauthorised Cultivation in Magadi Taluk.

Q.—609. Sri S. SIDDAPPA (Magadi).—

Will the Government be pleased to state :—

the extent of forest land that is being cultivated unauthorisedly in each village in Magadi Taluk ?

A.—Dr. R. NAGAN GOWDA (Minister for Agriculture).—

Acres	Guntas
120	25

Details

Madabal : Over 118 acres and 35 guntas.

Kasaba Hobli, Solur : One acre and 30 guntas.

BUDGET FOR 1956-57—DEMANDS FOR GRANTS (*Contd.*)

Sri R. ANANTARAMAN (Chamarajpet).—I have got a suggestion to make regarding the allotment of timings for discussion of Demands. Demand No. 7 one hour. Demand No. 14 two hours. Demand No. 15 half an hour.

Mr. SPEAKER.—Demand No. 7 : One hour and 15 minutes. If there are more number of members anxious to speak on this Demand, I will increase it to one and a half hours. Demand No. 14 : One and a half hours, Demand No. 15 : Half an hour.

DEMAND No. 7—GENERAL SALES-TAX, OTHER TAXES AND DUTIES—ADMINISTRATION.

13. OTHER TAXES AND DUTIES.

Mr. SPEAKER.—Motion moved :

"That a sum not exceeding Rs. 17,61,000 be granted to the Government to defray the charges which will come in course of payment during the year ending 31st day of March 1957, in respect of 'Other Taxes and Duties'."

*Sri M. RAJASEKHARA MURTHY (Yelandur).—The Bangalore Race Club has been figuring in the news every now and then. I feel that it is necessary to present a correct statement of facts about this Club. My friend Sri Mariappa who sympathised with the Opposition Party and who almost played the role of a member of the Opposition Party, made two important observations on the Bangalore Race Club. The first one is that the Government is unnecessarily interfering with the internal autonomy of the Bangalore Race Club which is a private social institution ; secondly, there has been a delay on the part of the Government in issuing licence to the Bangalore Race Club, resulting in a heavy loss of revenue to the Government. The Bangalore Race Club was started somewhere in the year 1919 with 50 members and Brigadier Hill from 1923 to 1949 rendered yeoman service and built up a huge reserve of Rs. 7 lakhs and some people who have some ill-feeling or some bitterness towards that man, made certain allegations. The Bangalore Race Club appointed a sub-committee to enquire into the allegations made against him. Four members as against one submitted a report that the charges levelled against him were baseless. The recommendation of the sub-committee was approved by the general body. There were two

1 P.M.

parties. One is majority party and the other is a minority party. Members of the minority party had tremendous influence with the Government. They

(SRI M. RAJASEKHARA MURTHY).

approached the then Government in 1949 and secured an order in their favour stating that all Government officers should resign. That order was passed in 1949. Consequent to that order the majority party became the minority party and the minority party became the majority party. How that order was passed, why that order was passed, for whom that order was passed I am not going to enter into on merits. I just leave it to the members to consider it for themselves. I only. . .

Sri T. MARIAPPA (Mysore City-North).—Government had never a majority.

Sri M. RAJASEKHARA MURTHY.—Not the Government. There were two parties among the members. In 1949 an order was passed by the then Government and as a consequence of that, soon after that order was passed by the Government, there was reaction in the Press also. I would like to quote one or two instances of what appeared in the 'Hindu' dated 15th September 1949.

> "It has been suggested that it amounts to taking side. . . in the normal management of the club and it is intended to support a minority with bias and partiality in respect of internal autonomy of a private. . . and that the interference with the normal. . ."

Sri A. G. NARASIMHA REDDY (Bangalore South).—Sir, on a point of order. Is any Hon'ble Member permitted to read newspaper extracts? He has been reading some opinion that might have appeared in the Press in 1949. He is reading from a newspaper cutting. Is that permitted according to the procedure of the House?

Sri M. RAJASEKHARA MURTHY.—He has mistaken me and I am only giving an extract from the news that appeared in the 'Hindu' of that date.

*Sri A. BHEEMAPPA NAIK (Molakalmuru).—Extract from what? From the editorial or from some pseudonymous letter? Is anything that appears in the columns of a newspaper an authority to be quoted here?

Mr. SPEAKER.—Of course, what appears in the Press cannot be considered to be an authority. Without disclosing the source, what is the use of reading it?

Sri A. BHEEMAPPA NAIK.—It may be his own version.

Sri M. RAJASEKHARA MURTHY.—I made it clear already that it appeared in the 'Hindu' of 15th September 1949. Let him make a reference to it.

Sri A. BHEEMAPPA NAIK.—By whom was this sent? Is this an article or the editorial quotation? You do not say anything. You simply say, it appears. Anything may appear in the 'Hindu'. There were many deaths on that day and that may appear. That is also a statement that appears in the 'Hindu'. So many other things also, for instance advertisements, appeared the 'Hindu'.

Sri M. RAJASEKHARA MURTHY.—It has appeared in the news column.

Sri A. BHEEMAPPA NAIK.—Such reading of extracts cannot be permitted, Sir.

Mr. SPEAKER.—Any news referred to in the Press cannot be considered as authoritative.

Sri M. RAJASEKHARA MURTHY.—It is on account of this unwarranted interference by the Government by passing the order in 1949 that the subsequent developments have taken place in the Bangalore Race Club, and but for that, present interference on the part of this Government would not have arisen at all. All the Government officers who were members of the Race Club, other than those nominated should resign from the Race Club—that is what the order said.

Sri K. PUTTASWAMY (Srirangapatna).—The point made is 'interference by the Government'. So the Hon'ble Member admits that there has been interference by the Government.

Sri M. RAJASEKHARA MURTHY.—I said that the present interference in the affairs of the Race Club is in continuance of the interference made by the then Government in 1949.

Regarding the second point that there has been delay in issuing licence to the Race Club and consequent loss of revenues to the exchequer, I would like to say a few words. In accordance with the assurance given by the Government and taking note of certain allegations made by some Hon'ble Member—if I remember correctly it was Sri Srinivasa Iyengar,—the Government constituted a special committee consisting of four persons. This committee submitted a report stating that the rules of the Club should be modified and until such modification no licence shall be issued. The recommendations were approved by the Government in toto. On the assurance held out to the Managing Committee of the Race Club, on the understanding that the Government may appoint a special officer till such modifications are effected in the rules, licence was issued. Soon after the licence was issued. . .

Sri T. MARIAPPA.—Is it understanding or a Government order ?

Mr. SPEAKER.—Hon'ble Member should not exceed the time limit, because there are many members to speak.

Sri M. RAJASEKHARA MURTHY.—Government issued licence. Soon after, there was change in the attitude of the Race Club. They appointed a negotiating committee in order to meet the Home Minister. The committee met the Home Minister several times and arrived at a compromise formula regarding the quantum of Governments' representation on the management. But the Managing Committee of the Race Club turned down the compromise formula arrived at between the Negotiating Committee and the Government.

(*Interruption by Sri N. C. Nagiah Reddy*)

Mr. SPEAKER.—The Hon'ble Member is not in his seat at all. And the Hon'ble Member Sri Rajasekhara Murthy must close his remarks. Only a little time is left for the other members to speak.

Sri M. RAJASEKHARA MURTHY.—This committee placed the matter before the general body but the meeting of the general body did not take place. It was being postponed now and then quite against the rules of the Race Club and the Senior Steward who happened to be a member of the second negotiating committee is reported to have met two days prior to the meeting of the general body of the Race Club, the Chief Minister who is alleged to have said that licence cannot be issued in view of the difference between the Government and the management. That was reported to the general body and the general body authorised the management to take such action as is necessary against the members of the special committee appointed by the Government for making certain statements in the report. And the things are in that state. Now the question is, whether the future of the Race Club should depend upon or should be dictated by some recalcitrant elements in the Race Club or whether the Government should surrender themselves to the terms of the Race Club or whether the Government should keep this question under suspension for a long time merely because the Club has developed a kind of apathy towards any kind of compromise with the Government or whether the Government is not entitled to conduct negotiations with any other agency who are interested in running the races. In my opinion Government should conduct negotiations with those who are interested in running the races irrespective of the attitude of the Race Club who have imported irrelevant considerations in their conduct towards the Government.

I would like to say only one or two words about the sales-tax on silk and cocoons.

Mr. SPEAKER.—The Hon'ble Member has exceeded the time limit.

Sri M. RAJASEKHARA MURTHY.—Only two points. Government are levying sales-tax on cocoons and silk. Sericultural industry is a cottage industry. Various associations representing different industries have appealed to Government that the tax on both silk and cocoons should be abolished. The technical committee which met in Bombay last May have

(SRI M. RAJASEKHARA MURTHY).

made a request to the State Government that tax on silk and cocoons should not be levied. The Karve Committee appointed by the Government of India which prepared a plan for the development of cottage industry have said that the tax on cottage industry products should be avoided. The Silk Association, the Reelers Association and several organisations, in their conferences held now and then, and attended by sericulturists have requested the Government to abolish sales-tax on silk and cocoons. But still the Government have not taken suitable action.

Regarding the levy of tax, the Cocoon Act says that cocoon sold by rearers is not liable for taxation. That means that if cocoons are directly sold by the rearers other than the producer to the reeler, the tax will not be collected. If it is sold by an agent other than the agent who deals in that, he should pay the tax. The tax is paid for purposes of convenience, to get supply through the agents. The tax that they pay is only 2 pies per rupee. But the sales-tax now levied by the Government is 3 pies a rupee. But the actual receipts by the agents is only one per cent; and the money which comes from these agents who are dealing in cocoons has been prescribed for non payment of taxes. Cases have been pending before the Government and many of them have no profit at all. I request in the interest of the cottage industries, this tax and the tax both on cocoons as well as raw silk and charka silk and silk produced in domestic basins not driven by power are removed. Thank you very much.

*ಶ್ರೀ ಎಸ್. ಶ್ರೀನಿವಾಸಐಯ್ಯಂಗಾರ್ (ಟಿ.-ನರಸೀಪುರ).—ಸ್ವಾಮಿ, ಸೇಲ್ಸ್‌ಟ್ಯಾಕ್ಸ್ ವಿಚಾರದಲ್ಲಿ ಬಹಳವಾಗಿ ಹೇಳುವುದು ಇದೆ. ಸೇಲ್ಸ್ ಟ್ಯಾಕ್ಸ್‌ನಿಂದ ವರ್ಷ ವರ್ಷೇ ವರಮಾನ ಹೆಚ್ಚಾಗುತ್ತಿದೆ ಎಂದು ಹೇಳಿದರೆ ಅದು ವಸೂಲಿ ಕ್ರಮದಲ್ಲಿ ಬಹಳ ಮುತುವರ್ಜಿ ವಹಿಸಿ ಮಾಡಿದ್ದರಿಂದ ಹೆಚ್ಚಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಹೋದವರ್ಷದಿಂದ ಸುಮಾರು 43 ಪದಾರ್ಥಗಳ ಮೇಲೆ single point levy ಹಾಕಿದ್ದರಿಂದ ತೆರಿಗೆ ಹೆಚ್ಚಾಗಿ ಬಂದು ವರಮಾನ ಹೆಚ್ಚಿದೆಯೇ ಹೊರತು ಆಡಳಿತದಕ್ಷತೆಯಿಂದ ಈ ವರಮಾನ ಹೆಚ್ಚಿದೆ ಎಂದು ನಂಬುವುದಕ್ಕಾಗುವುದಿಲ್ಲ. ಈಗ ಮಾರಾಟ ತೆರಿಗೆಯು ಒಂದು ಐಟಂನಲ್ಲಿ 50 ಲಕ್ಷರೂಪಾಯಿ ಬಾಕಿ ಇದೆ. ಇದು ಯಾವಾಗ ವಸೂಲಾಗುತ್ತದೆಯೋ ಗೊತ್ತಿಲ್ಲ. ಈಗ ಸುಮಾರು 1948ನೆ ಇಸವಿಯಲ್ಲಿ ಇದು ಜಾರಿಗೆ ಬಂದು 1949ನೆ ಇಸವಿಯಿಂದ ಪ್ರಾರಂಭವಾಯಿತು. ಇಲ್ಲಿಯವರೆಗೆ 50 ಲಕ್ಷ ರೂಪಾಯಿ ಮಾರಾಟ ತೆರಿಗೆ ಬಾಕಿ ಇದೆ. ಇದನ್ನು ಯಾವಾಗ waive ಮಾಡುತ್ತಾರೋ ಗೊತ್ತಿಲ್ಲ. ಇಷ್ಟು ಭಾರಿ ಮೊತ್ತದ ಹಣವನ್ನು ಬಾಕಿ ಬಿಡುವುದಕ್ಕೆ ಕಾರಣವೇನು ? ಸಿಬ್ಬಂದಿಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ಅನೇಕರ ಹತ್ತಿರ ಮಾರಾಟ ತೆರಿಗೆಯ ವಸೂಲಿಗೆ ಬೇಕಾದಷ್ಟು ಬಲವಂತವಾದ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ. ಅಂಥದರಲ್ಲೂ ಇಷ್ಟು ಬಾಕಿ ಇರಬೇಕಾದರೆ ಏನು ಕಾರಣ? ಏತಕ್ಕೆ ಸರ್ಕಾರದವರು ದಕ್ಷತೆಯಿಂದ ಕೆಲಸಮಾಡಲಿಲ್ಲ? ಇದನ್ನು ಮೊದಲು ವಿಚಾರಣೆ ಮಾಡಬೇಕು. ಮಾರಾಟ ತೆರಿಗೆ ಬಾಬಿನಲ್ಲಿ ಬಾಕಿ ಇರುವ 50 ಲಕ್ಷ ರೂಪಾಯಿಗಳನ್ನು ಕೂಡಲೇ ವಸೂಲ್ಮಾಡಬೇಕು. ಸುಮ್ಮನೆ ಆಡಳಿತ ತೆಗೆದುಕೊಳ್ಳಬಾರದು. ಬಡ್ಜೆಟ್ಟಿನಲ್ಲಿ ತಂದರೆ, ಈ ಬಾಬಿನಲ್ಲಿ ಸರಿಯಾಗಿ ಕೆಲಸ ನಡೆಯುತ್ತಿದೆಯೇ, ಇಲ್ಲವೇ ಎನ್ನುವುದನ್ನು ವಿಮರ್ಶೆ ಮಾಡತಕ್ಕ ದಕ್ಷತೆ ಇಲ್ಲದೆ ಹೋದರೆ ಹೇಗೆ ನಡೆಯುತ್ತದೆ. ನಾವ್ಯಾಗಲೆಲ್ಲ ಯಾತಕ್ಕೆ ಕಂದಾಯಗಳನ್ನು ಸಲೀಸಾಗಿ ಕೊಡಬೇಕು. ಮಾರಾಟ ತೆರಿಗೆಯನ್ನು ವಸೂಲ್ಮಾಡುವುದಕ್ಕೆ ಆಗದೆ ಹೋದಮೇಲೆ ಕಂದಾಯಗಳನ್ನು ಇನ್ನು ಮೇಲೆ ಕೊಡುವುದಿಲ್ಲ. ಯಾತಕ್ಕೆ ಕೊಡಬೇಕು ?

ಎರಡನೆಯದಾಗಿ Assistant Sales-tax Officer ನೇಮಕದ ವಿಚಾರದಲ್ಲಿ ಸರ್ಕಾರ ಮನಸ್ಸಿಗೆ ಬಂದಹಾಗೆ ವರ್ತಿಸುತ್ತಿದೆ. ಅವರಿಗೆ ತೋಚಿದ ಹಾಗೆ ಮಾಡುತ್ತಿದ್ದಾರೆ. ಮೂರು ಜನರನ್ನು ಸೇಲ್ಸ್‌ಟ್ಯಾಕ್ಸ್ ಇಲಾಖೆಯಲ್ಲಿ ಅಸಿಸ್ಟೆಂಟ್ ಸೇಲ್ಸ್‌ಟ್ಯಾಕ್ಸ್ ಆಫೀಸರ ಹುದ್ದೆಗೆ ಭರ್ತಿಮಾಡಬೇಕಾಯಿತು. ಇಲಾಖೆಯಲ್ಲಿದ್ದ ನಾಲ್ಕು ಜನ ಗುಮಾಸ್ತರಲ್ಲಿ ಪ್ರಮೋಷನ್ ಕೊಟ್ಟು ಈ ಹುದ್ದೆಗಳಿಗೆ ನೇಮಿಸಿದರು. ಅವರಿಗೆ ಗುಮಾಸ್ತರಾಗಿ 80 ರೂಪಾಯಿ, 90 ರೂಪಾಯಿ, 100 ರೂಪಾಯಿ ಹೀಗೆ ಸಂಬಳ ಬರುತ್ತಿತ್ತು. ಇಂಥವರನ್ನು ಅಸಿಸ್ಟೆಂಟ್ ಸೇಲ್ಸ್ ಟ್ಯಾಕ್ಸ್ ಆಫೀಸರುಗಳೆಂದು 150, 200 ರೂಪಾಯಿ ಸಂಬಳ ಕೊಟ್ಟು Gazetted rankಗೆ ಪ್ರಮೋಷನ್ ಕೊಟ್ಟರು. ಇವರುಗಳಲ್ಲಿ ಯಾರೂ ಸಹ ಪದವೀಧರರಲ್ಲ; ಎಲ್ಲರೂ under-graduates. ಇಂಥವರನ್ನು ಏಕ್‌ದಂ Gazetted Officers ಮಾಡಿದರು. ಆಗ ನಾನು ಒಂದು ಖೋತಾ ಸೂಚನೆ ಕಳುಹಿಸಿ, "ಗೆಜೆಟೆಡ್ ಹುದ್ದೆಗೆ ಯಾರನ್ನಾದರೂ ನೇಮಿಸಬೇಕಾದರೆ, First Division Clerks ಆಗಿದ್ದರೆ ಪ್ರಮೋಷನ್ ಕೊಡಬೇಕಾಗಿತ್ತು; Second Division ನಲ್ಲಿ ಇದ್ದವರಿಗೆ ಪ್ರಮೋಷನ್ ಕೊಟ್ಟದ್ದು ತಪ್ಪು; ಒಂದು ಅಕ್ರಮ, ಅನ್ಯಾಯ ಮಾಡುತ್ತಿದ್ದೀರಿ. ಯಾವುದೋ ಒಂದು ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೀರಿ, ಇದು ಬಹಳ ತಪ್ಪು. ಒಂದು ಪದ್ಧತಿ ಇಟ್ಟುಕೊಂಡು, ಸರ್ಕಾರದಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ನಂಬಿಕೆ ಬರುವಂತೆ ಕೆಲಸಗಳನ್ನು ಮಾಡಬೇಕು. ನೀವು ಮಾಡಿರುವಂಥ ಕಾರ್ಯವನ್ನು ನೋಡಿದರೆ ಅಕ್ರಮವಾದ ಕೆಲಸಗಳನ್ನು ಮಾಡುತ್ತಿದ್ದೀರಿ" ಎಂದು ಆಕ್ಷೇಪಣೆ ಮಾಡಿದೆ. ಅದಕ್ಕೆ ಹೇಳಿದರು "ಅಂಥದೇನೂ ಇಲ್ಲ. ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಕೇಳುತ್ತಿದ್ದೇವೆ; graduates ಇಲ್ಲ, under-graduates ಇದ್ದಾರೆ" ಎಂದು ಮುಂತಾಗಿ ಹೇಳಿದರು. ಇದು ಬಹಳ ತಪ್ಪು, ಧೋರಣೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಬರೆದರಂತೆ, ಅವರು ಶಿಫಾರ್ಸು ಮಾಡಿದರಂತೆ,

ಸರ್ಕಾರದವರು confirm ಮಾಡಿದರಂತೆ. ಈ ಒಂದು ನಾಟಕ ಏತಕ್ಕೆ? ಅಲ್ಲದೆ "ಈ ಇಲಾಖೆಯಲ್ಲಿರುವವರು ಬಹಳ ದಕ್ಷರು, ಗುಮಾಸ್ತೆ ಕೆಲಸ ಮಾಡಿರತಕ್ಕವರಿಗೆ ಕೆಲಸ ಗೊತ್ತಿರುತ್ತದೆ. ಅಂಥವರನ್ನು ಗೆಜೆಟೆಡ್ ಹುದ್ದೆಗೆ ಏರಿಸಿ Assistant Sales-tax Officer ಮಾಡಿದರೆ ವಸೂಲಿ ಕೆಲಸ ಚೆನ್ನಾಗಿ ಆಗುತ್ತದೆ. ಆದುದರಿಂದ ಇವರನ್ನೇ ತೆಗೆದುಕೊಳ್ಳುತ್ತೇವೆ. ಬೇರೆ ಇಲಾಖೆಯಿಂದ ತೆಗೆದುಕೊಂಡರೆ ಸರಿಹೋಗುವುದಿಲ್ಲ, ಅವರು ಕೆಲಸವನ್ನು ಕಲಿಯಬೇಕಾದರೆ ಬಹಳ ದಿವಸಗಳಾಗುತ್ತವೆ" ಎಂದರು. ಒಂದು ವರ್ಷ ಕಳೆಯಿತು. ಇಲಾಖೆಯಿಂದ ತೆಗೆದುಕೊಳ್ಳಬೇಕಾದ ಕಾಲ ಬಂದು, ಸೀನಿಯಾರಿಟಿ ಪ್ರಕಾರ ಕೊಡಬೇಕಾದಾಗ ತಮ್ಮ ನೀತಿಯನ್ನು ಬದಲಾಯಿಸಿ ಇನ್ನು ಮೇಲೆ ಇಲಾಖೆಯಿಂದ ತೆಗೆದುಕೊಳ್ಳುವುದಿಲ್ಲ, ಅಮಲ್ದಾರರನ್ನು ತೆಗೆದುಕೊಳ್ಳುತ್ತೇವೆ ಎಂದರು. ಅಮಲ್ದಾರರ postings ಆಯಿತು. ಇಲಾಖೆಯಲ್ಲಿ ಪ್ರಮೋಷನ್ ಸಿಕುತ್ತದೆಂದ ಕಾದಿದ್ದವರು ಸರ್ಕಾರದ ನೀತಿಯಿಂದ ಬಹಳ ನಿರಾಶರಾದರು. Gazetted Officers ಆಗಿ ಹಾಕಬೇಕಾದರೆ ಅಮಲ್ದಾರರ ರ್‍ಯಾಂಕಿನವರನ್ನು ಹಾಕಿ. 200 ರೂಪಾಯಿ 300 ರೂಪಾಯಿ ಸಂಬಳ ತೆಗೆದುಕೊಳ್ಳತಕ್ಕ ಅಮಲ್ದಾರರನ್ನು ಈ ಹುದ್ದೆಗಳಿಗೆ ಹಾಕಿದರೆ ಹೆಚ್ಚು ಖರ್ಚಾಗುವುದಿಲ್ಲ. ಅದು ಬಿಟ್ಟು 70 ರೂಪಾಯಿ, 80 ರೂಪಾಯಿ 100 ರೂಪಾಯಿ ಈ ರೀತಿ ಸಂಬಳ ಪಡೆಯತಕ್ಕ ಎರಡನೆ ದರ್ಜೆ ಗುಮಾಸ್ತರನ್ನು ಏಕ್‌ದಂ Assistant Sales-tax Officer ಆಗಿ ಮಾಡಿದರೆ, 250 ರೂಪಾಯಿಗಳ ಬೇಸಿಕ್ ಸಂಬಳ ಕೊಡಬೇಕಾದರೆ ಯಾರ ಮನೆ ದುಡ್ಡು ಎಂದು ಕೊಟ್ಟಿರಿ? ಹೆಚ್ಚಿಗೆ ಖರ್ಚಾಗದ ರೀತಿಯಲ್ಲಿ Assistant Sales-tax Officer ಹುದ್ದೆಗಳನ್ನು ಭರ್ತಿ ಮಾಡಬೇಕೇ ಹೊರತು ಹೆಚ್ಚಿಗೆ ಖರ್ಚಾಗಬಾರದು ಎಂದು ಒಂದು ಸಲಹೆಯನ್ನು ಕೊಟ್ಟೆ. ಸರ್ಕಾರದವರು ಆಗ ಅದೇ ರೀತಿಯಾಗಿ ಮಾಡಿದರು. ಇದಾದ ಸ್ವಲ್ಪ ದಿವಸದ ಮೇಲೆ ನಾವು ಏನನ್ನು ಮಾಡಬಾರದು ಎಂದು ಹೇಳಿದೆವೋ ಅದನ್ನೇ ಪುನಃ ಮಾಡಿದ್ದಾರೆ. ನಾನು ಆ ವ್ಯಕ್ತಿಯ ಹೆಸರನ್ನು ಹೇಳುವುದಿಲ್ಲ. ಒಬ್ಬ ಅಧಿಕಾರಿ, ಅದೇ ಇಲಾಖೆಯಲ್ಲಿ under-graduate ಆಗಿ ಇದ್ದಂಥವನನ್ನು Assistant Sales-tax Officer ಮಾಡಿ exemption ಕೊಟ್ಟು confirm ಮಾಡಿದ್ದಾರೆ. ಇದರಲ್ಲಿ ಒಂದು ನೀತಿ ಇರಬೇಡವೇ? ಒಂದು ನೀತಿಯ ಮೇಲೆ ಮಾಡುವಹಾಗಿದ್ದರೆ ಯಾವುದನ್ನಾದರೂ ಮಾಡಿ. ಹಾಗೆ ಯಾವ ಒಂದು ನೀತಿಯನ್ನೂ ಅನುಸರಿಸದೆ, ಟೀಕೆಮಾಡುತ್ತೀರಿ ಎಂದರೆ ಏನು ಪ್ರಯೋಜನ. ಬೇಕಾದವರಿಗೆ ಮಾಡುವುದು. ಒಬ್ಬ I.A.S. ಆಫೀಸರ ಬಂಧು ಎಂದು ಮಾಡಿದರೆ ಅದು ಧರ್ಮವೇ?

*Sri H. M. CHANNABASAPPA (Minister for Industries).—I would like to know if the Hon'ble Member is prepared to give specific cases of injustice on the lines that is now being narrated by the Hon'ble Member.

ಶ್ರೀ ಎಸ್. ಶ್ರೀನಿವಾಸಐಯ್ಯಂಗಾರ್.—ಈಗ ವ್ಯಕ್ತಿ, ಇಂಥವನು ಎಂದು ಗೊತ್ತಿದೆ. ನಾನು ಹೆಸರು ಹೇಳಲು ಇಷ್ಟಪಡುವುದಿಲ್ಲ. ಇಲಾಖೆಯಲ್ಲಿ ಇಂಥ ಅನೀತಿ ಕೆಲಸ ನಡೆಯುತ್ತಿದೆ. ಸರ್ಕಾರದವರು ಕಾನೂನು ಪ್ರಕಾರ, ಒಂದು ಗೊತ್ತಾದ ಪದ್ಧತಿಯ ಪ್ರಕಾರ ಯಾವ ಕೆಲಸವನ್ನೂ ಮಾಡುತ್ತಿಲ್ಲ. ಒತ್ತಾಯಕ್ಕೆ ಅವಕಾಶ ಕೊಡುತ್ತಿದ್ದಾರೆ; influenceಗೆ ಅವಕಾಶಕೊಡುತ್ತಿದ್ದಾರೆ. ಆದುದರಿಂದ ಅದನ್ನು ಮಾಡಬಾರದೆಂದು ಹೇಳುತ್ತಿದ್ದೇನೆಯೇ ಹೊರತು ವ್ಯಕ್ತಿಯ ಹೆಸರನ್ನು ಹೇಳುವುದಕ್ಕೆ ಸಿದ್ಧನಾಗಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀವು ಹೆಸರನ್ನು ಹೇಳಿ, ಅದರಿಂದ ತೊಂದರೆ ಇಲ್ಲ.

Sri S. SRINIVASA IYENGAR.—If the Hon'ble Minister is so anxious, I will give the name. His name is Sir Gangaiya brother of Sri Thipperudriah.

Sri H. M. CHANNABASAPPA.—I would like to submit that Government is anxious to know facts. If he gives out the name, I am not going to take it amiss. On the other hand, it is helpful to find out if there is anything wrong.

Sri A. BHEEMAPPA NAIK.—To take individual cases in the open Assembly is not correct. Government should not try to force names to be brought in on the floor of this House. We are here concerned only with policies.

Sri S. SRINIVASA IYENGAR.- It is not correct. But I did not want to give out names. But when the Hon'ble Minister wanted to know definitely, I had to give the name. I agree we are not concerned with individuals here. We have to comment only on policies of the Government.

ಪ್ರಮೋಷನ್ ಮಾಡತಕ್ಕ ಕಾಲದಲ್ಲಿ ಯಾವುದಾದರೂ ಒಂದು ತತ್ವವಿರಬೇಕು. Assistant Sales-tax Officer ಕೇಡರ್‌ಗೇ ಆಗಲಿ, ಯಾವ ಕೇಡರ್‌ಗೇ ಆಗಲಿ ಒಂದು ಇಲಾಖೆಯಲ್ಲಿ ಪ್ರಮೋಷನ್ ಕೊಡಬೇಕಾದರೆ ಒಂದು ತತ್ವವಿರಬೇಕು. ಪ್ರೊಬೇಷನರುಗಳಿಗೆ ಇಷ್ಟು, ಇಲಾಖೆಯಲ್ಲಿ ಪ್ರಮೋಷನ್ ಕೊಡುವುದಕ್ಕೆ ಇಷ್ಟು, ಎಂದು ಒಂದು ನಿಗದಿ ಮಾಡಿಕೊಂಡು ಅದರಂತೆ ಖಾಲಿ ಬಿದ್ದ ಜಾಗಗಳಿಗೆ ಭರ್ತಿ ಮಾಡಬೇಕು. ಅದು ಬಹಳ ಒಳ್ಳೆಯದು. ಇದಕ್ಕೆ ಏನು percentage ಬೇಕಾದರೂ ಗೊತ್ತುಮಾಡಿ. ಅದು ಆಡಳಿತಕ್ಕೆ ಸಂಬಂಧಪಟ್ಟವಿಷಯ. ಒಂದು ತತ್ವವನ್ನು ಅನುಸರಿಸಬೇಕು. ಅದನ್ನು ಬಿಟ್ಟು ಒತ್ತಾಯಕ್ಕೆ ಮತ್ತು influenceಗೆ ಜಾಗ ಕೊಡಬಾರದು ಎನ್ನುವುದು ಒಂದು.

ಇನ್ನೊಂದು ವಿಷಯ ಮಾರಾಟ ತೆರಿಗೆಯನ್ನು assess ಮಾಡುತ್ತಾರಲ್ಲ ಅದರಲ್ಲಿ ದೊಡ್ಡ ದಾಂಧಲೆ ನಡೆಯುತ್ತದೆ. ಅದನ್ನು ತಡೆಯುವುದಕ್ಕಾಗುವುದಿಲ್ಲ. ಸಣ್ಣ ಸಣ್ಣ ಹಿಟ್ಲರ್‌ಗಳ ಅವಾಂತರವನ್ನು ತಡೆಯುವುದಕ್ಕಾಗುವುದಿಲ್ಲ. ಈ Assistant Sales-tax ಆಫೀಸರುಗಳ ಬಳಿ ಹೋಗಿ ಬಂದ ವರ್ತಕರು ಅವರು ಪಡುವ ಕಷ್ಟವನ್ನು ಹೇಳುತ್ತಾರೆ. ಅವರೇನೋ ಶಕ್ತಿ ಮೀರಿ ದುಡಿದು ಬೇಕಾದ ಹಾಗೆ ಸಂಪಾದಿಸುತ್ತಾರೆ.

(SRI S. SRINIVASA IYENGAR.)

ಆದರೆ ಈ Assistant Sales-tax Officer ಗಳಿಗೆ ಲೆಕ್ಕಗಳನ್ನೊಪ್ಪಿಸಿ, ಅವರನ್ನು ಅನುಕರಣೆ ಮಾಡಿಕೊಂಡು ಹೋಗತಕ್ಕ ಕೆಲಸ ಬಹಳ ಕ್ಲಿಷ್ಟವಾದುದು ಎಂದು ಹೇಳುತ್ತಾರೆ. ಇಷ್ಟು ಅಕ್ರಮಗಳು ಜರುಗುತ್ತಿವೆ ಎಂದು ತಿಳಿದಿದ್ದೇನೆ. Preliminary assessment ಇದೆಯಲ್ಲ ಅದನ್ನು ಹೆಚ್ಚಿಗೆ ಹಾಕಿದರೆ ಆಶ್ರಯ ಮಾಡುವುದಕ್ಕೆ ಬರುತ್ತಾರೆಂದು ಹೆಚ್ಚಿಗೆ ಹಾಕುತ್ತಾರೆ. ಅನಂತರ final assessmentನಲ್ಲಿ ಕಡಿಮೆ ಹಾಕುತ್ತಾರೆ. Preliminary assessment ಎಷ್ಟು ಹಾಕಿದ್ದಾರೆ, final assessment ಎಷ್ಟಕ್ಕೆ ಇಳಿದಿದೆ ಎಂಬುದನು ಯಾರು ನೋಡಿದ್ದಾರೆ? ಇದನ್ನು ಇಲಾಖೆಯವರು ನೋಡಬೇಕು. Preliminary assessment, provisional assessment ಏನು ದಾಖಲ್ಮಾಡಿದ್ದಾರೆ, final assessment ಏನು ದಾಖಲಾಗಿದೆ ಎಂಬುದನ್ನು ಪರೀಕ್ಷೆ ಮಾಡಬೇಕು. ಸರ್ಕಾರದವರು ಎರಡೆರಡು ಕೇಸುಗಳನ್ನು ತೆಗೆಸಿ ನೋಡಿದರೆ ಆಗ ನಾನು ಹೇಳಿದ ಮಾತುಗಳಲ್ಲಿ ಸಂಪೂರ್ಣ ನಿಜವಿದೆ ಎನ್ನುವುದು ಗೊತ್ತಾಗುತ್ತದೆ. ಇದರಿಂದ ಯಾರಿಗೆ ನಷ್ಟವೆಂಬುದನ್ನು ನೋಡಬೇಕು. Provisional assessment ಹೆಚ್ಚಾಗಿದ್ದು final assessment ಬಹಳ ಕಡಿಮೆ ಇದ್ದರೆ ನಷ್ಟವಾದದ್ದು ಯಾರಿಗೆ? ಸರ್ಕಾರಕ್ಕೇ ತಾನೇ? ಇದಕ್ಕೆ ಕಾರಣರು Sales-tax Officer ಮತ್ತು Assistant Sales-tax Officer ಎಂದು ತಾವೇ ತಿಳಿದುಕೊಳ್ಳಬಹುದು. ಆದುದರಿಂದ ಇದಕ್ಕೆ ಏನಾದರೂ ಒಂದು ಹತೋಟಿ ಇಟ್ಟುಕೊಳ್ಳಬೇಕು. Provisional Assessmentಗೂ final assessmentಗೂ ಬಹಳ wide variations ಇದ್ದರೆ ಏನು ಕಾರಣದಿಂದ ಆಗಿರಬಹುದು ಎನ್ನುವುದನ್ನು ಸರ್ಕಾರದವರು ತಿಳಿದುಕೊಳ್ಳಲು ಹತೋಟಿಯನ್ನಿಟ್ಟುಕೊಂಡು ಆಗಾಗ್ಗೆ ತನಿಖೆ ಮಾಡಿದರೆ ವರಮಾನವು ಹೆಚ್ಚಾಗುತ್ತದೆ.

ಶ್ರೀಮಾನ್ ರಾಜಶೇಖರ ಮೂರ್ತಿಗಳು ರೇಷ್ಮೆ ಗೂಡಿನ ಮೇಲೆ ಮಾರಾಟದ ತೆರಿಗೆಯನ್ನು ಹಾಕುವ ವಿಷಯವನ್ನು ಹೇಳುತ್ತಿದ್ದರು. ಅದನ್ನು ಸರಿಯಾಗಿ ವಿವರಣೆ ಮಾಡುತ್ತೇನೆ. ಹಳ್ಳಿಗಳಲ್ಲಿ ನಾವೆಲ್ಲ ರೇಷ್ಮೆ ಗೂಡನ್ನು ಬೆಳೆಸುತ್ತೇವೆ. ಸಾಮಾನ್ಯವಾಗಿ ಹಿಪ್ಪುನೇರಳೆ ತೋಟವನ್ನು ಇಟ್ಟುಕೊಂಡಿರುವವರು ರೇಷ್ಮೆ ಗೂಡನ್ನು ಬೆಳೆಸುತ್ತಾರೆ. ಸ್ವಂತವಾಗಿ ಹಳ್ಳಿಯಲ್ಲಿರತಕ್ಕ ಚರಕದಲ್ಲಿ ರೇಷ್ಮೆ ತೆಗೆಯಬೇಕಾದರೆ ಅದಕ್ಕೆ ತೊಂದರೆ ಇಲ್ಲ. ನಾವೇ ರೇಷ್ಮೆಯನ್ನು ತೆಗೆದು ಅದನ್ನು ಬಿಕರಿ ಮಾಡುತ್ತೇವೆ. Silk Filaturesಗೆ ಗೂಡು ಬೇಕು. ಅವರಿಗೆ ಗೂಡು ಬೇಕಾದರೆ ಒಂದು ಪದ್ಧತಿ ಮಾಡಿಕೊಂಡು ದಳ್ಳಾಳಿಗಳನ್ನು ಗೊತ್ತುಮಾಡಿಕೊಂಡಿದ್ದಾರೆ. ಈ ದಳ್ಳಾಳಿಗಳು ಏನುಮಾಡುತ್ತಾರೆಂದರೆ ಹಳ್ಳಿ ಹಳ್ಳಿಗೆ ಹೋಗಿ ರೇಷ್ಮೆ ಗೂಡನ್ನು (cocoons) ಕೊಂಡುಕೊಂಡು ಫ್ಯಾಕ್ಟರಿಗೆ ತಂದು ಕೊಡುತ್ತಾರೆ. ಫ್ಯಾಕ್ಟರಿಯವರು ಈ ದಳ್ಳಾಳಿಗಳಿಗೆ ನೂರು ರೂಪಾಯಿಗಳಿಗೆ ಒಂದು ರೂಪಾಯಿ ಕಮಿಷನ್ ಕೊಡುತ್ತಾರೆ. ಸಿಲ್ಕ್ ಫ್ಯಾಕ್ಟರಿಗೆ ಹತ್ತಾರು ದಳ್ಳಾಳಿಗಳಿದ್ದಾರೆ. ಫ್ಯಾಕ್ಟರಿಗೆ ಬೇಕಾದ ಗೂಡುಗಳನ್ನು ದಳ್ಳಾಳಿಗಳು ಸುತ್ತಮುತ್ತಲಿನ ಎಲ್ಲ ಗ್ರಾಮಗಳನ್ನೂ ತಿರುಗಿ, ಕೊಂಡುಕೊಂಡುಬಂದು ಫ್ಯಾಕ್ಟರಿಗೆ ಕೊಡುತ್ತಾರೆ. ಕಾನೂನು ಪ್ರಕಾರ ಅಂಥ ದಳ್ಳಾಳಿಗಳು ಸಿಲ್ಕ್ ಫ್ಯಾಕ್ಟರಿಗೆ ಕೊಟ್ಟಿರತಕ್ಕ ವ್ಯಾಪಾರದ ಮೇಲೆ ಸೇಕಡ ರೂ. 1-9-0 ಅಥವಾ ರೂಪಾಯಿ ಒಂದಕ್ಕೆ ಮೂರು ಕಾಸಿನಂತೆ 1949ನೆ ಇಸವಿಯಿಂದ ತೆರಿಗೆ ಕೊಡಬೇಕು ಎಂದು ನೋಟೀಸ್ ಕೊಟ್ಟಿದ್ದಾರೆ.

1-30 P.M.

ಅವರು ಮಾಡಿರುವುದು ದಳ್ಳಾಳಿ ವ್ಯಾಪಾರ, 1949ನೆಯ ಇಸವಿಯಿಂದ ಮಾಡಿರುವ ವ್ಯಾಪಾರದ ಮೇಲೆ ಹಾಕಿದ್ದಾರೆ. ದೊಡ್ಡ ವ್ಯಾಪಾರಸ್ತರು ಸುಮಾರು 8-10 ಲಕ್ಷ ರೂಪಾಯಿಗಳ ವ್ಯಾಪಾರ ಮಾಡಿರುತ್ತಾರೆ. ಅದಕ್ಕೆಲ್ಲಾ ಕೇಂದ್ರಸರ್ಕಾರಕ್ಕೆ ತೆರಿಗೆಕೊಡಬೇಕೆಂದು ಒಂದು ನೀತಿಯನ್ನನುಸರಿಸಿ ಹಿಂದಿನದಕ್ಕೆಲ್ಲಾ ಒಟ್ಟಿಗೆ ಒಂದುಸಲ ಕೇಳಿದರೆ ಹಾಗೆ ಕೊಡುವುದಕ್ಕಾಗುವುದಿಲ್ಲ. ಅವರಿಗೆ ತಾವು ಹೇಳುವಷ್ಟು ಕಮಿಷನ್ ಬಂದಿರುವುದಿಲ್ಲ. ಅದೂ ಅಲ್ಲದೆ ಕೊಂಡುಕೊಳ್ಳುವಾಗ ಸಿಲ್ಕ್ ಫ್ಯಾಕ್ಟರಿಯವರೇ ಕೊಡಬೇಕಾಗಿತ್ತು. ದಳ್ಳಾಳಿಗಳಿಗೆ ಹಾಕಿ ಅವರ ಮನೆ ಹರಾಜು ಮಾಡುವುದು ಬೇಡ. ಇದನ್ನು ಸರ್ಕಾರ ಬಹಳ ಸಹಾನುಭೂತಿಯಿಂದ ವಿಮರ್ಶೆಮಾಡಿ ಅವರಿಗೆ ಪರಿಹಾರ ನೀಡಬೇಕು. ಹಿಂದಿನ ತೆರಿಗೆ ವಜಾ ಮಾಡಬೇಕು. ಮುಂದೆ ಕೊಡಬೇಕೆಂದು ಹೇಳಬಹುದು. ಕಮಿಷನ್ ವ್ಯಾಪಾರ ಮಾಡುವವರಿಗೆ ರಿಯಾಯಿತಿ ಮಾಡಬೇಕೆಂದು ನಾನು ಹೇಳುತ್ತಿಲ್ಲ. ಇಷ್ಟು ತೆರಿಗೆ ಹಿಂದಿನಿಂದ ಹಾಕುತ್ತೀರೆಂಬುದು ಅವರಿಗೆ ಗೊತ್ತಿರಲಿಲ್ಲ. ಗ್ರಾಮದಲ್ಲಿರುವವನಿಗೆ ಸೇಲ್ಸ್‌ಟ್ಯಾಕ್ಸ್ ಕಾನೂನು ವಿಚಾರವೇ ಗೊತ್ತಿಲ್ಲ. 1950ನೆಯ ಇಸವಿಯಲ್ಲೇ ಏಕೆ ಡಿಮ್ಯಾಂಡ್ ಹಾಕಿ ವಸೂಲುಮಾಡಲಿಲ್ಲ? ಹಾಗೆ ಮಾಡದೆ ಈಗ 1949ರಿಂದ ಕೊಡಬೇಕೆಂದು ಹೇಳುವುದರಿಂದ ತೆರಿಗೆ ಹಣ ಹೆಚ್ಚಾಯಿತು. ಆದ್ದರಿಂದ ಇಂಥ ವಿಷಯವನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕು.

ಎರಡನೆಯದು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ವಿಷಯ. ಸ್ವಾಮಿ, ಸಿನಿಮಾಕ್ಕೆ ಈ ತೆರಿಗೆ ಹಾಕಿದ್ದಾರೆ. ಸಿನಿಮಾಕ್ಕೆ ನಾವು ಹೋದರೆ ಟಿಕೆಟ್ ದರದಲ್ಲೇ ತೆರಿಗೆ ಸೇರಿರುವುದರಿಂದ ಅದನ್ನು ತೆಗೆದುಕೊಂಡಾಗಲೇ ಆ ತೆರಿಗೆ ಕೊಡುತ್ತೇವೆ. ಇಲ್ಲಿ ಕೊಡುವ ತೆರಿಗೆಯಲ್ಲದೆ ಅಲ್ಲೂ ಕೊಡಬೇಕು. ಇದನ್ನು ವಸೂಲು ಮಾಡುವವರು ಸಿನಿಮಾದವರು. ಅವರು ಎಷ್ಟುಮಟ್ಟಿಗೆ ಎಲ್ಲೆಲ್ಲಿ ಮೋಸ ಮಾಡಬಹುದೋ ಅಲ್ಲೆಲ್ಲಾ ಮಾಡಲು ಪ್ರಯತ್ನಿಸುತ್ತಾರೆ. ಹೇಗೆಂದರೆ ಟಿಕೆಟ್ ಕೊಟ್ಟರೆ ತಾನೆ ಸ್ಟ್ಯಾಂಪ್ ಹಾಕಬೇಕಾದದ್ದು ಎಂದು ಅವರು ಪಾಸು ಕೊಟ್ಟು ತೆರಿಗೆ ತಪ್ಪಿಸಿಕೊಳ್ಳುತ್ತಾರೆ. ಹಾಗೆ ಮಾಡಿದಾಗ ಯಾರಿಗೂ ತೆರಿಗೆ ಬೀಳುವುದಿಲ್ಲ. ಇದರಿಂದ ನೂರು ರೂಪಾಯಿಗಳ ತೆರಿಗೆ ಬಂದರೆ 87-8-0 ರೂಪಾಯಿ ಸ್ಥಳೀಯ ಸಂಸ್ಥೆಗಳಿಗೂ 12-8-0 ರೂಪಾಯಿ ಸರ್ಕಾರಕ್ಕೂ ಹೋಗುತ್ತದೆ. ಸಿಬ್ಬಂದಿ ಖರ್ಚು ವಗೈರೆಗಾಗಿ ಸರ್ಕಾರ ಕೊಂಚಭಾಗ ಇಟ್ಟುಕೊಳ್ಳುತ್ತದೆ. ನಾಲ್ಕೈದು ವರ್ಷಗಳಿಂದ ಸ್ಥಳೀಯ ಸಂಸ್ಥೆಗಳಿಗೆ ಎಷ್ಟು ಕೊಡಬೇಕಾಗಿತ್ತೋ ಅಷ್ಟನ್ನು ಕೊಟ್ಟಿಲ್ಲ. ಕಾರಣ ಕೇಳಿದರೆ ಲೆಕ್ಕ ಸಮಜಾಯಿಷಿಯಾಗಿಲ್ಲವೆಂದು ಹೇಳುತ್ತಾರೆ. ಸ್ಥಳೀಯ ಸಂಸ್ಥೆಗಳಿಗೆ ಈ ವರಮಾನ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆಯೇ ವಿನಾ ಅದರ ಮೇಲೆ ಉಸ್ತುವಾರಿ ನೋಡಲು ಸಿನಿಮ್ಯಾಟೋಗ್ರಾಫ್ ಆಕ್ಟ್ ಪ್ರಕಾರ ಅಧಿಕಾರವಿಲ್ಲ. ಈ ರೀತಿ ಸಿನಿಮಾಗಳಿಂದ ಬರಬೇಕಾದ ತೆರಿಗೆ ಪೂರ್ಣವಾಗಿ ಬರಲು ಟಿಕೆಟ್‌ಗಳಿಗೆ ಎಂಬಾಸ್ ಮಾಡಬೇಕು. ಸರ್ಕಾರದಲ್ಲಿ ಸ್ಟ್ಯಾಂಪ್ ತಯಾರಿಸುವವರೇ ಎಂಬಾಸ್ ಮಾಡುವಂತೆ ಬೇಕಾದ ರೀತಿಯಲ್ಲಿ ರೂಲ್ಸ್ ಮಾಡಿಕೊಳ್ಳಿ. ಹಾಗೆ ಮಾಡದ ತೆರಿಗೆಯ ಮೊತ್ತವನ್ನು

ಪೂರ್ಣವಾಗಿ ಕಟ್ಟಬೇಕಾಗಿ ಆಗ ಲೆಕ್ಕ ಗೊತ್ತಾಗುತ್ತದೆ. ತಕ್ಷಣ ಸ್ಥಳೀಯಸಂಸ್ಥೆಗಳ ಭಾಗ ಕೊಡಬೇಕಾದ್ದನ್ನು ಕೊಡಬಹುದು. ಟಿಕೆಟ್ ಹಿಂದೆ ಸ್ಟ್ಯಾಂಪ್ ಅಂಟಿಸದಿದ್ದರೆ ಹೇಗೆ ತೆರಿಗೆ ಬರುತ್ತದೆ?

ಶ್ರೀ ಎ. ಭೀಮಪ್ಪನಾಯಕ್.—ಅವರು ಅದನ್ನು ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಆ ವಿಷಯ ನಾನು ಹೇಳುತ್ತೇನೆ. 16 ವರ್ಷಗಳು ನಾನು ಪ್ರೆಸಿಡೆಂಟಾಗಿದ್ದೆ. ಎಷ್ಟುಮಟ್ಟಿಗೆ ಅವರು ಮಾಡುತ್ತಾರೆಂಬುದನ್ನು ಕಣ್ಣಾರೆ ನೋಡಿದ್ದೇನೆ. ಸ್ಟ್ಯಾಂಪ್ ಅಂಟಿಸುವುದನ್ನು ತಪ್ಪಿಸಿಕೊಳ್ಳುವ ಉದಾಹರಣೆಗಳು ಬೇಕಾದಷ್ಟಿವೆ. ಅದನ್ನು ತಪ್ಪಿಸಲು ಎಂಬಾಸ್ ಮಾಡುವುದು ಮೊದಲನೆಯದು. ಎರಡನೆಯದು ಸ್ಥಳೀಯ ಸಂಸ್ಥೆಗಳಿಗೆ ಕೊಡಬೇಕಾದ ತೆರಿಗೆ ಭಾಗ ಕೂಡಲೆ ಕೊಡುವುದಕ್ಕೆ ಎಂಬಾಸ್ ಮಾಡುವುದರಿಂದ ಲೆಕ್ಕವಿರುತ್ತದೆ. ಮೂರನೆಯದು ಗೇಟ್‌ಪಾಸು ಕೊಟ್ಟು ಟಿಕೆಟ್ ಕೊಡದೆ ಮೋಸಮಾಡುವುದನ್ನು ತಪ್ಪಿಸಲು ಸ್ಥಳೀಯಸಂಸ್ಥೆಗಳಿಗೆ ಮೇಲ್ವಿಚಾರಣೆಗೆ ಸ್ವಲ್ಪ ಅವಕಾಶ ಮಾಡಬೇಕು; ಈಗ ಅದಕ್ಕೆ ಅವಕಾಶವಿಲ್ಲ. ಸಿನಿಮ್ಯಾಟೋಗ್ರಾಫ್ ಆಕ್ಟ್ ಪ್ರಕಾರ ಈಗ ಡಿಸ್ಟ್ರಿಕ್ ಮ್ಯಾಜಿಸ್ಟ್ರೇಟರಿಗೆ ಮಾತ್ರ ಅಧಿಕಾರವಿದೆ. ಅವರು ಬೇಕಾದರೆ ಅದನ್ನು ಯಾರಿಗಾದರೂ ಡೆಲಿಗೇಟ್ ಮಾಡಬಹುದೆಂದಿದೆ. ಎರಡುವರ್ಷಗಳ ಕೆಳಗೆ ಹೊಸದಾಗಿ ಸರ್ಕ್ಯುಲರ್ ಹೊರಡಿಸಿ ಗುಮಾಸ್ತೆಗೆ ಆ ಅಧಿಕಾರವನ್ನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೊಡಬಹುದೆಂದು ಸೂಚಿಸಿದರು. ಆದರೆ ಅದು ಎಫೆಕ್ಟಿವ್ವಾಗಿಲ್ಲ. ಅದರ ಬದಲು ಆಕ್ಟನ್ನೇ ತಿದ್ದುಪಡಿ ಮಾಡುವುದು ಸೂಕ್ತ.

ಮೂರನೆಯದು ರೇಸ್‌ಕೋರ್ಸ್ ವಿಚಾರ. ಇದನ್ನು ಹೆಚ್ಚಾಗಿ ಹೇಳುವುದಿಲ್ಲ, ಈಗಾಗಲೆ ಕೆಲವರು ಹೇಳಿದ್ದಾರೆ. ಆದರೆ ಶ್ರೀ ರಾಜಶೇಖರಮೂರ್ತಿಯವರು ಸರಿಯಾಗಿ ಹೇಳಲಿಲ್ಲ. ಬೆಂಗಳೂರು ರೇಸ್ ಕ್ಲಬ್ ಪ್ರೈವೇಟ್ ಸಂಸ್ಥೆ, ಅದು ಲಿಮಿಟೆಡ್ ಸಂಸ್ಥೆಯಲ್ಲ. ಅದಕ್ಕೆ ಲೈಸೆನ್ಸ್ ಕೊಡಲು ಸರ್ಕಾರಕ್ಕೆ ಅಧಿಕಾರವಿದೆ. ಆ ರೀತಿ ರೇಸ್‌ಕೋರ್ಸ್ ಆಕ್ಟಿನಲ್ಲಿ ನಮೂದಾಗಿದೆ. ಅದರ ಪ್ರಕಾರ ಲೈಸೆನ್ಸ್ ಕೊಡುತ್ತಾರೆ ಅದಕ್ಕೆ ಕಂಡೀಷನ್ಸ್ ಇವೆ. ಆ ಸಂಸ್ಥೆಯನ್ನು ಬೆಂಗಳೂರಿನಲ್ಲಿ ಕುದುರೆ ಜೂಜು ನಡೆಯುವುದನ್ನು ಮತ್ತು ಅದಕ್ಕೆ ಸಂಬಂಧಪಟ್ಟಿರುವ ವಿಷಯವನ್ನು ನೋಡಿ ಅದರಮೇಲೆ ನಿಗಾ ಇಡಬೇಕೆಂದು ಮಾಡಿದರು; ರೇಸ್‌ಕೋರ್ಸ್ ಕುದುರೆ ಸಾಕುವುದಕ್ಕೆ ಮತ್ತು ಇತರ ಟೆಕ್ನಿಕಲ್ ಮ್ಯಾಟರ್ಸ್ ನೋಡಿಕೊಳ್ಳಲು ಮಾಡಿದರು. ಅದಕ್ಕೆ ಸರ್ಕಾರಿ ಜಾಗ ಕೊಟ್ಟು ಒಂದು ಒಪ್ಪಂದ ಮಾಡಿಕೊಂಡರು. ಕೆಲವು ಕಾಲವಾದ ಮೇಲೆ ಅದರ ಮೇಲೆ ಸ್ವಲ್ಪ ಆಡಳಿತ ಹೆಚ್ಚಿ ಆ ವಿಚಾರ ಚರ್ಚೆಗೆ ಬಂತು. ಈಗ ರೇಸ್‌ಕೋರ್ಸ್ ಸಂಸ್ಥೆಯವರು ಅವರ ಆಡಳಿತವನ್ನೆಲ್ಲಾ ಬೈಲಾಕ್ಕೆ ಅನುಸಾರವಾಗಿ ಮಾಡುತ್ತಾರೆ. ಬೈಲಾ ಬದಲಾಯಿಸುವುದಕ್ಕೆ ಜನರಲ್ ಬಾಡಿಗೆ ಅಧಿಕಾರವಿದೆಯೆ ಅಥವಾ ಸರ್ಕಾರ ಮಾರ್ಪಾಡು ಮಾಡಬಹುದೆ ಎಂಬ ವಿಷಯ ಚರ್ಚೆಗೆ ಬಂತು. ಅದು ಏತರಿಂದ ಬಂತು ಎಂದರೆ ರೇಸ್‌ಕೋರ್ಸ್ ಸಂಸ್ಥೆಯವರು ತಮ್ಮ ಬೈಲಾ ಬದಲಾಯಿಸಿ ಸರ್ಕಾರಕ್ಕೆ ಅಪ್ರೂವಲ್‌ಗೆ ಕಳುಹಿಸುತ್ತಾರೆ. ಆದರೆ ಒಂದು ಸಂಸ್ಥೆ ತನ್ನ ಬೈಲಾ ಪ್ರಕಾರ ಕೆಲಸ ಮಾಡುವಾಗ ಅವರ ತಿದ್ದುಪಡಿಯನ್ನೇಕೆ ಸರ್ಕಾರದ ಅಪ್ರೂವಲ್‌ಗೆ ಕಳುಹಿಸಬೇಕು? ಕಳುಹಿಸಬೇಕಾಗಿರಲಿಲ್ಲ. ಅದು ಖಾಸಗಿ ಸಂಸ್ಥೆ, ಬೈಲಾಕ್ಕನುಗುಣವಾಗಿ ಆಡಳಿತ ನಡೆಸುತ್ತಿದೆ, ಬೈಲಾ ಮಾಡುವ ಅಧಿಕಾರ ಜನರಲ್ ಬಾಡಿಗಿದೆ, ಜನರಲ್ ಬಾಡಿಯಲ್ಲಿರುವವರು ರೇಸ್‌ಕೋರ್ಸ್ ಸಂಸ್ಥೆ ಮೆಂಬರಾಗಿರುವರು, ಆದ್ದರಿಂದ ಅವರು ಬೈಲಾ ಬದಲಾವಣೆ ಮಾಡುವುದಕ್ಕೂ ಸರ್ಕಾರಕ್ಕೂ ಸಂಬಂಧವಿಲ್ಲ ಎಂದು ಹೇಳಿದರು. As approved by Government ಎಂದು ಇರುವುದರಿಂದ ಬೈಲಾ ಬದಲಾವಣೆ ಮಾಡಿದ್ದನ್ನು ಸರ್ಕಾರದಅನುಮತಿಗೆ ಕಳುಹಿಸಬೇಕು, ಅವರು ಅದನ್ನು ಒಪ್ಪಬೇಕು ಎಂದು ಅರ್ಥವಾಗುತ್ತದೆ. ಸರ್ಕಾರದ ಅನುಮತಿಯಿಲ್ಲದೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ, ಅದು ರಿಜಿಸ್ಟರ್ಡ್ ಸಂಸ್ಥೆಯಲ್ಲ. ಕೆಲವು ಬದಲಾವಣೆ ಮಾಡಿದರೆ ಅನುಕೂಲ ಎಂದು ಹೇಳಿದರು. ಅದನ್ನು ಜನರಲ್‌ಬಾಡಿ ಒಪ್ಪಲಿಲ್ಲ. ಆ ಸಮಿತಿಯಲ್ಲಿ ಅವರು ನಿರ್ವಾಹ ಮಾಡುವ ಕೆಲಸ ಕಾರ್ಯ ಸುಗಮವಾಗಿ ನಡೆಯಲೆಂಬ ದೃಷ್ಟಿಯಿಂದ ಬೈಲಾಕ್ಕೆ ಬದಲಾವಣೆ ಸೂಚನೆ ಮಾಡಲಾಯಿತು, ಹಾಗೆ ಮಾಡದಿದ್ದರೆ ಮೈಸೂರು ದೇಶದಲ್ಲಿ ರೇಸು ನಡೆಯುವ ಮಾತೇ ಬೇಡ, ಕುದುರೆ ಜೂಜೇ ತಪ್ಪಿಹೋಣ, ಅದರಿಂದ ಸಾವಿರಾರು ಜನಕ್ಕೆ ಅನಾನುಕೂಲವಾಗುತ್ತದೆ ಎಂದು ಹೇಳಿದರು.

Sri D. DEVARAJ URS (Hunsur).—The Hon'ble Member may give us more details.

Mr. SPEAKER.—Is the Hon'ble Member a member of the committee?

Sri S. SRINIVASA IYENGAR.—Yes, Sir; that is why I am in a better position to place facts before the House.

ಶ್ರೀ ಎ. ಭೀಮಪ್ಪನಾಯಕ್.—ಅದನ್ನು ಬೇರೆ ಕಾಲದಲ್ಲಿ ಹೇಳಿ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಇತರ ವಿಧವಾದ ವರಮಾನಗಳು ಎಂಬ ಬಾಬಿನಲ್ಲಿ ರೇಸ್ ಕೋರ್ಸ್‌ನಿಂದ ಏನು ವರಮಾನ ಬರಬಹುದಾಗಿತ್ತೋ ಆ ವರಮಾನ 1956-57ಕ್ಕೆ ಬರುವುದಿಲ್ಲ ಎಂದು 1956-57ರ ಬಡ್ಜೆಟ್ ಎಸ್ಟಿಮೇಟಿನಲ್ಲಿ ನಮೂದಾಗಿದೆ. ಏಕೆ ಬರುವುದಿಲ್ಲ ಅಂದರೆ ಕುದುರೆ ಜೂಜು ಮೈಸೂರು ಸಂಸ್ಥಾನದಲ್ಲಿ ಈ ವರ್ಷ ನಡೆಸಲು ಅನುಮತಿ ಕೊಡುವುದಿಲ್ಲವೆಂದು ಸರ್ಕಾರದವರು ಹೇಳಿದ್ದಾರೆ. ಯಾವಾಗ ಜೂಜು ನಡೆಯುವುದಿಲ್ಲವೋ ಆಗ ವರಮಾನ ಬರುವುದಿಲ್ಲ. ಇದರಿಂದ ಇತರ ವಿಧವಾದ ತೆರಿಗೆ ಹಾಕಬೇಕಾಗುತ್ತದೆ.

ಆಮೇಲೆ ಬೆಂಗಳೂರಿನಲ್ಲಿ ಕಾರ್ಯ ನಿರ್ವಾಹ ಮಾಡುತ್ತಿರುವ ರೇಸ್‌ಕೋರ್ಸ್ ಸಂಸ್ಥೆ ದಕ್ಷಿಣ ಇಂಡಿಯಾದ ರೇಸ್ ಟರ್ಫ್ ಕ್ಲಬ್ ಎಂದೇನು ಮದರಾಸಿನಲ್ಲಿದೆಯೋ ಅದಕ್ಕೆ ಅಸೋಸಿಯೇಟಾಗಿದೆ. ಮದರಾಸು ಮತ್ತು ಬಂಗಾಳದಲ್ಲಿರುವ ಸಂಸ್ಥೆಗಳನ್ನನುಸರಿಸಿ ಕುದುರೆ ಜೂಜನ್ನು ನಡೆಸುತ್ತಿದೆ. ಈ ರೇಸ್‌ಕೋರ್ಸ್ ಕ್ಲಬ್ಬಿಗೆ ಒಂದು ಕಾರ್ಯನಿರ್ವಾಹಕ ಸಮಿತಿಯಿದೆ. ಅದಕ್ಕೆ ಶ್ರೀಮನ್ಮಹಾರಾಜರು ಒಬ್ಬ ಪ್ರತಿನಿಧಿಯನ್ನು ಕಳುಹಿಸುತ್ತಾರೆ. ಸರ್ಕಾರದವರೂ ಪ್ರತಿನಿಧಿ ಕಳುಹಿಸುತ್ತಾರೆ. ಸರ್ಕಾರದ ಪ್ರತಿನಿಧಿಯೂ ಕಾರ್ಯ ನಿರ್ವಾಹಕ ಸಮಿತಿಯಲ್ಲಿದ್ದಾರೆ. ಅವರೆಲ್ಲಾ ಸೇರಿ ಒಂದು ತೀರ್ಮಾನ ಮಾಡಬೇಕು. ಅವರ ಕಾರ್ಯ ಕಲಾಪ ಆ ಸಮಿತಿಯ ತೀರ್ಮಾನಕ್ಕೆ ಒಳಪಟ್ಟಿದೆ. ಆ ಸಮಿತಿ ವ್ಯವಹಾರ ಜನರಲ್‌ಬಾಡಿ ಮೀಟಿಂಗಿನ ಹತೋಟಿಗೆ ಒಳಪಟ್ಟಿದೆ. ಸರ್ಕಾರದಿಂದ ನಿಯಮಿತವಾದ

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್).

ಪ್ರತಿನಿಧಿ ಸರ್ಕಾರಕ್ಕೆ ಯಾವ ವಿಧವಾದ ವರದಿಗಳನ್ನೂ ಸಹ ಬಹಳ ದಿವಸಗಳಿಂದ ಕೊಟ್ಟಿಲ್ಲ. ಅದರಲ್ಲಿ ಮೆಂಬರಾಗಿರುವವರೊಬ್ಬರು ವಿಷಯ ಹೇಳಿದರು. ಈಗೇಕೆ ಈ ಪ್ರಶ್ನೆ ಬಂದಿದೆಯೆಂದರೆ ಈಗ ಎರಡನೆಯ ವರ್ಷದಲ್ಲಿ ಬೆಟ್ಟಿಂಗ್ ಟ್ಯಾಕ್ಸ್ ಸೇಕಡ 25 ಹಾಕಿತ್ತು. ಕುದುರೆ ಜೂಜು ಕಡಮೆಯಾಗಿಲ್ಲ, ಸಾವಿರಾರುಜನ ಬರುತ್ತಿದ್ದಾರೆ, ಹೋಟಲುಗಳಲ್ಲಿ ಜಾಗವೇ ಇಲ್ಲ. ಇಷ್ಟಿದ್ದರೂ ತೆರಿಗೆ ಕಡಮೆಯಾಗುವುದಕ್ಕೆ ಷುರುವಾಯಿತು, ಹಿಂದೆ 1946-47ರಿಂದ ಬಡ್ಜೆಟ್ ಅಂಕಿಅಂಶ ನೋಡಿದರೆ ಕಡಮೆ ತೆರಿಗೆಯಿದ್ದಾಗ ಹೆಚ್ಚು ವರಮಾನವಿತ್ತು. ಶ್ರೀ ಮರಿಯಪ್ಪನವರು ಹಿಂದೆ ಹೇಳಿದ್ದೂ ನಿಜ, ಬೈಪಾಸ್ ಆಗುತ್ತಿದೆ. ತೆರಿಗೆ ಹೆಚ್ಚಾಗಿ ಕೊಡಬೇಕೆಂದು ಹಿಂದು ಮುಂದೆ ನೋಡುತ್ತಾರೆ. ತೆರಿಗೆ ಹೆಚ್ಚಾದರೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಶೇಕಡ 12½ ತೆರಿಗೆಯಿದ್ದಾಗ 18-19 ಲಕ್ಷ ರೂಪಾಯಿಗಳ ವರಮಾನ ಬರುತ್ತಿತ್ತು, ಶೇಕಡ 25 ರಷ್ಟು ತೆರಿಗೆ ಹಾಕಿದಾಗ 13 ಲಕ್ಷ ರೂಪಾಯಿಗಳ ವರಮಾನ ಬಂತು. ತೆರಿಗೆ ಹೆಚ್ಚಿದರೂ ವರಮಾನವೇಕೆ 5-6 ಲಕ್ಷದಷ್ಟು ಕಡಮೆಯಾಯಿತೆಂದು ಪ್ರಶ್ನೆ ಹಾಕಿದೆ. ಬಕೆಟ್ ಷಾಪ್ ಎಂದು, ಒಳಗೆ ಜೂಜಾಡಿದರೆ ತಾನೆ ತೆರಿಗೆ ಕೊಡಬೇಕಾದದ್ದು ಎಂದು ಹೊರಗಡೆ ಆಡುವುದಕ್ಕೆ ಷುರು ಮಾಡಿದರೆಂದು ಗೊತ್ತಾಯಿತು. ಬುಕ್ಕೀಸ್ ಎಂದಿರುವವರು ಸರಿಯಾಗಿ ತೆರಿಗೆ ವಸೂಲು ಮಾಡುವುದಿಲ್ಲ. ಈ ತೆರಿಗೆ ವಸೂಲು ಮಾಡುವವರು ಬುಕ್ಕೀಸ್, ಅವರು ಸರಿಯಾಗಿ ವಸೂಲು ಮಾಡುವುದಿಲ್ಲ ಎಂದು ಹೇಳುತ್ತಾರೆ. ಬಹುಮಾನ ಕೊಡುವಾಗ ಕೂಡ ಬಹಳ ಅಚಾತುರ್ಯವಾಗಿದೆಯೆಂದು ಹೇಳುತ್ತಾರೆ. ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರವನ್ನು ಕೇಳಿದರೆ, ಅವರು ಪರಿಶೀಲನೆ ಮಾಡುತ್ತೇವೆ ಯಾವ ರೀತಿಯಿದೆಯೆಂಬುದು ನಮಗೆ ಗೊತ್ತಿಲ್ಲ ಎಂದು ಹೇಳಿದರು, ಸುಮ್ಮನಾದೆ. ಅದಕ್ಕೆ ಸಮಿತಿ ಮಾಡಿ ನನ್ನನ್ನೂ ಮೆಂಬರನ್ನಾಗಿ ತೆಗೆದುಕೊಂಡರು. ಆಗ ಚರ್ಚೆಗೆ ಬಂತು. ಗವರ್ನಮೆಂಟ್ ಸ್ಟೂವರ್ಡ್‌ನ್ನು ಕಾಲಕ್ಕೆ ಸರಿಯಾಗಿ ಏಕೆ ವರದಿ ಮಾಡಲಿಲ್ಲವೆಂದು ಕೇಳಲಾಯ್ತು. ಏನು ಹೇಳಿದರೂ ಅದಕ್ಕೆ ಬೆಲೆಯಿಲ್ಲ, ಕಾರ್ಯನಿರ್ವಾಹಕ ಸಮಿತಿಯಲ್ಲಿ ಬಹುಸಂಖ್ಯೆಯು ವಿರೋಧಾಭಿಪ್ರಾಯವಿದೆ. ಆದ್ದರಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರಕ್ಕೆ ಬಹು ಸಂಖ್ಯೆ ಬೆಂಬಲವಿದ್ದರೆ ಅನುಕೂಲವಾಗುತ್ತದೆ. ಆದ್ದರಿಂದ ವರ್ಕ್ಸ್ ಕಮಿಟಿಯಲ್ಲಿ ಸರ್ಕಾರಕ್ಕೆ ಮೆಜಾರಿಟಿಯಿರುವ ಹಾಗೆ ಬೈಲಾ ಅಮೆಂಡ್ ಮಾಡೋಣ ಎಂದು ಸಲಹೆ ಬಂತು. ನಾವು ಅದನ್ನು ಅಮೆಂಡ್ ಮಾಡುವುದಕ್ಕೆ ನಮಗೆ ಅಧಿಕಾರವಿಲ್ಲ. ಈ ಬೈಲಾ ಅಮೆಂಡ್ ಮಾಡುವ ಅಧಿಕಾರ ಯಾವಾಗಲೂ ಜನರಲ್ ಬಾಡಿಗೆ ಸೇರಿದಂಥ ವಿಷಯ. ಆದರೆ ಈ ವಿಷಯವನ್ನು ಇವರು ರೇಸ್ ಕ್ಲಬ್ಬಿನ ಜನರಲ್ ಬಾಡಿ ಮುಂದೆ ಇಡಲಿಲ್ಲ. ಇದಕ್ಕೆ ಹಿಂದಿನಿಂದಲೂ ಏನೋ ಒಂದು ರೀತಿಯಲ್ಲಿ ಈ ಬೈಲಾವನ್ನು ಅಮೆಂಡ್ ಮಾಡಿದಾಗ್ಗೂ ಅದನ್ನು ಅಂಗೀಕಾರ ಮಾಡತಕ್ಕ ಅಥವಾ ಅದನ್ನು ತಿರಸ್ಕಾರ ಮಾಡತಕ್ಕಂಥ ಅಧಿಕಾರವನ್ನು ಸರ್ಕಾರದವರೇ ಇಟ್ಟುಕೊಂಡು ಬಂದಿದ್ದಾರೆ. ಆದರೆ ಇಡೀ ಇಂಡಿಯಾ ದೇಶದಲ್ಲಿ ಈ ಕಾರ್ಯ ನಿರ್ವಾಹವನ್ನು ಇವರು ಬಹಳ ದಕ್ಷತೆಯಿಂದ ನಡೆಸುತ್ತಿದ್ದಾರೆ ಎಂಬತಕ್ಕಂಥ ಒಂದು ಭರವಸೆ ಈ ದಿವಸ ಸಾರ್ವಜನಿಕರಲ್ಲಿ ಇರುವುದಿಲ್ಲ. ಆ ಒಂದು ದೃಷ್ಟಿಯಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ, ಈ ವ್ಯವಹಾರವನ್ನು ಒಂದು ಭದ್ರವಾದ ತಳಹದಿಯಮೇಲೆ ಉತ್ತಮ ಗೊಳಿಸಲಿ ಎಂಬ ಅಭಿಪ್ರಾಯವನ್ನು ಇಟ್ಟುಕೊಂಡು ನಾವು ಈ ವಿಚಾರಗಳನ್ನೆಲ್ಲಾ ಸರ್ಕಾರದವರು ಪರಿಶೀಲನೆ ಮಾಡಿ ಎಂದು ಕೇಳಿದೆವು. ಆದರೆ ಈಗತಾನೆ ಶ್ರೀ ರಾಜಶೇಖರಮೂರ್ತಿಗಳೇನೋ ಕೆಲವು ವಿಚಾರಗಳನ್ನು ಹೊರಗೆಡವಿದ್ದಾರೆ. ಆ ರೀತಿ ಒಟ್ಟಿನ ಸಂಗತಿಗಳನ್ನು ಗ್ರಹಿಸುವುದಕ್ಕೆ ಅವರಿಗೊಂದು ಅವಕಾಶವಿದೆ. ಆದ್ದರಿಂದ ಅವರು ಆ ವಿಚಾರಗಳನ್ನೆಲ್ಲಾ ಗ್ರಹಿಸಿ ಹಾಗೆ ಹೇಳಿರಬಹುದು. ಆದರೆ ಸಾರ್ವಜನಿಕರಾದ ನಮಗೆ ಆ ವಿಚಾರಗಳಾವುವೂ ಇನ್ನೂ ತಿಳಿದು ಬಂದಿಲ್ಲ. ಅವರು ಒಂದು ಅಂಶವನ್ನು ಹೇಳಿದರು — ಸರ್ಕಾರಿ ಅಧಿಕಾರಿಗಳಾಗಿದ್ದವರೂ ಅದರಲ್ಲಿ ಸದಸ್ಯರುಗಳಾಗಿದ್ದರು ಎಂತಲೋ ಏನೋ ಅರ್ಥಂಬರ್ಥವಾಗಿ ಹೇಳಿದರು. ಆದರೆ ಅದು ಅಷ್ಟೇ ಅಲ್ಲ ಈ ರೇಸ್ ಕ್ಲಬ್ ಎನ್ನುವುದು ಒಂದ ಅನ್‌ರಿಜಿಸ್ಟರ್ಡ್ ಪ್ರೈವೇಟ್ ಇನ್‌ಸ್ಟಿಟ್ಯೂಷನ್. ಆದಕಾರಣ ಈ ಕುದುರೇ ಜೂಜಿನಲ್ಲಿ ಆಸಕ್ತಿ ಇರತಕ್ಕಂಥವರು ಯಾರೇ ಆಗಲಿ ಅವರು ಸರ್ಕಾರಿ ಅಧಿಕಾರಿಗಳೇ ಆಗಿರಲಿ ಅಥವಾ ಖಾಸಗೀ ಜನರೇ ಆಗಿರಲಿ ಇದರಲ್ಲಿ ಸದಸ್ಯರಾಗಿರಲು ಯಾವ ಅಭ್ಯಂತರವೂ ಇಲ್ಲ ಎಂಬುದಾಗಿ ರಿವೈಸ್ ಮಾಡಿದರು. ಆದರೆ ಇದಕ್ಕೆ ಹಿಂದೆ ಈ ರೇಸ್‌ಕ್ಲಬ್ಬಿಗೆ ಅನೇಕ ಮಂದಿ ಸರ್ಕಾರಿ ದೊಡ್ಡ ದೊಡ್ಡ ನೌಕರಿಯಲ್ಲಿರತಕ್ಕಂಥ ಜನರೂ ಕೂಡ ಸದಸ್ಯರಾಗಿದ್ದರು. ಆಗ ಸರ್ಕಾರದವರು ಈ ಸರ್ಕಾರಿ ಅಧಿಕಾರಿಗಳೇಕೆ ಈ ರೇಸ್‌ಕ್ಲಬ್ಬಿನಲ್ಲಿ ಸದಸ್ಯರಾಗಿರಬೇಕು ? ಇವರುಗಳು ಯಾರೂ ಇದರಲ್ಲಿ ಇರಲೇಬಾರದೆಂದು ಒಂದು ಆಜ್ಞೆಯನ್ನು ಹೊರಡಿಸಿದರು. ಆಗ ಸರ್ಕಾರಿ ಆಫೀಸರುಗಳ ಮೆಂಬರ್‌ಷಿಪ್ ಎಲ್ಲಾ ಸೀಜ್ ಆಯಿತು. ಯಾವಾಗ ಅವರಿಗಿದ್ದ ಮೆಂಬರ್‌ಷಿಪ್‌ಸೀಜ್ ಆಗಿ ಹೋಯ್ತೋ ಆಗಲೇ, ಅವರ ಪೈಕಿ ಕೆಲವರು ವರ್ಕಿಂಗ್ ಕಮಿಟಿಯಲ್ಲೂ ಸದಸ್ಯರಾಗಿದ್ದವರು, ಅವರ ಆ ವರ್ಕಿಂಗ್ ಕಮಿಟಿಯಲ್ಲಿದ್ದ ಸದಸ್ಯತ್ವವೂ ಕೂಡ ರದ್ದಾಯಿತು. ಆಮೇಲೆ ಸರ್ಕಾರದವರು ಪುನಃ ಅವರೂ ಸಹ ಇರಬಹುದೆಂದು ಮತ್ತೊಂದು ಆರ್ಡರನ್ನು ಹೊರಡಿಸಿದರು.

*ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—1949 ರಲ್ಲಿ ಅಧಿಕಾರಿಗಳನ್ನೆಲ್ಲಾ ತೆಗೆದು ಹಾಕಲಾಯಿತು ಎಂದು ಶ್ರೀ ರಾಜಶೇಖರಮೂರ್ತಿಗಳು ಹೇಳಿದರು. ಆಗಿನ ಕಾಲ ಶ್ರೀ ಮರಿಯಪ್ಪನವರದೋ ಅಥವಾ ಶ್ರೀ ಕೆ. ಸಿ. ರೆಡ್ಡಿಯವರದೋ ಅದು ನನಗೆ ಗೊತ್ತಿಲ್ಲ. ಆದರೆ ಆ ಆರ್ಡರು ಪುನಃ ರಿವೈಜ್ ಆಯ್ತು ಎಂದು ಈಗ ಶ್ರೀ ಶ್ರೀನಿವಾಸಯ್ಯಂಗಾರ್ ಅವರು ಹೇಳುತ್ತಿದ್ದಾರೆ. ಅದು ಯಾವಾಗ ಹಾಗೆ ಪುನರಪಿ ಆರ್ಡರಾಯಿತು ಎನ್ನುವುದನ್ನು ಅವರು ತಿಳಿಸಿದರೆ ಉತ್ತಮ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಬಹುಶಃ ಇದನ್ನು ಮಾಡಿದ್ದು 1950-51 ರಲ್ಲಿ ಇರಬಹುದು. ಇದು ಒಂದು ಖಾಸಗೀ ವ್ಯವಹಾರ. ಇದರಲ್ಲಿ ಸರ್ಕಾರದವರೇಕೆ ಪ್ರವೇಶ ಮಾಡಬೇಕು ಎಂಬುದಾಗಿಹೇಳುತ್ತ, ಅವರೂ ಸಹ ಸದಸ್ಯರಾಗಿರಬಹುದು ಎಂದು ಮತ್ತೊಂದು ಹುಕುಂ ಸಾದರು ಮಾಡಿದರು. ಅಷ್ಟೇ ಶಿವಾಯಿ ಅವರ ಮೆಂಬರ್‌ಷಿಪ್ಪುಗಳನೇನೂ ಅವರು ಪುನಃ ರೆಸ್ಟೋರ್ ಮಾಡಲಿಲ್ಲ. ಆದರೆ ಆ ವರ್ಕಿಂಗ್ ಕಮಿಟಿಯಲ್ಲಿ ಅವರಿಗೆಯಾರಿಗೂ ಸ್ಥಾನವಿರಲಿಲ್ಲ. ಅನೇಕ ವಿಚಾರಗಳನ್ನು ನಾನು ಈ ಬಗ್ಗೆ ಹೇಳಬಹುದಾಗಿದೆ. ಆದರೆ ಅವೆಲ್ಲಾ ಬಹಳ ವಿವರಣೆಗಳಿಗೆ

ಸಂಬಂಧಪಟ್ಟಂಥ ವಿಚಾರಗಳು. ನನಗೆ ಅವುಗಳನ್ನೆಲ್ಲಾ ಈಗ ಪ್ರಸ್ತಾಪಿಸಲು ಕಾಲಾವಕಾಶವಿಲ್ಲ.

ಆದರೆ ನಾವು ಈ ವಿಚಾರಗಳನ್ನೆಲ್ಲಾ ಯಾವ ದೃಷ್ಟಿಯಿಂದ ಈ ಆಡಳಿತವನ್ನು ಪುನರ್‌ವ್ಯವಸ್ಥೆಗೊಳಿಸಬೇಕು, ಇದನ್ನು ಇನ್ನೂ ಉತ್ತಮಪಡಿಸಬೇಕು ಎಂಬುದಾಗಿ ಹೇಳಿದ್ದೇವೋ ಎಂದರೆ, ಅದು ಕೇವಲ ಈ ಕುದುರೆ ಜೂಜಿನ ವ್ಯವಹಾರದ ಬಗ್ಗೆ ಸಾರ್ವಜನಿಕರಿಗೆ ಯಾವ ಒಂದು ಅನುಮಾನವೂ ಇಲ್ಲದಿರುವಂಥ ಒಂದು ಸನ್ನಿವೇಶದಲ್ಲಿ ಇವುಗಳನ್ನು ನಡೆಸಿಕೊಂಡ ಹೋಗಬೇಕಾದ್ದು ಅಗತ್ಯ ಎಂಬ ದೃಷ್ಟಿಯಿಂದ ಒತ್ತಾಯಪಡಿಸಿದ್ದೇ ಹೊರತು ಇದರಲ್ಲಿ ಇನ್ನಾವ ಅಭಿಪ್ರಾಯವೂ ಇಲ್ಲ. ಇದರಲ್ಲಿ ಯಾವ ಒಂದು ಪಕ್ಷದ ದೃಷ್ಟಿಯಾಗಲಿ ಅಥವಾ ವ್ಯಕ್ತಿಯ ದೃಷ್ಟಿಯಾಗಲಿ ಖಂಡಿತ ಇರುವುದಿಲ್ಲ. ಆದರೆ ಈ ದಿವಸ ಈ ಕುದುರೆ ಜೂಜನ್ನು ನಡೆಸಿಕೊಂಡು ಬರುತ್ತಿರುವ ವಿಚಾರದಲ್ಲಿ ಅನೇಕ ಫಿರ್ಯಾದುಗಳು ಬಂದಿವೆ. ಅದಕ್ಕಾಗಿ ನಾನು ಅವುಗಳನ್ನು ಸರ್ಕಾರದ ಮುಂದೆ ತಿಳಿಸಿ—ತಾವು ಅವುಗಳನ್ನು ವಿಚಾರಮಾಡಿ ಅವುಗಳೆಲ್ಲಾ ನಿಜವೇ. ಅಥವಾ ಸುಳ್ಳೇ ವಿಚಾರ ಮಾಡಿ ಎಂಬುದಾಗಿ ಕೇಳಿದ್ದೆನು. ಅದಕ್ಕಾಗಿ ಆ ದಿವಸ ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡುವುದಾಗಿ ತಿಳಿಸಿದ್ದರು. ಈಗಲೂ ಸಹ ಇದರಲ್ಲಿ ಆ ಸರ್ಕಾರದ ಸ್ಟೀವರ್ಡುಗಳು ಇದ್ದರೆಂದು ಅವರು ಹೇಳಿದರು. ಆದರೆ ಹಾಗೆ ಅವರು ಅದರಲ್ಲಿದ್ದುದು ನಿಜವೇ, ಅವರಿಗೇನಾದರೂ ಆ ವರ್ಕಿಂಗ್ ಕಮಿಟಿಯಲ್ಲಿ ಪ್ರಭಾವವಿತ್ತೊ ಎಂಬತಕ್ಕ ಅಂಶಗಳ ಬಗ್ಗೆ ಈಗ ಸರ್ಕಾರದವರು ಜವಾಬನ್ನು ಕೊಡಬೇಕಾಗಿದೆ. ಆ ಸರ್ಕಾರಿ ಅಧಿಕಾರಿಗಳಿಗೆ ನೀವು ಆ ಸಮಿತಿಯಲ್ಲಿದ್ದರೂ ಕೂಡ ಈ ರೇಸ್ ಕೋರ್ಸಿನ ವಿಚಾರವಾಗಿ ಯಾವುದನ್ನೂ ಪ್ರಸ್ತಾಪಿಸಬಾರದು—ನೀವು ಸುಮ್ಮನೆ ಅದರಲ್ಲಿ ಕುಳಿತಿದ್ದು ಬರಬೇಕೆಂಬುದಾಗಿ ಅವರಿಗೆಲ್ಲಾ ಹೇಳಲಾಗಿತ್ತೆಂದೂ, ಅವರು ಈ ರೇಸಿನ ಬಗ್ಗೆ ಯಾವ ಒಂದು ಸಲಹೆಯನ್ನೂ ಕೂಡ ಮಾಡಬಾರದೆಂಬ ಒತ್ತಾಯವನ್ನು ಅವರ ಮೇಲೆ ಹಾಕಲಾಗಿತ್ತೆಂದೂ ವದಂತಿಯಿದೆ. ಈ ಬಾಬಿನಿಂದ ಸರ್ಕಾರಕ್ಕೆ ತುಂಬ ಆದಾಯ ಬರುತ್ತದೆ. ಅದಕ್ಕೆ ಸರಿಯಾಗಿ ಇದರ ಬಗ್ಗೆ ಸಾರ್ವಜನಿಕರಿಗೊಂದು ಹಿತರಕ್ಷಣೆಯೂ ಕೂಡ ಆಗಬೇಕಾದದ್ದು ಅಗತ್ಯ ಎಂಬ ದೃಷ್ಟಿಯಿಂದ ನಾನು ಈ ವಿಷಯವನ್ನೀಗ ಚರ್ಚೆಮಾಡುತ್ತಿದ್ದೇನೆ. ಇದರಿಂದ ಸರ್ಕಾರಕ್ಕೆ ಬರುವ ಆದಾಯವನ್ನು ಹೆಚ್ಚಿಸಬೇಕೆಂಬ ಉದ್ದೇಶವಿದೆಯೇ ಹೊರತು ಇದರಲ್ಲಿ ಯಾವ ಪಕ್ಷ—ಪಾರ್ಟಿ, ವ್ಯಕ್ತಿ ವಿಚಾರಗಳೂ. ನನ್ನ ಮನಸ್ಸಿನಲ್ಲಿಲ್ಲ. ಆ ವಿಚಾರಗಳು ಅಷ್ಟಾಗಿ ನನಗೆ ಬೇಕಾಗಿಯೂ ಇಲ್ಲ.

ಇನ್ನು ಕೊನೆಯದಾಗಿ ಈ ಬೆಟ್ಟಿಂಗ್ ಟ್ಯಾಕ್ಸ್ ವಿಚಾರ. ಈ R.M·D.C. ಅವರ ಕಾಂಪಿಟಿಷನ್ ಬಗ್ಗೆ ಈಗಾಗಲೇ ಶ್ರೀ ಗೋಪಾಲಗೌಡರೂ ಇತರ ಸದಸ್ಯರೂ ಎಲ್ಲ ವಿಚಾರಗಳನ್ನೂ ಬಹಳ ಚೆನ್ನಾಗಿ ತಿಳಿಸಿದ್ದಾರೆ. ಆದರೆ ನಾನು ಈ ಬಗ್ಗೆ ಒಂದು ಪ್ರಾಮುಖ್ಯವಾದ ವಿಚಾರವನ್ನು ಮಾತ್ರ ತಿಳಿಸಬೇಕೆಂದಿರುತ್ತೇನೆ. ಈ ಸಂಸ್ಥೆಯವರಿಗೆ ಬಹಳವಾಗಿ ಹಣ ವಸೂಲಿ ಆಗುತ್ತಿದೆ. ಆದರೆ ಹಾಗೆ ವಸೂಲಾಗತಕ್ಕ ಹಣದಲ್ಲಿ ಒಂದು ಭಾಗವನ್ನು ಸರ್ಕಾರದವರಿಗೆ ಕೊಡಬೇಕೆಂಬುದಾಗಿ ಆಕ್ಟಿನಲ್ಲಿ ಹೇಳಿದೆ. ಆದಕಾರಣ ಅವರು ಖಚಿತವಾಗಿ ಪ್ರತಿಯೊಂದು ಕಾಂಪಿಟಿಷನ್ನಿಗೂ ಎಷ್ಟೆಷ್ಟು ಮೊಬಲಗು ವಸೂಲಾಗುತ್ತಿದೆಯೆಂಬುದನ್ನು ನಿಗಾ ಇಟ್ಟು ಅದರ ಬಗ್ಗೆ ಸರ್ಕಾರಕ್ಕೆ ಬರಬೇಕಾದ ಮೊಬಲಗನ್ನು ಕಡ್ಡಾಯವಾಗಿ ವಸೂಲ್ಮಾಡಿಕೊಳ್ಳಬೇಕಾದದ್ದು ಸರ್ಕಾರದವರ ಆದ್ಯಕರ್ತವ್ಯವಾಗಿತ್ತು. ಹೀಗೆ ಮಾಡಬೇಕಾಗಿದ್ದುದು ಇವರ ಕರ್ತವ್ಯವಾಗಿರಲಿಲ್ಲವೇ ಎಂದು ಕೇಳುತ್ತೇನೆ ?

Out of the total amounts collected, such and such per cent shall be credited to the Government, shall belong to the Government. ಇವರಿಗೆ ಎಷ್ಟೆಷ್ಟು ಹಣ ವಸೂಲಾಗುತ್ತಿದೆ ಎಂಬುದರ ಮೇಲ್ವಿಚಾರಣೆ ನೋಡಿಕೊಳ್ಳಲು ಅಧಿಕಾರಿಗಳನ್ನು ನೇಮಕ ಮಾಡತಕ್ಕಂಥ ಒಂದು ದಕ್ಷತೆ ನಮ್ಮ ಸರ್ಕಾರಕ್ಕೆ ಇಲ್ಲದೆ ಹೋಯಿತಲ್ಲಾ ಎಂದು ನನಗೆ ಅನ್ನಿಸುತ್ತಿದೆ. ಈ ದಿವಸ ತಾವು ದೇಶದಲ್ಲಿ ಯಾವ ಮೂಲೆಯಲ್ಲಿ ಹೋಗಿ ನೋಡಿ—ಎಲ್ಲಾ ಬೀದಿಗಳಲ್ಲೂ—ಛಣಿಗಳಲ್ಲೂ ಈ R.M.D.C. ಕಲೆಕ್ಷನ್ ಪೆಟ್ಟಿಗೆಗಳನ್ನು ಇಟ್ಟಿರತಕ್ಕದ್ದು ತಮ್ಮೆಗೆಲ್ಲರಿಗೂ ಕಂಡುಬರುತ್ತದೆ. ಹೇಗೆ ಇವರು ಎಷ್ಟೆಷ್ಟು ಹಣವನ್ನು ವಸೂಲ್ಮಾಡುತ್ತಿದ್ದಾರೆ ಎಂಬ ಬಗ್ಗೆ ತಿಳಿಸಲು ತಮ್ಮಲ್ಲಿ ಯಾವ ದಾಖಲೆಗಳಾದರೂ ಇವೆಯೇ ? ಇವರಿಗೆ ಹಾಗೆ ಅಪಾರವಾಗಿ ಹಣ ವಸೂಲಾಗದೆ ಇದ್ದಿದ್ದರೆ ಒಂದೊಂದು ಕಾಂಪಿಟಿಷನ್ನಿಗೂ 13 ಲಕ್ಷ-14 ಲಕ್ಷ ರೂಪಾಯಿಗಳ ಬಹುಮಾನವನ್ನು ಹೇಗೆ ಹಂಚುತ್ತಾರೆ ? ಒಂದೊಂದು ಕಾಂಪಿಟಿಷನ್ನಿಗೆ 1 ಲಕ್ಷ ರೂಪಾಯಿಗಳ ಬಹುಮಾನ ಕೊಡಲಾಗುತ್ತದೆ ಎಂದು ಅವರು ಯಾವ ಧೈರ್ಯದಿಂದ ಹಾಗೆ ಬರೆಯುತ್ತಾರೆ? ಅವರು ಅಷ್ಟು ಹಣವನ್ನು ವಸೂಲ್ಮಾಡಿಕೊಳ್ಳುವಂಥ ಭರವಸೆ ಅವರಿಗಿರುವುದರಿಂದಲೇ ಅಲ್ಲವೇ ಅವರು ಹಾಗೆಲ್ಲಾ ಬರೆಯುತ್ತಿರುವುದು—ಕೊಡುತ್ತಿರುವುದು ? ಈ ವಿಚಾರಗಳನ್ನೆಲ್ಲಾ ಸರ್ಕಾರದವರು ಕೂಲಂಕಷವಾಗಿ ವಿಮರ್ಶೆ ಮಾಡತಕ್ಕದ್ದು ಅಗತ್ಯ. ಇದರ ಬಗ್ಗೆ ಒಂದು ಸರಿಯಾದ ವ್ಯವಸ್ಥೆ ಮಾಡಿ ಸರ್ಕಾರಕ್ಕೆ ಬರಬೇಕಾದಂಥ ಹಣವನ್ನು ವಸೂಲ್ಮಾಡಿಕೊಳ್ಳಲು ಈಗಲಾದರೂ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆಂಬುದಾಗಿ ನಾನು ಭರವಸೆ ಹೊಂದಲು ಸರ್ಕಾರ ಈ ಅಂಶಗಳಿಗೆಲ್ಲಾ ಸಾಕಷ್ಟು ವಿವರಣೆ ಕೊಡತಕ್ಕದ್ದು ಅಗತ್ಯ. ಇದರಲ್ಲಿ ಪಾರ್ಟಿ-ಪಕ್ಷದ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*Sri B. NARAYANASWAMY (Mysore City-South).—Sir, after hearing Sri Srinivasa Iyengar, I thought he would clarify to a very great extent the affairs of the Bangalore Race Club. Of course, it was on Sri Srinivasa Iyengar's motion this Government responded for the appointment of a committee and a committee was constituted under the chairmanship of the Home Minister and Sri Srinivasa Iyengar was a member. Though there has been a response, what is the kind of response that we got from this Government; that is the point. Sri Mariappa the other day was telling us that in a democratic set up a democratic Government should properly respond to the criticisms of the opposite party or

(SRI B. NARAYANA SWAMY).

any member of the House. But in this case, in my opinion, the response from the Government is most undemocratic. A report was given by the committee and the way that report has been treated by this Government, does not do any credit to this Government. From what I have heard it was more a question of *izzat* that has prevailed in coming to a decision whether licence should be issued to the Race Club or not and the result has been that we have lost a substantial revenue to the State. As a matter of fact, this Government has never announced that racing has been stopped in Mysore. The other day when Sri Mariappa was speaking on this matter, the Chief Minister during his reply said that licence was not granted because the Race Club authorities did not apply in time. But he also said that they subsequently applied but they did not send the necessary amount that was required, namely, the fee. I would like to ask what was the Special Officer that was appointed doing. A Special Officer was appointed to look after the Race Club. Why did he not look into this question of applying for a licence in time? That, the Minister has to answer. It is no use saying that he was merely an observer. He is not an expert in races. Anyhow we have lost a substantial revenue and I think the Government ought to have taken all necessary precautions before coming to any decision of not issuing a licence. Even supposing there was some delay in applying for licence, Government could have asked them to deposit the amount. They ought not to have been sticklers in enforcing the rules or regulations concerning races. Anyhow, personally I feel that there has not been happy relationship between the Government and the Race Club authorities. That much I say.

I have tabled two cut motions, one relating to the entertainment tax and the other about the administration of the Sales Tax Act. Regarding the entertainment tax, I join with Sri Srinivasa Iyengar and say that there has been a good deal of evasion in the collection of entertainment tax and secondly, that there has been a good deal of delay in the payment of the amount due to the several municipalities. If the Minister will kindly look into the payment that has been made in the year 1954-55, that is, the actuals, the receipt has been nearly to about Rs. 7 lakhs and odd, whereas the amount paid to the several municipalities or local bodies has been only Rs. 1,81,000. Why this vast difference? What about the rest of the amount, what has happened to the amount? As a matter of fact, the complaint of the several municipalities is that there has been a good deal of delay in the payment of the amount towards the entertainment tax that is due to the municipality.

As regards the Sales Tax Act, I am constrained to say that the officers or the authorities concerned in the administration of the Sales Tax Act are treating the assessees in the most discourteous manner and in an atmosphere of suspicion and prejudice. Of course, there is a good deal of evasion of payment of seles-tax for which the sales-tax authorities themselves are responsible. They allow this short of evasion to go on. I know that honest merchants (*Interruption*) get a good deal of pin pricks from the sales-tax authorities when the latter look into the accounts while issuing licence. I know a case where an officer wanted to ill-treat an assessee merely because he was wearing good dress.

2 P.M.

I would like to bring to the notice of the Government about the pitiable position of some of the contractors—building and sanitary contrrctors. These contractors are not liable to pay licence fee but still they are compelled to pay licence fee because the articles they deal with, that they use are mostly those that come under single point. Articles like cement, iron and steel are all controlled articles. Only dealers who deal with them under the respective control orders are recognised dealers and they have to obtain licence and it is for them to collect and pay tax whereas the building and sanitary contractors take the materials for construction of houses. Even they are compelled to pay the tax though they

are not entitled to pay the same. As a matter of fact, some cases are pending before courts. It is for the Government to look into these matters. I know that several merchants in Mysore have made representations to the Minister concerned to look into all these grievances and rectify the matters. I hope the Government will do the needful in the matter.

*ಶ್ರೀ ಆರ್. ಅನಂತರಾಮನ್ (ಚಾಮರಾಜಪೇಟೆ).—ಸ್ವಾಮಿ, ಈ ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಒಂದು ಮಾತು ಹೇಳಬೇಕೆಂದು ಇಷ್ಟಪಡುತ್ತಾ ಇದ್ದೇನೆ. ಮರದ ಸಾಮಾನುಗಳಿಗೆ ರೂಪಾಯಿಗೆ ಒಂದಾಣೆ ಸೇಲ್ಸ್ ಟ್ಯಾಕ್ಸ್ ಹಾಕಿದ್ದೀರಿ. ಅದು ಏನಾಗಿದೆ ಎಂದರೆ ಇಂಟರ್ ಪ್ರಿಟೇಷನ್ ಮಾಡುವಾಗ ಈ ಮ್ಯೂಸಿಕಲ್ ಇನ್ಸ್ಟ್ರುಮೆಂಟ್ಸ್‌ಗೂ ಕೂಡ ಒಂದಾಣೆ ತೆರಿಗೆ ಹಾಕಿದ್ದಾರೆ. ಹಾರ್ಮೋನಿಯಂ ಮುಂತಾದ ಮ್ಯೂಸಿಕಲ್ ಇನ್ಸ್ಟ್ರುಮೆಂಟ್ಸ್‌ನ್ನು ಉಪಯೋಗಿಸುವವರು ಬಹಳ ಕಮ್ಮಿ ಜನ. ಮದರಾಸಿನಲ್ಲಿ ರೂಪಾಯಿಗೆ ಮೂರ ಕಾಸು ಇದೆ. ಅದರಂತೆಯೇ ನಮ್ಮ ಸರ್ಕಾರದವರೂ ಸಹ ರೂಪಾಯಿಗೆ ಮೂರು ಕಾಸು ತೆರಿಗೆ ವಸೂಲು ಮಾಡುವುದು ಒಳ್ಳೆಯದು. ಅದೂ ಅಲ್ಲದೆ ಈ ಬಾಬಿನಿಂದ 500, 600 ರೂಪಾಯಿ ಕೂಡ ಬರುವುದಿಲ್ಲ. ಆದ್ದರಿಂದ ಈ ಆರ್ಟಿಸ್ಟ್ಸ್‌ಗೆ ಉತ್ತೇಜನ ಕೊಡುವ ದೃಷ್ಟಿಯಿಂದ ನಾನು ಆಗಲೇ ಹೇಳಿದಂತೆ ರೂಪಾಯಿಗೆ ಮೂರು ಕಾಸಿನಂತೆ ತೆರಿಗೆ ವಸೂಲು ಮಾಡುವುದು ಒಳ್ಳೆಯದು ಎಂದು ಕಾಣುತ್ತದೆ.

ಇನ್ನೊಂದು ಕುದುರೆ ಜೂಜಿನ ವಿಚಾರ. ಹಿಂದಿನ ಸರ್ಕಾರದವರಿಗೆ ಕುದುರೆ ಜೂಜನ್ನು ತೆಗೆಯಬೇಕೆಂದು ಕೆಲವರು ಸಲಹೆ ಮಾಡಿದಾಗ, ತೆಗೆಯುವುದಕ್ಕಾಗುವುದಿಲ್ಲ ಎಂದು ಅವರು ಹೇಳಿದರು. ಈ ಸರ್ಕಾರದವರೂ ಸಹ ಈಗ ನಮ್ಮ ಮುಖ್ಯ ಮಂತ್ರಿಗಳ ಭಾಷಣದಲ್ಲಿ ನೋಡಿದರೆ ಈ ಲೈಸೆನ್ಸ್ ಕೊಡುವುದನ್ನು ಯೋಚನೆ ಮಾಡುತ್ತಾ ಇದ್ದೇವೆ, ತೆಗೆದು ಹಾಕಿಲ್ಲ ಎಂದು ಹೇಳುತ್ತಾರೆ ಮತ್ತು ನಮ್ಮ ಕಾಂಗ್ರೆಸ್‌ನವರು ಮಾತನಾಡುವಾಗ ಪಾನನಿರೋಧಕ್ಕೆ ಎಷ್ಟು ಬೆಂಬಲ ಕೊಡುತ್ತಾರೋ ಅಷ್ಟು ಬೆಂಬಲ ಇದಕ್ಕೆ ಕೊಡುತ್ತಾ ಇಲ್ಲ. ಕುದುರೆಯ ಜೂಜಿನಿಂದ ಬರತಕ್ಕ 10—15 ಲಕ್ಷ ರೂಪಾಯಿ ಬರಬೇಕೆಂದು ನೋಡುತ್ತಾ ಇದ್ದೇವೆಯೇ ಹೊರತು ಅದರಿಂದ ಎಷ್ಟು ಅನರ್ಥವಾಗುತ್ತಾ ಇದೆ ಎಂಬುದನ್ನು ಯೋಚನೆ ಮಾಡುತ್ತಾ ಇಲ್ಲ. ಆದಾಯ ಹೊರಟು ಹೋಯಿತು ಎಂದು ಹೇಳುತ್ತಾರೆಯೇ ಹೊರತು ಕುದುರೆ ಜೂಜನ್ನು ವಜಾ ಮಾಡಿ ಎಂದು ಹೇಳುವುದಿಲ್ಲ. ಇದು ಬಹಳ ವ್ಯಥೆಯನ್ನುಂಟುಮಾಡುವ ವಿಚಾರ. ಈ ಜೂಜಿನಿಂದ ಎಷ್ಟು ಅನರ್ಥವಾಗುತ್ತಿದೆ ಎಂಬುದನ್ನು ಬೆಂಗಳೂರಿನಲ್ಲಿ ಇರುವ ನಾನು ನೋಡಿದ್ದೇನೆ. ಈ ಕುದುರೆ ಜೂಜಿನ ಕಮಿಟಿಯಲ್ಲಿರತಕ್ಕವರೆಲ್ಲರೂ ದೊಡ್ಡ ದೊಡ್ಡ ಕುದುರೆಗಳನ್ನಿಟ್ಟುಕೊಂಡಿರುತ್ತಾರೆ. ತಮ್ಮ ಕುದುರೆಗೆಲ್ಲಾ ಬೇಕು. ತಮಗೆ ಬೇಕಾದವರು ಯಾರು ಬೆಟ್ ಮಾಡುತ್ತಾರೋ ಅವರಿಗೇ ಹಣ ಸಿಕ್ಕಬೇಕು ಎಂದು ನೋಡುತ್ತಾರೆಯೇ ಹೊರತು ಬಡವನಿಗೆ ಎರಡು ಮೂರು ರೂಪಾಯಿ ಜೂಜು ಕಟ್ಟಿದರೂ ಕೂಡ ಮೂರು ಕಾಸೂ ಬರುವುದಿಲ್ಲ, ಹೀಗೆ ಇದು ನಡೆಯುತ್ತಾ ಇದೆ. ಎಷ್ಟು ಅಕ್ರಮವಾಗಿ ನಡೆಯುತ್ತಿದೆ ಎಂಬುದನ್ನು ಶ್ರೀ ಶ್ರೀನಿವಾಸಅಯ್ಯಂಗಾರ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ. ಹೋದ ವರ್ಷ ಒಂದು ಸಾರಿ ಏನಾಯಿತು ಎಂದರೆ ಒಬ್ಬ ನ್ಯೂಯಾರ್ಡ್‌ರವರ ಕುಧುರೆ ಬಹಳ ಚೆನ್ನಾಗಿತ್ತು, ಅದು ಫಸ್ಟ್ ಬಂದೇ ಬರುತ್ತದೆ ಎಂದು ನಿರೀಕ್ಷೆ ಮಾಡಿಕೊಂಡಿದ್ದರು. ಆದರೆ ಕುದುರೆಗಳು ಹೊರಡುವಾಗ ಆ ಕುದುರೆ ಬರುವುದು ಸ್ವಲ್ಪ ನಿಧಾನವಾಯಿತು. ಆಗ ತಕ್ಷಣವೇ ಇತರ ಕುಧುರೆಗಳು ಹೊರಡುವುದನ್ನು ಕ್ಯಾನ್ಸಲ್ ಮಾಡಿ ತಿರುಗಿ ಅರ್ಧ ಘಂಟೆ ಆದ ಮೇಲೆ ಬಿಟ್ಟರು. ಅವರ ಕುದುರೆಗೇ ಫಸ್ಟ್ ಪ್ರೈಸ್ ಬಂತು.

ಈ ಕುದುರೆ ಜೂಜಿನಿಂದ ಕಾರ್ಪೊರೇಷನ್‌ಗೆ ಮೂರು ಕಾಸಿನ ಆದಾಯವೂ ಇಲ್ಲ. ನೀರು ಇಲ್ಲದೆ, ನೀರಿಗೆ ಅಭಾವವಾಗಿರುವ ಈ ಕಾಲದಲ್ಲಿ ಅವರಿಗೆ ನಾವು ನೀರು ಒದಗಿಸಬೇಕು. ಇದರಿಂದ ಮತ್ತೆ ನಗರದಲ್ಲಿರುವ ಜನರಿಗೆ ಬಹಳ ಕಷ್ಟವಾಗುತ್ತದೆ. ಸರ್ಕಾರದವರಿಗೆ ಸ್ವಲ್ಪ ಆದಾಯ ಬರಬಹುದೇ ಹೊರತು ಜನಕ್ಕೆ ಸ್ವಲ್ಪವೂ ಅನುಕೂಲವಿಲ್ಲ. ಅದೂ ಅಲ್ಲದೇ ಸಾವಿರಾರು ಜನರ ಮನೆಗಳು ಹಾಳಾಗಿ ಹೋಗಿವೆ. ಅದರಲ್ಲಿ ಬಡವರೇ ಜಾಸ್ತಿ. ಬಡವರಿಗೆ ಅನುಕೂಲಮಾಡಬೇಕೆಂಬ ದೃಷ್ಟಿಯಿಂದ ನಮ್ಮ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಪಾನನಿರೋಧ ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಹೇಳುತ್ತಾ ಇದ್ದೇವೆ. ಆರ್.ಎಂ. ಡಿ. ಸಿ. ಮೇಲೆ ಹತೋಟಿ ಇಟ್ಟು ಆ ರೀತಿ ಜೂಜಾಡುವುದನ್ನು ನಿಲ್ಲಿಸಬೇಕೆಂದು ಪ್ರಯತ್ನಮಾಡುತ್ತಾ ಇದ್ದೇವೆ. ಹಾಗಿದ್ದೂ ಕೂಡ ಕಾಂಗ್ರೆಸ್ಸಿನವರೇ ಈ ಕುದುರೆಯ ಜೂಜು ನಡೆಯಬೇಕೆಂದು ಹೇಳುತ್ತಿರುವುದನ್ನು ನೋಡಿದರೆ ನನಗೆ ನಾಚಿಕೆಯಾಗುತ್ತಿದೆ. ಇನ್ನಾದರೂ ಯೋಚನೆ ಮಾಡಿ ಈ ಕುದುರೆ ಜೂಜನ್ನು ಖಂಡಿತವಾಗಿಯೂ ನಿಲ್ಲಿಸಬೇಕೆಂದು ಒತ್ತಾಯಮಾಡುವುದು ಒಳ್ಳೆಯದು. ಈಗ ಸರ್ಕಾರದವರು ಈ ವರ್ಷ ಕುದುರೆ ಜೂಜು ನಡೆಯುವುದಕ್ಕೆ ಅವಕಾಶಕೊಟ್ಟಿಲ್ಲ. ಇನ್ನು ಮುಂದೂ ಕೂಡ ಇದೇ ರೀತಿ ವಜಾ ಮಾಡಿದರೆ ನಿಜವಾಗಿಯೂ ಅವರಿಗೆ ಒಳ್ಳೆಯ ಹೆಸರು ಬರುತ್ತದೆ ಎಂದು ಹೇಳುತ್ತೇನೆ. ಇದರಿಂದ 10 ಲಕ್ಷ ರೂಪಾಯಿಗಳ ಆದಾಯವೇನೋ ಬರುತ್ತದೆ. ಆದರೆ ಇದನ್ನು ನಿಲ್ಲಿಸಿದರೆ ಎಷ್ಟೋ ಜನಕ್ಕೆ ಕ್ಷೇಮವಾಗುತ್ತದೆ. ಬಡಬಗ್ಗರು ಉಳಿದುಕೊಳ್ಳುತ್ತಾರೆ. ಇಲ್ಲದೇ ಇದ್ದರೆ ದೇಶಕ್ಕೆ ಅನಾಹುತವಾಗುತ್ತದೆ ಎಂದು ಹೇಳುತ್ತೇನೆ.

Sri V. M. MASCARENHAS (St. John's Hill). I fully support Sri R. Anantaraman on the subject of the Race Course. I am surprised that the Government has done a grievous wrong in delaying a decision regarding the Race Club. If prohibition is a thing to be achieved, in my opinion abolition of racing is a better achievement. The misery and the hardship caused to innumerable inhabitants in Bangalore by racing is perhaps well known to us all, and so for the sake of Rs. 10. lakhs revenue, let the Government not grudge stopping racing.

Coming to sales-tax, this is perhaps one of the best sources of revenue for the State and a most flexible one. When we introduced single point

(SRI V. M. MASCARENHAS.)

levy in place of multi-point levy there were some misgivings that revenues from the sales-tax might be affected. I am gratified to find that not only it is not so but our revenues are definitely upwards. But, as Sri Srinivasa Iyengar pointed out, it is not on account of the Act but because we have put a very heavy levy, I still believe that the department should wake up and if the officers do a little better work I am sure that larger amounts can be realised.

Mr. SPEAKER.—What Sri Srinivasa Iyengar said was that on account of increase in the sales-tax, there would be better collection.

Sri V. M. MASCARENHAS.—I readily agree. But I feel that if the departmental officers are awake and put up a little more effort, another 20 per cent extra revenue will come. As I have pointed out in the past, sales-tax officers should have their representatives at every octroi office to have an idea of the various kinds of goods that come into the State and which may evade sales-tax. I do not know if the Government have taken any step in that direction. I only feel that the Sales-tax Department should try their utmost to see that the revenues are not in any way curtailed.

I have also heard that the department consists of most inefficient men in the whole State. I trust the new Minister who is handling the portfolio is aware of this fact. If you want to improve the department it is necessary that you put in some new blood in the department and also see that some top men with real accountancy and business acumen are there to tone up the entire administration. If that is done, I am sure that the revenues will exceed Rs. 2 crores.

One word more, about entertainment tax in the field of sports. The Government of India has abolished this tax. My earnest request to the Government of Mysore is that on sport and other activities please do not levy any entertainment tax. That will be an indirect fillip for the progress of sports and games.

*ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಈ ಪ್ರೈಸ್ ಕಾಂಪೆಟಿಷನ್‌ನಿಂದ ಈ ಸಾಲಿನಲ್ಲಿ ವರಮಾನ ಬಹಳ ಕಡಿಮೆ ಆಗಿದೆ. ಇದಕ್ಕೆ ಕಾರಣವು ಕೂಡ ನಮಗೆ ಗೊತ್ತಿದೆ. ನಾವು ಇದಕ್ಕೆ ಸಂಬಂಧಪಟ್ಟ ಇಂಡಿಯಾ ಸರ್ಕಾರದ ಮಸೂದೆಯನ್ನು ನಮ್ಮ ಸಂಸ್ಥಾನದಲ್ಲಿ ಜಾರಿಗೆ ತರಬೇಕೆಂದು ತೀರ್ಮಾನಮಾಡಿ ಆ ಪ್ರಕಾರ ನಡೆಯಬೇಕೆಂದು ಏರ್ಪಾಡು ಮಾಡಿದ್ದೇವೆ. ಸರ್ಕಾರದವರಿಗೆ ಬಹಳ ಹೆಚ್ಚಿಗೆ ವರಮಾನ ಕೊಡತ್ತಿದ್ದಂಥ, ಇದುವರೆಗೂ ಈ ರೀತಿಯಾದ ಕಾಂಪೆಟಿಷನ್ ನಡೆಸುತ್ತಿದ್ದಂಥ ಆರ್. ಎಂ. ಡಿ. ಸಿ. ಅವರ ವಿಚಾರವಾಗಿ ನಮ್ಮ ಈ ಮಾನ್ಯ ಸಭೆಯಲ್ಲಿ ಬಹಳವಾಗಿ ಪ್ರಸ್ತಾಪ ನಡೆದಿದೆ. ಅದರ ಮುಖ್ಯ ಸಾರಾಂಶವೇನೆಂದರೆ ನಮ್ಮ ದೇಶಕ್ಕೆ ಈ ಕಾಂಪೆಟಿಷನ್‌ನಿಂದ ಎಷ್ಟು ವರಮಾನ ಬರಬೇಕಾಗಿತ್ತೋ ಅಷ್ಟು ವರಮಾನ ಬಂದಿಲ್ಲ. ಅವರು ಪ್ರತಿಯೊಂದು ರೀತಿಯಲ್ಲೂ ಕೂಡ ಲೆಕ್ಕ ಪತ್ರಗಳನ್ನು ಒದಗಿಸದೆ, ವರಮಾನ ಸರ್ಕಾರಕ್ಕೆ ಕೊಡಬೇಕಾದಷ್ಟು ಕೊಡದೇ ಇರುವ ಪ್ರಯತ್ನ ನಡೆಸಿದ್ದಾರೆ ಎಂದು ಹೇಳಿ ಒಂದು ಆಪಾದನೆ ಇದೆ. ಮೈಸೂರು ಸರ್ಕಾರದವರು ಪ್ರೈಸ್ ಕಾಂಪೆಟಿಷನ್ ಆಕ್ಟ್ ಪ್ರಕಾರ ಅವರಿಗೆ ಮತ್ತೆ ಲೈಸೆನ್ಸ್ ಕೊಡುವುದಕ್ಕೆ ಷುರು ಮಾಡಿದಮೇಲೆ ಅವರು ಇದುವರೆಗೂ ಸುಮಾರು 200 ಕಾಂಪೆಟಿಷನ್‌ಗಳನ್ನು ನಡೆಸಿದ್ದಾರೆ ಎಂದು ಹೇಳಿ ಕೂಡ ನಮಗೆ ತಿಳಿದುಬಂದಿದೆ. ಈ 200 ಕಾಂಪೆಟಿಷನ್‌ಗೂ ಕೂಡ ಇದುವರೆಗೂ ಒಂದು ದಾಮಾಷಾ ಪ್ರಕಾರ ಅವರಿಗೆ ಕಲೆಕ್ಟ್ ಆಗಿರತಕ್ಕ ದುಡ್ಡನ್ನು ಲೆಕ್ಕಾ ಹಾಕಿದರೆ ಒಂದು ಕಾಂಪೆಟೀಷನ್‌ಗೆ ಸರಾಸರಿ ಸುಮಾರು ಐದರಿಂದ ಆರು ಲಕ್ಷ ರೂಪಾಯಿಗಳವರೆಗೂ ಬರಬಹುದು. ಒಟ್ಟು ಇದುವರೆಗೆ 12 ಕೋಟಿ ರೂಪಾಯಿಗಳಷ್ಟು ವರಮಾನ ಸಂಗ್ರಹವಾಗಿರಬಹುದು. ಆದರೆ ಅವರು ಸರ್ಕಾರಕ್ಕೆ ಕೊಟ್ಟಿರತಕ್ಕ ತೆರಿಗೆ ಇದುವರೆಗೂ ಸುಮಾರು 25 ಲಕ್ಷ ರೂಪಾಯಿಗಳು ಮಾತ್ರ ಎಂದು ಹೇಳಿದೆ. 12 ಕೋಟಿ ರೂಪಾಯಿನ ಅಂದಾಜಿನ ಪ್ರಕಾರ ಲೆಕ್ಕ ಹಾಕಿದ್ದರೆ ಇನ್ನು ಒಂದೂ ಚಿಲ್ಲರೆ ಕೋಟಿ ರೂಪಾಯಿ ಸರ್ಕಾರಕ್ಕೆ ಬರಬೇಕಾದ ವರಮಾನ ಬಂದಿಲ್ಲ, ಅದನ್ನು ಅವರು ಅನೇಕ ವಿಧದಲ್ಲಿ ಇವೇಡ್ ಮಾಡಿದ್ದಾರೆ ಎಂದು ಹೇಳಿ ತಿಳಿದುಬರುತ್ತಾ ಇದೆ. ಆ ರೀತಿ ಇವೇಡ್ ಮಾಡಿದ್ದಾರೆ ಎಂದು ಹೇಳುವುದಕ್ಕೆ ಕೆಲವು ಸಕಾರಣಗಳು ಕಂಡುಬರುತ್ತಾ ಇವೆ. ಅವರ ಒಂದು ಸ್ಕ್ರೂಟಿನಿ ಕಮಿಟಿ ಎಂಬುದು ಇದೆ, ಅದರಲ್ಲಿ ಸರ್ಕಾರದವರ ಪ್ರತಿನಿಧಿ ಇದ್ದಾರೆ. ಅವರಿಗೆ ಸಾಕಾದಷ್ಟು ಅವಕಾಶವಿಲ್ಲದೆ ಅವರ ಲೆಕ್ಕ ಪತ್ರಗಳನ್ನು ನೋಡುವುದಕ್ಕೆ ಸಾಧ್ಯವಾಗಲಿಲ್ಲ. ಆಡಿಟ್ ರಿಪೋರ್ಟಿನಲ್ಲಿ ತಿಳಿಸಿರುವಂತೆ ಕಾನೂನು ಪ್ರಕಾರ ಪ್ರತಿಯೊಂದು ಕಾಂಪೆಟಿಷನ್‌ಗೂ ಬರತಕ್ಕಂಥ ಲೇವಾದೇವಿಯ ಲೆಕ್ಕಾಚಾರವನ್ನು ಕೊಡಬೇಕೆಂದು ಒತ್ತಾಯಪಡಿಸಿದರೂ ಕೂಡ ಆರ್. ಎಂ. ಡಿ. ಸಿ. ಯವರು ಆ ರೀತಿಯಾಗಿ ಲೆಕ್ಕಪತ್ರಗಳನ್ನು ಒದಗಿಸದೇ ಮೂರು ತಿಂಗಳಿಗೆ ಒಂದುಸಾರಿ ಒಟ್ಟಿನಲ್ಲಿ ಅವರಿಗೆ ಬೇಕಾದಂಥ ಲೆಕ್ಕಪತ್ರಗಳನ್ನು ಮಾತ್ರ ಒದಗಿಸಿದ್ದಾರೆ. ಈ ರೀತಿಯಾಗಿ ಕಾನೂನನ್ನು ದುರುಪಯೋಗಪಡಿಸಿ ಅವರು ಕೊಡಬೇಕಾದದ್ದು ತೆರಿಗೆಯನ್ನು ಕೊಡದೆ ಇವೇಡ್ ಮಾಡಿದ್ದಾರೆ ಎಂದು ಹೇಳಿ ದೂಷಣೆಗಳು ಬಂದಿವೆ.

ಈ ವಿಚಾರವಾಗಿ ಸಭೆಯಲ್ಲಿ ಕೂಡ ಅನೇಕರು ಪ್ರಸ್ತಾಪ ಮಾಡಿದ್ದಾರೆ. ನನಗೆ ತೋರುವುದು ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾದರೆ ಕೂಡಲೆ ಒಂದು ಸಮಿತಿಯನ್ನು ರಚನೆಮಾಡಿ ಅವರು ಲೆಕ್ಕಪತ್ರಗಳನ್ನು ಯಾವರೀತಿ evade ಮಾಡಿ

ದ್ವಾರೆ, ನಮಗೆ ಬರಬೇಕಾದ ತೆರಿಗೆ ಸಂಪೂರ್ಣವಾಗಿ ಬಂದಿದೆಯೋ, ಈ ಎಲ್ಲ ವಿಷಯಗಳನ್ನೂ ಪರಿಶೀಲನೆ ಮಾಡಿ ಒಂದುವೇಳೆ ಅವರು evade ಮಾಡಿರುವುದು ಕಂಡುಬಂದರೆ ಆ ರೀತಿಯಾಗಿ ಮಾಡಿರುವುದಕ್ಕೆ ಏನೇನು ಕಾರ್ಯ ಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳ ಬೇಕೋ ಅವನ್ನು ಕೂಡಲೇ ತೆಗೆದುಕೊಳ್ಳುವ ರೀತಿ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಮಾಡಿ, ಈ ಮನವಿಯನ್ನು ಅನುಮೋದಿಸುತ್ತೇನೆ.

*Sri M. PALANIYAPPAN (Ulsoor).—Sir, the policy of issuing licences to the Race Club seems to be something like the policy of Prohibition we are adopting today. On the one side, we allow drinking and on another side we say that it is an offence. Sir, the issue of licences to Race Clubs is something similar to that. On the one side we have passed legislation making Satta gambling and such other things punishable, and on the other side, we issue licences to horse races and the gambling that goes on behind that in the shape of betting. Sir, if the Government thinks that they should stop what they consider to be an offence, then strictly and uniformly with a certain definite policy they should adopt one general. To say on the one side that gambling is punishable and on the other side to allow, by issuing licence, betting in horse races, seems to be an inconsistent policy. It may be true, Sir, that Government is getting a sum of Rs. 10 lakhs from Races. But that is not the criterion to run the Government. If the Government wants money, there are many forms by which they can get revenue. Have we not found alternative sources of revenue in order to introduce prohibition ? When we are convinced that a certain thing constitutes an evil and will have evil consequences on society as such, it is the duty of the Government of the day to take steps to eradicate that evil. I therefore feel that the policy of issuing licences to the Race Course is bad as we have already prohibited gambling as such. This Race is not only affecting the poor people, but also brings down the morale of the common man. We can see, Sir, every day people starting from top-ranking officers of the State down to the ordinary common man in the street comes to the Race Course and spends his day's earning there and returns home with disappointment and cursing the Government. If the Government is earnest about safeguarding the interest and preventing these people who are susceptible to this temptation, I think it is the duty of the Government to see that racing is abolished forthwith. Let us not give room for any controversy. I can see some of my friends who are very much interested in Races are advocating the issue of licence to the Race Course. I would only appeal to them that in the interests of the country and in the interests of the poor people, let them not issue licence to this racing. If they are going to give licence to the Race Club, they will be doing the greatest injustice possible to the poor people.

Sir, coming to the sales-tax, the other day I had an opportunity to say something on this matter. Even before hearing the arguments of the Auditor and even before the explanation of the Auditor begins, the sales-tax officer begins to say : "No, No, I am not prepared to accept your accounts. They are all false accounts and they have not been written in the presence of any officer of the Sales-tax Department." Why I say this is, the Officer always starts with a biased mind even before he hears the explanation of the Auditor. That is the mentality of these officers when the merchants approach them. Even when they approach a merchant they say that the accounts produced by the merchant are all wrong, and with that presumption, if they proceed to assess the party concerned, what would be the fate of that merchant, Sir ? An officer with powers to assess should always start with an unbiased mind. He should think that the accounts produced by the merchant are *bona fide* correct unless he can prove the contrary. On the other hand, even before the accounts are placed before the officer, if the officer starts saying that he would not accept the accounts, what is to be done ? Where is justice and where is protection to the merchant, Sir ? Ordinarily, every merchant wants to pay the taxes that are due by him. Nobody grudges paying what is rightly due to the Government. Perhaps there are a

(SRI M. PALANIYAPPAN.)

few people who may want to evade, but such people are rare.

One further point I would like to bring to the notice of the Government is that some Sales-tax Officers do not know accountancy properly sir. Because the Revenue Officers are often posted to the Sales-tax department and they are placed in higher positions and such officers always bring to bear their own authoritarian methods and they will not be in a mood to listen to the grievances of the merchants. There are so many officers in the Sales-tax Department who are waiting for promotion. Many of them have started as probationers in that Department even. But very often the claims of persons in the Department are over-looked and Revenue Officers are posted to the Department. I therefore suggest that such a practice should not be continued and ordinarily the claims of the people in the Department should be recognised when places at the top have to be filled, because they know their job and they are duly qualified.

*ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ರೇಸ್‌ಕೋರ್ಸ್ ವಿಚಾರವಾಗಿ ಚರ್ಚೆಯಾಗಿದೆ. ಆದರೆ ನಾವು ಈ ಸರ್ವೋದಯ ತತ್ವವನ್ನು, ಸಮಾಜವಾದ ಮಾದರಿಯ ತತ್ವವನ್ನು ಆಚರಿಸಬೇಕು, ಅದನ್ನು ಜಾರಿಗೆ ತರಬೇಕು ಎಂಬ ಆಲೋಚನೆಯಿಂದ ಇರತಕ್ಕವರು, ಜೂಜಾಟಕ್ಕೆ ಪ್ರೋತ್ಸಾಹ ಕೊಡತಕ್ಕ ರೇಸನ್ನು ವಜಾ ಮಾಡುವುದು ಅತ್ಯಗತ್ಯ. ಈಗ ಇಂಡಿಯಾ ದೇಶದಲ್ಲಿ ಬೊಂಬಾಯಿನಲ್ಲಿ ಹಂಗಾಮಿಯಾಗಿ ರೇಸ್‌ಕ್ಲಬ್ಬಿಗೆ ಅವಕಾಶ ಕೊಟ್ಟಿದ್ದಾರೆ ಎಂಬ ಸಂಗತಿ ನನಗೆ ಗೊತ್ತಾಗಿದೆ. ಅಲ್ಲಿಯೂ ಕೂಡ ಈ ವಿಷಯವನ್ನು ಆಲೋಚನೆಮಾಡುತ್ತಿದ್ದಾರೆ. ಇನ್ನು ಇತರ ಕಡೆಗಳಲ್ಲಿಯೂ ಕೂಡ ಇಂಡಿಯಾ ಸರ್ಕಾರದವರು ಈ ರೇಸಿನ ವಿಷಯವಾಗಿ ಯಾವ ತತ್ವವನ್ನು ಅನುಸರಿಸಿ ಸಂಸ್ಥಾನಗಳಿಗೆ ಏನು directive ಕೊಡುತ್ತಾರೆ ಎನ್ನುವುದನ್ನು ಈಗ ಆಲೋಚನೆ ಮಾಡುತ್ತಿದ್ದಾರೆ. ಆದುದರಿಂದ ಈ ರೇಸಿನ ವಿಷಯದಲ್ಲಿ ಇಷ್ಟು ಗೊಂದಲವನ್ನು ಮಾಡುವುದು ಅನಾವಶ್ಯಕ. ಈ ವಿಷಯದಲ್ಲಿ ಸಭೆಯಲ್ಲಿರತಕ್ಕ ಮಾನ್ಯ ಸ್ನೇಹಿತರುಗಳು ರೇಸಿಂಗ್ ಹೋಗತಕ್ಕುದಕ್ಕೆ ಬಹಳ ಮನ್ನಣೆಕೊಟ್ಟಿದ್ದಾರೆ. ಮುಖ್ಯವಾಗಿ ನಮ್ಮ ಸ್ನೇಹಿತರಾದ ಶ್ರೀಮಾನ್ ವಿ. ಎಂ. ವ್ಯಾಸ್ಪರೆನ್ನಾಸ್‌ರವರು ಈ ಜೂಜು ಎನ್ನುವುದು ಬಹಳ ತೀವ್ರವಾಗಿ ವಿರೋಧಮಾಡಲ್ಪಡತಕ್ಕದ್ದಾಗಿದೆ ಎಂದು ಪ್ರೋತ್ಸಾಹ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಹಾಗೆಯೇ ಇನ್ನೊಬ್ಬ ಸದಸ್ಯರೂ ಸಹ ಪ್ರೋತ್ಸಾಹ ಕೊಟ್ಟಿದ್ದಾರೆ.

ಎರಡನೆ ವಿಷಯ ಪ್ರೈಜ್ ಕಾಂಪಿಟಿಷನ್‌ಗೆ ಸಂಬಂಧಿಸಿದ್ದು. ಇದರ ವಿಷಯದಲ್ಲಿ ಸರ್ಕಾರದವರು ಇನ್ನೂ ಹೆಚ್ಚು ಎಚ್ಚರಿಕೆಯಿಂದ ವರ್ತಿಸಬೇಕಾಗಿತ್ತು ಎಂಬುದಾಗಿ ನಾನು ಖಂಡಿತವಾಗಿ ಹೇಳಬೇಕಾಗುತ್ತದೆ. ಯಾತಕ್ಕೆ ಹೇಳಬೇಕು ಎಂದರೆ ಅದರಿಂದ ಬಹಳ ಅನರ್ಥವಾಗಿದೆ. ಈ ಕಾಂಪಿಟಿಷನ್ ವಜಾ ಮಾಡಿದ್ದರೆ ಚೆನ್ನಾಗಿತ್ತು. ಆದರೆ ಈಗ ಮೈಸೂರಿನಲ್ಲಿಯೂ ಒಂದು ಸಾವಿರದವರೆಗೆ ಲಿಮಿಟ್ ಇಡಬೇಕೆಂದಾಗಿದೆ. ಪ್ರೆಸ್ ಕಮಿಷನ್ ವರದಿಯೊಳಗೆ 500 ರೂಪಾಯಿಗಳ ಮಿತಿಯನ್ನು ಹಾಕಿದ್ದರು. ಆದರೆ ಇಂಡಿಯಾ ಸರ್ಕಾರದವರು, ಅವರು ಮಾಡಿರತಕ್ಕ ಮಸೂದೆಯಲ್ಲಿ ಈ ಮಿತಿಯನ್ನು ಹೆಚ್ಚಿಸಿದ್ದಾರೆ. ಆದರೆ ಈ ಪತ್ರಿಕೆಗಳು ನಿಜವಾಗಿ, ಪ್ರಾಮಾಣಿಕವಾಗಿ ಬರೀ ಪತ್ರಿಕಾ ವ್ಯವಸ್ಥೆಯಲ್ಲಿ ಮುಂದೆ ಬರಬೇಕಾಗಿದೆ. ಈ ಪತ್ರಿಕೆಗಳೂ ಪ್ರಗತಿಗೆ ಬರಬೇಕಾದದ್ದು ಅತ್ಯಾವಶ್ಯಕ. ಇದು ಸಾಮಾನ್ಯವಾಗಿ circulation ಜಾಸ್ತಿ ಮಾಡುವುದಕ್ಕೋಸ್ಕರ, advertise ಮಾಡಿ ನಮ್ಮ ಪತ್ರಿಕೆ ಇಷ್ಟು ಸಾವಿರ ಪ್ರಚಾರವಿದೆ ಎಂದು ಹೇಳಿಕೊಳ್ಳುವುದಕ್ಕೆ ಮಾಡಿರುವ ಒಂದು ಯುಕ್ತಿ. ಇದರಿಂದ ನಿಜವಾದ ಪತ್ರಿಕೆಗಳು ಪ್ರಗತಿಗೆ ಬರುವುದಕ್ಕೆ ಅವಕಾಶವಿಲ್ಲ. ಆದುದರಿಂದ ಈ ಕಾನೂನನ್ನು ತಿದ್ದುಪಡಿ ಮಾಡಿದ್ದಾರೆ. ಆದರೆ ಅದನ್ನು ಪೂರ್ತಿಯಾಗಿ ವಜಾ ಮಾಡಬೇಕು ಎಂದು ಮೊಟ್ಟಮೊದಲನೆಯದಾಗಿ ಹೇಳುತ್ತೇನೆ. ಮೂರನೆಯ ವಿಷಯ ತೆರಿಗೆ ವಸೂಲಿ ವಿಷಯ. ಈ ಸಭೆಯಲ್ಲಿ ಸದಸ್ಯರು ತೆರಿಗೆ ವಸೂಲಿ ವಿಷಯದಲ್ಲಿ ವಸೂಲಿ ಮಾಡಕೂಡದೆಂದು ಹೇಳುವುದಿಲ್ಲ, ಆದರೆ ಮನುಷ್ಯರ ಮಾನ ಮರ್ಯಾದೆಯನ್ನು ಕಾಪಾಡಿ, ಅವರೂ ಬಹಳ ಸಂತೋಷದಿಂದ ಇರುವಹಾಗೆ ಮಾಡುವುದು ಅತ್ಯಾವಶ್ಯಕವೆಂದು ಮಾತ್ರ ತಿಳಿಸಿದರು. ಆ ರೀತಿಯಾಗಿ ಆಗುತ್ತಿರುವುದಕ್ಕೆ ಕಾರಣವೇನು ಎಂದರೆ ಅಧಿಕಾರಿಗಳಿಗೆ ಲೆಕ್ಕವನ್ನು ಕೊಟ್ಟಲ್ಲಿ ತೆರಿಗೆ ಕೊಡತಕ್ಕುದಕ್ಕೆ ಲೆಕ್ಕ ಸರಿಯಾಗಿಲ್ಲವೆಂದು ತಿಳಿಸುತ್ತಾರೆ. Tax Accountancy ಎನ್ನುವುದು, ಮತ್ತು ಆ ಲೆಕ್ಕಗಳನ್ನು ಬರೆಯುವ ವ್ಯವಸ್ಥೆ ಹೊಸದಾಗಿ ಬಂದಿದೆ. ಪೂರ್ವದ ರೀತಿಯಾಗಿ ಲೆಕ್ಕವನ್ನು ಇಟ್ಟುಕೊಂಡರೆ ಅದರಿಂದ ಬಹಳ ತೊಂದರೆಯಾಗುತ್ತದೆ. ಆದುದರಿಂದ ಈ ವಿಷಯದಲ್ಲಿ ಇದೇ ರೀತಿಯಾಗಿ ಲೆಕ್ಕಗಳನ್ನು ಬರೆಯಬೇಕು ಎಂದು ಒಂದು ಮಾದರಿಯ ಫಾರಂ ಕೊಟ್ಟರೆ ವ್ಯಾಪಾರಗಾರರಿಗೆ ಅದರಿಂದ ಬಹಳ ಸಹಾಯವಾಗುತ್ತದೆ ಮತ್ತು ಈ ರೀತಿ ಇಂಥಿಂಥ ಐಟಂ ಹೀಗೆಯೇ ಇರಬೇಕು ಎಂದು ತಿಳಿವಳಿಕೆ ಕೊಟ್ಟರೆ ಸಾಮಾನ್ಯವಾಗಿ, ಬಹುಮಟ್ಟಿಗೆ ಕಿರುಕುಳ ಕಡಿಮೆಯಾಗುತ್ತದೆ. ಸರ್ಕಾರ ನಡೆಯಬೇಕಾದರೆ ತೆರಿಗೆಯನ್ನು ವಸೂಲ್ಮಾಡಬೇಕಾಗುತ್ತದೆ. ಆದರೆ ಅದನ್ನು ವಸೂಲ್ಮಾಡುವುದರಲ್ಲಿ ಪ್ರಜಾಸರ್ಕಾರ ತತ್ವಗಳನ್ನು ಗಮನದಲ್ಲಿಟ್ಟುಕೊಂಡು ಯಾವ ರೀತಿ ವಸೂಲ್ಮಾಡಬೇಕೋ ಹಾಗೆ ಮಾಡಬೇಕು.

ಇನ್ನೊಂದು ಮುಖ್ಯವಾದ ವಿಷಯ. 1917ರಲ್ಲಿ ನಮಗೆ ಸ್ವಾತಂತ್ರ್ಯ ಬಂದಾಗಿನಿಂದ, ಈ ಎಂಟು ವರ್ಷಗಳಲ್ಲಿ ಎಷ್ಟರಮಟ್ಟಿಗೆ ನಾವು ತೆರಿಗೆಗಳನ್ನು ಹಾಕುತ್ತಿದ್ದೇವೆಯೋ ಆ ತೆರಿಗೆಗಳು ಜಾಸ್ತಿಯಾಗಿವೆಯೋ, ಇನ್ನೂ ಹೆಚ್ಚು ತೆರಿಗೆ ಹಾಕಬೇಕಾಗುತ್ತದೆಯೋ ಎಂದು ನೋಡುವುದಕ್ಕೆ ಹೋದರೆ ಸಾಮಾನ್ಯವಾಗಿ ಭಯವಾಗುತ್ತದೆ. ಏಕೆಂದರೆ ದೇಶದಲ್ಲಿ ಅಡಲ್ಟ್ ಫ್ರಾಂಚೈಸ್ ಇದೆ. ಇವರಲ್ಲಿ ಕಂದಾಯ ಕೊಡದೆ ಇರತಕ್ಕವರೇ ಬಹಳ ಜಾಸ್ತಿ. ಕಂದಾಯ ಕೊಟ್ಟವರು ಬಹುಶಃ ನೂರಕ್ಕೆ ಐದು ಜನ ಸಿಕ್ಕುತ್ತಾರೆಯೋ ಇಲ್ಲವೋ? ನೂರಕ್ಕೆ 95 ಜನರು ಕಂದಾಯ ಕೊಡುವುದಿಲ್ಲ.

2-30 P.M.

ಅಡಲ್ಟ್ ಫ್ರಾಂಚೈಸ್‌ನಲ್ಲಿ ಶೇಕಡ 95 ಮಂದಿ ಕಂದಾಯ ಕೊಡುತ್ತಿಲ್ಲ. ಕೊಡದೇ ಇರುವವರು ಕೊಡುವವರಮೇಲೆ ಇನ್ನೂ ಹೆಚ್ಚುಹೆಚ್ಚಾಗಿ ಹಾಕುವ ಒಂದು ಪರಿಸ್ಥಿತಿಯಿದೆ. ಈಗ ಕ್ಲಾಸ್‌ಲೆಸ್ ಸೊಸೈಟಿ ಆಗಬೇಕೆಂದಿದೆ. ಹಾಗೆ ಇಲ್ಲೂ ಒಂದು ಆಗಬೇಕು. ಏಕೆಂದರೆ, ಶೇಕಡ 5ರಷ್ಟು ಮಂದಿ ಕಂದಾಯ ಕೊಡುವವರೂ, ಶೇಕಡ 95 ಮಂದಿ ಕೊಡದಿರುವವರೂ ಈಗಿದ್ದಾರೆ. ಡೈರೆಕ್ಟ್ ಮತ್ತು ಇನ್‌ಡೈರೆಕ್ಟ್ ಟ್ಯಾಕ್ಸೇಷನ್ ಇದೆಯೆಂದು ನಾವು ಹೇಳಬಹುದು. ಆದರೆ ಡೈರೆಕ್ಟ್ ಟ್ಯಾಕ್ಸೇಷನ್ ಬೇಡ, ಎಲ್ಲಾ ಇನ್‌ಡೈರೆಕ್ಟ್ ಟ್ಯಾಕ್ಸೇಷನ್ ಮಾಡಿಬಿಡಿ, ಟ್ಯಾಕ್ಸ್‌ಲೆಸ್ ಸೊಸೈಟಿಯಾಗುವಂತೆ ಮಾಡಿ ಎಂದು ನಾನು ಹೇಳುತ್ತೇನೆ. ಬೇಕಾದರೆ ನಾನು ಯೋಚನೆಮಾಡಿ ಇದಕ್ಕೆ ಒಂದು ಸ್ಕೀಂ ಕೊಡಬೇಕೆಂದಿದ್ದೇನೆ. ಪ್ರತಿಯೊಬ್ಬ ಮನುಷ್ಯನಿಗೂ ಅವನ ಅವಶ್ಯಕತೆಗೆ ಬೇಕಾದ್ದನ್ನು ಅವನಿಂದ ಕೆಲಸ ತೆಗೆದುಕೊಂಡು ಅವನಿಗೆ ಒದಗಿಸಿಕೊಡಬೇಕು. ಆದರೆ ಕ್ಲಾಸ್‌ಲೆಸ್ ಸೊಸೈಟಿಯೆಂಬುದು ಬಹು ದೂರವಿದೆ. ಆದಾಗ್ಯೂ ಕೂಡ ಟ್ಯಾಕ್ಸ್ ವಸೂಲು ಮಾಡುವಾಗ ಬಹಳ ನ್ಯಾಯವಾಗಿ ಮಾಡಬೇಕು. ಇದನ್ನು ವರ್ಷೇ ವರ್ಷೇ ನಾವು ಹೇಳುತ್ತಿದ್ದೇವೆ. ಇನ್‌ಕಂಟ್ಯಾಕ್ಸ್, ಸೇಲ್ಸ್‌ಟ್ಯಾಕ್ಸ್ ಇವೆರಡರಲ್ಲೂ ಸಾಮಾನ್ಯವಾಗಿ ಕೊಡುವವರಿಗೆ ಬಹಳ ಕಿರುಕುಳವಾಗುತ್ತಿದೆ. ಇದನ್ನು ತಪ್ಪಿಸಬೇಕು. ಯಾವರೀತಿ ತಪ್ಪಿಸಬೇಕೆಂಬುದನ್ನು ಸರ್ಕಾರದವರು ಯೋಚನೆಮಾಡಬೇಕು. ಈ ಕಂದಾಯವನ್ನು ಹಾಕಿ ಹೀಗೆ ಇದೇ ರೀತಿಯಾಗಿ ನೀವು ಕಿರುಕುಳ ಜಾಸ್ತಿ ಮಾಡಿದರೆ ಅದರಿಂದ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈ ಕಿರುಕುಳಗಳನ್ನು ತಪ್ಪಿಸಿ ಎಷ್ಟು ಬೇಕಾದರೂ ಕಂದಾಯ ವಸೂಲುಮಾಡಿ, ಈ ರೀತಿಯಾಗಿ ಮಾಡುವ ಏರ್ಪಾಡನ್ನು ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಷಯ, ಬಡ್ಜೆಟ್ ಮೆಮೊರ್ಯಾಂಡಂನ 19ನೆಯ ಪುಟದಲ್ಲಿ " B. Receipts from Electricity Duties—Revised Estimate, 1955-66—26 lakhs " ಎಂದಿದೆ. 1956-57ರ ಬಡ್ಜೆಟ್ ಎಸ್ಟಿಮೇಟ್ 30 ಲಕ್ಷ ಎಂದಿದೆ. ಆದ್ದರಿಂದ ನಾಲ್ಕು ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ವಸೂಲು ಮಾಡಬೇಕಾಗಿದೆ. ಇದನ್ನು ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ಪ್ರಸ್ತಾಪಮಾಡಿದ್ದಾರೆ. ವಿವರ ಮೆಮೊರಾಂಡ ನಲ್ಲಿ ಕೊಟ್ಟಿಲ್ಲ. ಅದನ್ನು ಈಗ ಅಪ್ಪಣೆ ಕೊಡಿಸಿದರೆ ಬಹಳ ಸಂತೋಷವಾಗುತ್ತದೆ.

*Sri T. MARIAPPA (Mysore City-North).- A reference was made to me and therefore I want to speak for two minutes; otherwise, I did not want to speak on this. I thought the Race Club affairs had ended after the Finance Minister said that he would go into the whole matter. I am surprised my Hon'ble friend Sri Rajasekhara Murthy trying to expose the case of one party. I did not plead for any party on that day. Because I happened to look into the Financial Memorandum and there was no receipt under the heading 'Betting tax' and the Government had said that they proposed not to issue a licence, I raised that point. Sri Imam also raised that point. But Sri Rajasekhara Murthy raised the whole history of the case. Suffice it to say that he is not properly briefed. He seems to be more loyal than the king himself.

(*Laughter*)

* ಶ್ರೀ ಎಚ್. ಎಂ. ಚನ್ನಬಸಪ್ಪ (ಕೈಗಾರಿಕಾ ಶಾಖೆಯ ಮಂತ್ರಿಗಳು).—ಸೇಲ್ಸ್‌ಟ್ಯಾಕ್ಸ್ ಆಡಳಿತದ ವಿಷಯದಲ್ಲಿ ಕೆಲವು ಬಹಳ ಪ್ರಾಮುಖ್ಯವಾದಂಥ ಸಲಹೆಗಳನ್ನು ಸ್ನೇಹಿತರು ಕೊಟ್ಟಿರುವುದಕ್ಕೆ ಋಣಿಯಾಗಿದ್ದೇನೆ. ಸಾಮಾನ್ಯವಾಗಿ ಅವರು ಎತ್ತಿರುವ ಕೆಲವು ಪ್ರಶ್ನೆಗಳಿಗೆ ಸಮಾಧಾನ ಹೇಳಬೇಕಾದದ್ದು ನನ್ನ ಕರ್ತವ್ಯ. ಮೊಟ್ಟಮೊದಲನೆಯದಾಗಿ ಶ್ರೀ ಶ್ರೀನಿವಾಸಯ್ಯಂಗಾರ್‌ರವರು ಸುಮಾರು 50 ಲಕ್ಷ ರೂಪಾಯಿಗಳಷ್ಟು ಬಾಕಿಯಿದೆ, ಇಷ್ಟು ಹಣ ಬಾಕಿಯಿರುವುದಕ್ಕೆ ಕಾರಣವೇನು, ಇದರ ವಸೂಲಾತಿಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಪ್ರಶ್ನೆಮಾಡಿದರು. ಅದನ್ನು ಒಪ್ಪಬಹುದು. ಟ್ಯಾಕ್ಸೇಷನ್ ಜಾರಿಯಲ್ಲಿರುವಾಗ ಅದನ್ನು ಕ್ರಮವಾಗಿ ವಸೂಲು ಮಾಡುವುದು, ನ್ಯಾಯಕ್ಕೆ ವಿರೋಧವಿಲ್ಲದಿರುವಹಾಗೆ ವಸೂಲು ಮಾಡುವುದು ಕರ್ತವ್ಯ. ಈ ಸಭೆಗೆ ಸರಿಯಾದ ಅಂಕಿ ಅಂಶಗಳನ್ನು ತಿಳಿಸುವುದಾದರೆ ಈ ಹೊತ್ತು 46,73,000 ರೂಪಾಯಿಗಳ ಬಾಕಿಯಿದೆ. ಅದರಲ್ಲಿ 5,93,000 ರೂಪಾಯಿಗಳ ಬಾಕಿ ಬಳ್ಳಾರಿ ಜೊತೆಯಲ್ಲಿ ಬಂದಿದೆ. ಬಳ್ಳಾರಿ ನಮ್ಮಲ್ಲಿ ಮರ್ಜ್ ಆದಾಗ ಇಷ್ಟಾಯಿತು. ಈ ಹಣವನ್ನು ಆದಷ್ಟು ಬೇಗ ವಸೂಲುಮಾಡಬೇಕೆಂಬ ವಿಷಯದಲ್ಲಿ ಸರ್ಕಾರಕ್ಕೆ ತುಂಬ ಆಸಕ್ತಿಯಿದೆ. ನಮಗೆ ಕೆಲವು ಅಡ್ಡಿ ಆತಂಕಗಳಿವೆ. ಆ ಅಡ್ಡಿ ಆತಂಕಗಳನ್ನು ತಮಗೆ ತಿಳಿಸಿದರೆ ಬಹುಶಃ ನಮಗೆ ಇನ್ನೂ ಸಹಾಯವಾಗಬಹುದೆಂದು ತಿಳಿಸುತ್ತೇನೆ. ಇದರಲ್ಲಿ ಯಾವ ಯಾವ ಬಾಬಿನಲ್ಲಿ ಎಷ್ಟೆಷ್ಟು ಹಣ ನಿಂತಿದೆಯೆಂದು ತಿಳಿಸುವುದು ಆವಶ್ಯಕ. ರೆವೆನ್ಯೂ ಇಲಾಖೆ ಈಗ ಸೇಲ್ಸ್‌ಟ್ಯಾಕ್ಸ್ ವಸೂಲು ಮಾಡುವುದಿಲ್ಲವೆಂಬುದನ್ನು ಗಮನಿಸಬೇಕು. ನಾವು ಅಸೆಸ್ ಮಾಡಿದಮೇಲೆ ವಸೂಲಾತಿಗೆ ಕಳುಹಿಸುವುದು ರೆವೆನ್ಯೂ ಇಲಾಖೆಗೆ, ರೆವೆನ್ಯೂ ಇಲಾಖೆ ಸೇಲ್ಸ್‌ಟ್ಯಾಕ್ಸ್ ಇಲಾಖೆಗೆ ಹಣ ವಸೂಲು ಮಾಡಬೇಕು; ಅದಕ್ಕೆ ಕ್ರಮವಿದೆ. ರೆವೆನ್ಯೂ ಇಲಾಖೆ ವಸೂಲು ಮಾಡಬೇಕೆಂದು ಕಳುಹಿಸಿರುವುದು 28,75,000 ರೂಪಾಯಿಗಳು ಇನ್ನು ಸ್ಟೇ ಆರ್ಡರ್ ಇಷ್ಯೂ ಆಗಿ ಹೈಕೋರ್ಟ್ ರೆವೆನ್ಯೂ ಕಲೆಕ್ಷನ್ ಅಪೆಲೇಟ್ ಆರ್ಡರ್ಸ್, ಸ್ಟೇ ಆರ್ಡರ್ಸ್ ಇಷ್ಯೂ ಆಗಿರುವುದು 6 ಲಕ್ಷ ಚಿಲರೆ, ಮತ್ತು ಸೇಲ್ಸ್‌ಟ್ಯಾಕ್ಸ್ ಕೋರ್ಟುಗಳಲ್ಲಿ ಪ್ರಾಸಿಕ್ಯೂಟ್ ಆಗಿ ವಸೂಲು ಮಾಡಬೇಕೆಂದು ವಾರಂಟ್ ಇಷ್ಯೂ ಆಗಿರುವುದು 2 ಲಕ್ಷ 7 ಸಾವಿರ ರೂಪಾಯಿಗಳು, ಇನ್ನೂ ಕಲೆಕ್ಷನ್ನಿಗೆ ರೈಪ್ ಆಗಿರುವುದು 6,45,000 ರೂಪಾಯಿಗಳು, ಅಪೆಲೇಟ್ ರಿವಿಷನ್ 2 ಲಕ್ಷ ರೂಪಾಯಿಗಳು. ಒಟ್ಟು 46,73,000 ರೂಪಾಯಿಗಳನ್ನು ವಸೂಲು ಮಾಡುವುದಕ್ಕೆ ಅಡ್ಡಿಯೇನೆಂಬುದನ್ನು ಸ್ವಲ್ಪಮಟ್ಟಿಗೆ ಯೋಚನೆ ಮಾಡಬೇಕು. 28,75,000 ರೂಪಾಯಿಗಳು ಇದರಲ್ಲಿ ಬಹುಭಾಗವಾಗಿದೆ. ಸೇಲ್ಸ್‌ಟ್ಯಾಕ್ಸ್ ಆಫೀಸರು ನೇರವಾಗಿ ವಸೂಲು ಮಾಡದಿರುವುದು ಮತ್ತು ವಸೂಲು ಮಾಡುವುದಕ್ಕೆ

(ಶ್ರೀ ಎಚ್. ಎಂ. ಚನ್ನಬಸಪ್ಪ.)

ರೆವಿನ್ಯೂ ಅಧಿಕಾರಿಗಳ ಮೇಲೆ ನಿಲ್ಲಬೇಕಾಗಿರುವುದು ಒಂದು ಕಾರಣ. ಜೊತೆಗೆ ಸ್ಟೇ ಆರ್ಡರುಗಳ ಮೇಲೆ ಹೈಕೋರ್ಟಿಗೆ ಹೋಗಿ ರಿವಿಷನ್ ಅರ್ಜಿ ಹಾಕಿರುವುದ ರಿಂದ ಅನೇಕ ಹಣ ನಿಂತಿದೆ. ಕಾರಣವೇನೇ ಇರಲಿ ಅಗತ್ಯವಾದ ಸಿಬ್ಬಂದಿ ಒದಗಿಸಿ ಆವಶ್ಯಕವಾದ ಮಾರ್ಗ ಗಳಲ್ಲಿ ನ್ಯಾಯವಾಗಿ ವಸೂಲು ಮಾಡುವುದನ್ನು ಯೋಚನೆ ಮಾಡಲಾಗುತ್ತಿದೆ, ಸರ್ಕಾರಕ್ಕೆ ಆಸಕ್ತಿಯಿದೆ, ಜಾಗ್ರತೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ ಎಂದು ಭರವಸೆ ಕೊಡುತ್ತೇನೆ.

ಎರಡನೆಯದು ವರ್ಕಿಂಗ್ ಆಫ್ ದಿ ಆಕ್ಟ್ ವಿಚಾರ, ಈ ಕಾನೂನು ಜಾರಿಗೆ ಕೊಡುವುದರಲ್ಲಿ ಬಹಳ ಕಷ್ಟ ನಷ್ಟ ಜನರಿಗಾಗುತ್ತಿದೆ, ಸತ್ಯದಿಂದ, ನಿಷ್ಠೆಯಿಂದ ನಡೆಯುವ ವರ್ತಕರಿಗೆ ಬಹಳ ಕಷ್ಟವಾಗಿದೆ ಎಂದು ಪ್ರಸ್ತಾಪ ಮಾಡಿದರು. ನಮ್ಮ ಆಶಯವಾದರೂ ಕೂಡ ಸತ್ಯದಿಂದ, ನಿಷ್ಠೆಯಿಂದ ನಡೆಯುವ ವರ್ತಕರಿಗೆ ಎಳ್ಳಷ್ಟು ಕೂಡ ಮನಸ್ಸು ನೋಯದಂತೆ ಕೆಲಸವಾಗ ಬೇಕೆಂಬುದು. ತೆರಿಗೆ ಹಾಕುವುದು, ವಸೂಲು ಮಾಡುವುದು ಈ ಎರಡೂ ಕೂಡ ಬಹಳ ಕಷ್ಟತರವಾದ ವಿಷಯಗಳೆಂಬುದನ್ನು ಗಮನಿಸಬೇಕು. ತೆರಿಗೆ ಹಾಕುವ ಮನುಷ್ಯ, ವಸೂಲು ಮಾಡುವ ಮನುಷ್ಯ ಸಾಮಾನ್ಯ ವಾಗಿ ಜನರಲ್ಲಿ ವಿಶ್ವಾಸವನ್ನು ಹೆಚ್ಚಾಗಿ ಗಳಿಸುವುದು ಬಹಳ ಕಷ್ಟ, ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಇದರಲ್ಲಿ ನೋಡಬೇಕಾದದ್ದು ಶಾಸನವನ್ನು ಸರಿಯಾದ ರೀತಿ ಯಲ್ಲಿ ಜಾರಿಗೆ ಕೊಡುತ್ತಿದ್ದಾರೆಯೋ, ಇಲ್ಲವೇ ಅಥವಾ ದುರುದ್ದೇಶದಿಂದ ಜನಗಳಿಗೆ ಕಿರುಕುಳ ಕೊಡುತ್ತಿದ್ದಾ ರೆಯೋ ಎಂಬುದು. ಟ್ಯಾಕ್ಸ್ ಹಾಕಿದಮೇಲೆ ಯಾರೂ ಕೂಡ ದೇಶದಲ್ಲಿ ಸಂತೋಷದಿಂದ ಹಾಕಿರುವುದನ್ನೆಲ್ಲಾ ಸರಿಯಾಗಿ ಸಲೀಸಾಗಿ ಕೊಡುವುದು ಬಹಳ ಅಪರೂಪ. ಅಸೆಸ್‌ಮೆಂಟ್ ಮಾಡಿದಾಗ ಕಾನೂನಿಗೆ ವಿರೋಧವಾಗಿ ಅಸೆಸ್ ಮಾಡುತ್ತಾರೆಂಬ ಆಪಾದನೆ ಬಂದಿದೆ. ಮತ್ತು ಲೆಕ್ಕಪತ್ರ ಇಟ್ಟರೆ ನಮ್ಮ ಲೆಕ್ಕ ನಂಬುವುದಿಲ್ಲ ವೆಂದು ಬಿಸಾಕಿ ಅವರೇ ಬೇರೆ ಹೆಚ್ಚಾಗಿ ಅಸೆಸ್‌ಮೆಂಟ್ ಮಾಡುತ್ತಾರೆಂಬುದು ಎರಡನೆಯದು. ಮೂರನೆ ಯದು ಅಸೆಸ್‌ಮೆಂಟ್ ಮಾಡಿದಮೇಲೆ ಪುನಃ ರಿವಿಷನ್ ಆಗಿ ಅದಕ್ಕೂ ಇದಕ್ಕೂ ಇರುವ ಅಂತರ ಕಂಡುಹಿಡಿದು ರಿವೈಜ್ ಆದಮೇಲೆ ಎರಡಕ್ಕೂ ಕಾರಣ ಕೊಡಬೇಕು ಹೆಚ್ಚಿಸಿದಾಗ ಏಕೆ ಹಾಗೆ ಮಾಡಿದೆಯೆಂದು ಕೇಳಿದರೆ ಹೇಳುವುದು ನ್ಯಾಯವಾಗಿದೆ. ಈ ಮೂರು ವಿಷಯ ಗಳಲ್ಲೂ ಸರ್ಕಾರಕ್ಕೂ ಮತ್ತು ಸದಸ್ಯರಿಗೂ ಭಿನ್ನಾಭಿ ಪ್ರಾಯವಿಲ್ಲ. ಸಾಮಾನ್ಯವಾಗಿ ಓವರ್ ಅಸೆಸ್‌ಮೆಂಟ್ ಮಾಡುವುದು ಶುದ್ಧ ತಪ್ಪು, ಅಂಡರ್ ಅಸೆಸ್‌ಮೆಂಟ್ ಮಾಡುವುದೂ ಸರಿಯಲ್ಲ. ಈ ಎರಡನ್ನೂ ಕೂಡ ಸರಿಯೆಂದು ಸರ್ಕಾರ ಹೇಳುವುದು ಕಷ್ಟ. ಆದರೆ ಈ ಅಸೆಸ್‌ಮೆಂಟ್ ಮಾಡುವಾಗ ಪ್ರೊಫೆಷನಲ್ ಅಸೆಸ್ ಮೆಂಟ್ ಏನಿದೆ ಅದನ್ನು ಅಸೆಸ್ ಮಾಡತಕ್ಕದ್ದು ಬಹಳ ಕಷ್ಟವಾದ ಕೆಲಸ. ಒಂದುವೇಳೆ ಸತ್ಯವಾಗಿ ಮಾಡ ಬೇಕಾದರೆ ಒಬ್ಬ ಮನುಷ್ಯ ಹಿಂದೆ ಬೇಕಾದಷ್ಟು ವ್ಯಾಪಾರ ಮಾಡುತ್ತಿದ್ದರೂ ಈ ವರ್ಷ ಪಾಪರಾಗ ಬಹುದು ಅಥವಾ ಹೆಚ್ಚು ಮಾಡಿದರೂ ಮಾಡಬಹುದು. ಹಿಂದಿನ ಆಧಾರದಮೇಲೆ ಪ್ರೊಫೆಷನಲ್ ಅಸೆಸ್ ಮೆಂಟ್ ಮಾಡುತ್ತಾರೆ. ಈ ವರ್ಷ ವ್ಯಾಪಾರ ಹೆಚ್ಚಾಗಿ ಮಾಡಿಲ್ಲ, ಹಿಂದೆ ಕಡಮೆ ತೆರಿಗೆ ಹಾಕಿ ಈಗೇಕೆ ಹೆಚ್ಚಾಗಿ ಹಾಕಿದೆ ಎಂದು ಕೇಳಿದರೆ ಹೆಚ್ಚು ವ್ಯಾಪಾರ ವಾಗಿದೆಯೆಂದು ಹೇಳಬಹುದೇ ವಿನಾ ಬೇರೆ ಹೇಳಲು ಸಾಧ್ಯವಿಲ್ಲ. ಟರ್ನ್ ಓವರ್ ಬಹಳ ಹೆಚ್ಚಾಗಿದೆ, ಕಡಮೆ ಅಸೆಸ್‌ಮೆಂಟ್ ಮಾಡಿದೆ ಎಂದು ಹೇಳುವುದು ವಿಚಾರಮಾಡಲು ಅರ್ಹವಾದ ವಿಷಯ. ಅಂತೂ ಈ ವಿಷಯವನ್ನು ಸರ್ಕಾರ ಪರ್ಯಾಲೋಚಿಸಿ ಅಂಡರ್ ಅಸೆಸ್‌ಮೆಂಟ್, ಓವರ್ ಅಸೆಸ್‌ಮೆಂಟ್ ಈ ಎರಡನ್ನೂ ಕೂಡ ಸಂಪೂರ್ಣವಾಗಿ ತೆಗೆಯುವುದು ಕಷ್ಟವಾದರೂ ಕೂಡ ಮಿನಿಮ್ಯಮ್ ಮಾಡಿ ಹತೋಟಿ ಯಲ್ಲಿಡಬೇಕೆಂಬ ಆಸಕ್ತಿಯಿದೆ ನಾವು ಸೂಕ್ತ ಕಾರ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಅಧಿಕಾರಿಗಳು ವರ್ತಕರ ವಿಷಯದಲ್ಲಿ ಬಹಳ ಅಗೌರ ವದಿಂದ ವರ್ತಿಸುತ್ತಾರೆಂಬ ಆಪಾದನೆ ಮಾಡಿದ್ದಾರೆ. ಈ ಸಭೆಗೆ ಸರ್ಕಾರದ ಪರವಾಗಿ ಕೊಡುವ ಭರವಸೆ ಯಾವ ಸತ್ಯವಾದಿಯಾದ ವ್ಯಾಪಾರಸ್ತ, ಅಸೆಸಿ ಎಂದು ಹೇಳುತ್ತಾರೋ ಅವರಿಗೆ ಯಾವುದಾದರೂ ಒಂದು ಅಕ್ರಮವಾದ ರೀತಿಯಲ್ಲಿ ತೊಂದರೆಮಾಡಿ ಅವರ ಗೌರವ ಕಡಮೆಯಾಗುವ ರೀತಿಯಲ್ಲಿ ವರ್ತನೆಮಾಡಿದರೆ ಅದನ್ನು ಗಮನಕ್ಕೆ ತಂದರೆ ಖಂಡಿತವಾಗಿಯೂ ಉಗ್ರ ವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಅವರೂ, ಇವರೂ ಇಬ್ಬರೂ ಇರುವ ಕಾಲದಲ್ಲಿ ನಾನು ಈ ಮಾನ್ಯ ಸಭೆಗೆ ಒಂದು ವಿಷಯವನ್ನು ತಿಳಿಸ ಬೇಕಾಗಿರುತ್ತದೆ. ಯಾವ ಅಧಿಕಾರಿಯೇ ಆಗಲಿ ಯಾರೊಬ್ಬರ ವಿಷಯದಲ್ಲೇ ಆಗಲಿ ವಿನಯ-ಗೌರವ ಗಳಿಂದ ವರ್ತಿಸಬೇಕೆಂದು ಕಟ್ಟಾಜ್ಞೆ ಕೊಟ್ಟಿದ್ದೇನೆ. ಒಂದುವೇಳೆ ಹಾಗೇನಾದರೂ ಅವರು ಈ ಆಜ್ಞೆಗೂ ಮೀರಿ ಹಾಗೆ ಅಕ್ರಮವಾಗಿ ವರ್ತಿಸಿದ್ದಾರೆಂಬ ವಿಚಾರವನ್ನು ನನ್ನ ಗಮನಕ್ಕೆ ತಂದರೆ-ಅದನ್ನು ರುಜು ವಾತು ಮಾಡಿಕೊಟ್ಟರೆ ಅಂಥವರಮೇಲೆ ಖಂಡಿತವಾ ಗಿಯೂ ಉಗ್ರ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಿದ್ಧವಾಗಿದ್ದೇವೆ. ಈಗ ಕಾಲ ಬರಬರುತ್ತಾ ನಾಜೋಕಾಗುತ್ತಿದೆ. ಕೋರ್ಟುಗಳಲ್ಲಿ ವ್ಯವಹಾರ ನಡೆಯಲು ಅವಕಾಶ ಕೊಟ್ಟರೆ ನಾಳೆ ನಾವು ಅಲ್ಲಿ ನಮ್ಮ ನಿಲುವನ್ನು ರುಜುವಾತು ಮಾಡಬೇಕಾದರೆ ಬಹಳ ಕಷ್ಟವಿರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಸಾಸ್ತ್ರ ಪಾಂಶಗಳಿಗೆ ವಿರುದ್ಧವಾಗಿ ತೀರ್ಮಾನವಾಗಿ ನ್ಯಾಯಕ್ಕೆ ಬೆಲೆ ದೊರೆಯದೆ ಹೋಗಿದೆ. . . .

ಶ್ರೀ ಡಿ. ದೇವರಾಜ ಅರಸ್.—ಈ ಓವರ್ ಅಸೆಸ್ ಮೆಂಟ್ ಮತ್ತು ಅಂಡರ್ ಅಸೆಸ್‌ಮೆಂಟ್ ವಿಚಾರದಲ್ಲಿ ತಾವು ಏನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದಿ ದ್ದೀರೋ ಅದೆಲ್ಲಾ ಮುಂದೆ ನಡೆಯತಕ್ಕಂಥ ವಿಚಾರ ಗಳಿಗೆ ಸಂಬಂಧಪಟ್ಟದ್ದಾಗಿದೆ. ಈಗ ಆ ಅಧಿಕಾರಿ ಗಳು ಈ ಪಾಪಿಷ್ಟರಾದಂಥ ವರ್ತಕರ ವಿಚಾರದಲ್ಲಿ, ಏತಕ್ಕೆಂದರೆ ಈ ವರ್ತಕರು ಯಾವಾಗ್ಲೂ ಪಾಪಿಷ್ಟರೆ, ಅಧಿಕಾರಿಗಳು ಸರಿಯಾದ ರೀತಿಯಲ್ಲಿ ವರ್ತಿಸತಕ್ಕ ಬಗ್ಗೆ 4-5 ಸಾರ್ತಿ ಸರ್ಕಾರ ಆಜ್ಞೆಯನ್ನು ಹೊರಡಿಸಿ ದ್ದಾಯಿತು. ಆದರೆ ಈ ವರೆಗೂ ಇದನ್ನು ಸರಿಪಡಿಸು ವುದಕ್ಕೆ ತಮ್ಮ ಕೈಲಿ ಆಗಲಿಲ್ಲ.

Why should they not be courteous to the merchants?

Sri H. M. CHANNABASAPPA.—Probably he is very anxious to see that all people in the country are treated with respect. We do our utmost to see that it is enforced, but in cases of breach Government are prepared to take to task any person who is proved to have behaved like that. ನಾನು ಹೇಳಿ ದ್ದರಲ್ಲೇ ಎಲ್ಲಾ ಅಂಶಗಳೂ ಅರ್ಥಗರ್ಭಿತವಾಗಿ ರುತ್ತವೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಈ ಅಧಿಕಾರಿಗಳ ವಿಚಾರವನ್ನು ಪ್ರಸ್ತಾಪಿಸುತ್ತಾ ಇವರಲ್ಲಿ ದಕ್ಷತೆ, ಸೇವಾತತ್ಪರತೆ, ಸತ್ಯಸಂಧತೆ ಇತ್ಯಾದಿಗಳು ಹೆಚ್ಚಾಗುವಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬುದಾಗಿ ಸೂಚನೆ ಮಾಡಿದ್ದಾರೆ. ಇದೇನೋ ಬಹಳ ಗಮನಾರ್ಹವಾದ ವಿಚಾರ. ಈ ಇಲಾಖೆಯು ಅಧಿಕ ವರಮಾನವನ್ನು ಸರ್ಕಾರಕ್ಕೆ ತರತಕ್ಕಂಥಾದ್ದಾಗಿದೆ. ನ್ಯಾಯವಾಗಿಯೂ ಸರ್ಕಾರಕ್ಕೆ ಎಷ್ಟು ಹಣ ಈ ಬಾಬಿನಿಂದ ಬರಬೇಕೋ ಅಷ್ಟನ್ನೂ ಸರ್ಕಾರಕ್ಕೆ ಸಂಪೂರ್ಣವಾಗಿ ಸೇರುವಂಥ ರೀತಿಯಲ್ಲಿ ಕೆಲಸ ನಡೆಸತಕ್ಕಂಥ ದಕ್ಷರಾದ, ಶಕ್ತರಾದ ಅಧಿಕಾರಿಗಳನ್ನು ಈ ಕ್ಷೇತ್ರದಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವ ಸಮಯದಲ್ಲಿ ನೋಡಿ ಅಂಥವರನ್ನೇ ಆರಿಸಿಕೊಳ್ಳಬೇಕೆಂಬ ಅಭಿಪ್ರಾಯವನ್ನು ಸರ್ಕಾರದವರು ಸಂಪೂರ್ಣವಾಗಿ ತಮ್ಮ ಗಮನದಲ್ಲಿಟ್ಟುಕೊಂಡಿರುತ್ತಾರೆ ಎನ್ನುವ ಭರವಸೆಯನ್ನು ನಾನೀಗ ತಮಗೆ ನೀಡಬಲ್ಲೆ. ಇನ್ನು ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳಿಗೆ ಭಡ್ತಿ ಕೊಟ್ಟಿರುವ ವಿಚಾರವನ್ನು ಸೂಕ್ಷ್ಮವಾಗಿ ಚರ್ಚೆ ಮಾಡಿದ್ದಾರೆ. ಈ ಹಿಂದೆ 1944 ರಲ್ಲಿ ಕೆಲವು ಅಧಿಕಾರಿಗಳನ್ನು ಈ ಇಲಾಖೆಗೆ ನೇಮಕ ಮಾಡಿಕೊಳ್ಳಲಾಗಿತ್ತು. ಅವರಿಗೆ ಈಗ ಪ್ರಮೋಷನ್ ಕೊಟ್ಟು ಈಗ ಅವರನ್ನು ಅಸಿಸ್ಟೆಂಟ್ ಸೇಲ್ಸ್ ಟ್ಯಾಕ್ಸ್ ಆಫೀಸರುಗಳನ್ನಾಗಿ ನೇಮಕ ಮಾಡಲಾಗಿದೆ. ಇವರು ಇದೇ ಇಲಾಖೆಯಲ್ಲಿ 8-10 ವರ್ಷಗಳಿಂದ ದಕ್ಷತೆಯಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆಂಬ ಅಂಶದಮೇಲೆ ಇವರಿಗೆ ಹಾಗೆ ಪ್ರಮೋಷನ್ ಕೊಡಲಾಯಿತು. ಆದರೆ ಇತ್ತೀಚೆಗೆ 1954ರಲ್ಲಿ ಮತ್ತೊಂದು ಸರ್ಕಾರಿ ಹುಕುಂ ಹೊರಡಿಸಿ ಈ ಹುದ್ದೆಗಳನ್ನು ಪದವೀಧರರಾಗಿತಕ್ಕವರಿಗೆ ಮಾತ್ರವೇ ಕೊಡಬೇಕೆಂದು ತಿಳಿಸಿದೆ.

ಇನ್ನು ಈ ಕಕೂನ್ ಮತ್ತು ರೇಷ್ಮೆ ಮಾರಾಟಗಾರರ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಆದರೆ ಈ ದಿವಸ ಈ ರೇಷ್ಮೆ ಗೂಡುಗಳನ್ನು ಯಾರು ಬೆಳೆಯುತ್ತಾರೋ ಅವರೇ ಅವುಗಳ ಮಾರಾಟವನ್ನು ಮಾಡಿದ ಪಕ್ಷದಲ್ಲಿ ಅವರು ಯಾವ ಮಾರಾಟದ ತೆರಿಗೆಯನ್ನು ಕೊಡಬೇಕಾಗಿಲ್ಲ. ಆದರೆ ಈ ಗೂಡುಗಳು ಮಧ್ಯಸ್ಥಗಾರರಿಂದ ಮಾರಾಟ ಆಗಬೇಕಾಗಿದ್ದರೆ ಆ ಮಧ್ಯಸ್ಥಗಾರನು ಈ ಬಗ್ಗೆ ಲೈಸೆನ್ಸ್ ಪಡೆಯಬೇಕು ಎಂಬುದಾಗಿ ಕಾನೂನಿದೆ. ಆದರೆ ಯಾರು ಈ ದಿವಸ ಹಾಗೆ ಆ ಲೈಸೆನ್ಸನ್ನು ಪಡೆಯದೆ ಈ ಮಾರಾಟವನ್ನು ಮಾಡುತ್ತಿದ್ದಾರೋ ಅಂಥವರ ಮೇಲೆ ಮಾತ್ರ ನಾವೀದಿವಸ ಈ ಸೇಲ್ಸ್ ಟ್ಯಾಕ್ಸನ್ನು ಹಾಕಿದ್ದೇವೆ. ಹೀಗೆ ನಾವು ಈಹೊತ್ತು ಇವರಿಂದ ಈ ಟ್ಯಾಕ್ಸ್ ವಸೂಲ್ಮಾಡುತ್ತಿರುವುದು ನ್ಯಾಯವೇ ಅಲ್ಲವೇ ಎಂಬುದನ್ನು ನೀವೇ ತೀರ್ಮಾನ ಮಾಡಿ. ಆದರೆ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಹೇಳಿದರು — "ಅವರು ಮುಗ್ಧರು—ಅವರಿಗೆ ತಿಳವಳಿಕೆ ಇರುವುದಿಲ್ಲ ಅದಕ್ಕಾಗಿ ಅವರು ಲೈಸೆನ್ಸ್ ತೆಗೆದುಕೊಂಡಿಲ್ಲ" ಎಂಬುದಾಗಿ. ಆದರೆ ಕಾನೂನಿನಲ್ಲೇ ಬರೆದಿದೆ Ignorance of law is not excusable ಎಂದು.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಈ ಮಾರಾಟ ತೆರಿಗೆ ಜಾರಿಗೆ ಬಂದದ್ದು 1948ರಲ್ಲಿ. ತಾವು ಆಗಿನಿಂದ ಏಕೆ ಇದನ್ನು ಡಿಮ್ಯಾಂಡ್ ಮಾಡಲಿಲ್ಲ? ಐದುವರ್ಷಗಳತನಕ ಡಿಮ್ಯಾಂಡ್ ಮಾಡದೆ ಹಾಗೆಯೇ ಸುಮ್ಮನಿದ್ದು ಈಗ ಏಕೆ ಏಕಾಏಕಿ ನೋಟೀಸ್ ಕೊಟ್ಟಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಅಂಶವನ್ನು ನಾನು ಹೇಳುವುದಾದರೆ ಇದರಿಂದ ಮುಖ್ಯವಾಗಿ ಆ ಬಡ ಜನಗಳಾರಿಗೂ ತೊಂದರೆಯಾಗಬಾರದು, ಈ ಗೃಹಕೈಗಾರಿಕೆಗೆ ಯಾವಧಕ್ಕೆಯೂ ಆಗಬಾರದು ಎನ್ನುವ ಅಂಶ ಸರ್ಕಾರದವರ ಗಮನದಲ್ಲಿದೆ. ಆದರೆ ಈ ಕಕೂನ್ ತಯಾರು ಮಾಡತಕ್ಕವರೂ—ಈ ಕಕೂನ್‌ಗಳನ್ನು ಮಾರಾಟಮಾಡತಕ್ಕವರೂ ಒಟ್ಟಿಗೆ ಸೇರಿಕೊಂಡು ಒಂದು ಸಹಕಾರ ಸಂಘವನ್ನು ಸ್ಥಾಪಿಸಿಕೊಂಡಿದ್ದೇ ಆದರೆ ಆಗ್ಗೆ ಈ ತೊಂದರೆಗಳೆಲ್ಲಾ ತಾವಾಗಿಯೇ ತಪ್ಪಿ ಹೋಗುತ್ತವೆ. ಆದರೆ ಈ ಮಧ್ಯವರ್ತಿ ಜನರು ಇತ್ತಲಾಗಿ ಲೈಸೆನ್ಸನ್ನೂ ತೆಗೆದುಕೊಳ್ಳದೆ—ಅತ್ತಲಾಗಿ ಟ್ಯಾಕ್ಸನ್ನೂ ಕೊಡದೆ ತಪ್ಪಿಸಿಕೊಂಡು ಹೋಗುತ್ತಿದ್ದರೆ ಇಂಥವರನ್ನು ಹಿಡಿದು ಅವರ ಮೇಲೆ ಈ ತೆರಿಗೆಯನ್ನು ಹಾಕಿರತಕ್ಕದು ಸೂಕ್ತವೇ ಅಲ್ಲವೇ ಎಂಬುದನ್ನು ನೀವೇ ಆಲೋಚನೆ ಮಾಡಿ. ಈ ಕಾನೂನು 1948ರಲ್ಲಿ ಜಾರಿಗೆ ಬಂವರೂ ಆಗಿನಿಂದ ತಾವು ಸುಮ್ಮನಿದ್ದು ಈಗ ಏಕಾಏಕಿ ಇವರ ಮೇಲೆ ಕಾರ್ಯಕ್ರಮಗಳನ್ನು ಕೈಗೊಳ್ಳಲು ಕಾರಣವೇನೆಂದು ಕೇಳಿದ್ದಾರೆ. ಆದರೆ ಹೀಗೆ ಇವರ ಮೇಲೆ ಈ ತೆರಿಗೆಹಾಕತಕ್ಕದು ಸೂಕ್ತವೆ—ಅಲ್ಲವೇ ಎಂಬ ಅಂಶವನ್ನು ಕಾನೂನು ದೃಷ್ಟಿಯಿಂದ ವಿಮರ್ಶೆ ಮಾಡಲ್ಪಡುತ್ತಿತ್ತು. ಆದರೆ ಈಗ ಇವರ ಮೇಲೆ ಈ ತೆರಿಗೆ ಹಾಕಲು ಕಾನೂನಿನಲ್ಲಿ ಅವಕಾಶವಿದೆ. ಆದ್ದರಿಂದ ಈಗ ಅವರ ಮೇಲೆ ಈ ತೆರಿಗೆ ಹಾಕಲಾಗಿದೆ ಎಂಬುದನ್ನು ತಿಳಿಸಿದರೆ ಆಗ ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಮನಸ್ಸಿಗೂ ಕೂಡ ಸಮಾಧಾನವಾಗಬಹುದೆಂದು ನಾನು ಭಾವಿಸಿದ್ದೇನೆ. 20 ಸಾವಿರಕ್ಕೂ ಮೇಲಲ್ಲದೆ ಮತ್ತು ಈ ಮೊಬಲಗಿಂತ ಕಡಮೆ ವ್ಯವಹಾರ ಮಾಡತಕ್ಕವರಿಗೆ 100 ರೂಪಾಯಿ ಮಾರಾಟ ತೆರಿಗೆಯನ್ನು ಕೊಡ ಬೇಕೆಂದು ಕಾನೂನಿನಲ್ಲೇ ಬರೆದಿದೆ. ಒಂದು ವೇಳೆ ಅವರು ನೇರವಾಗೇ ಈ ತೆರಿಗೆಯನ್ನು ಕೊಡುವುದಾದರೆ ಅಂಥವರಿಗೆ ಇನ್ನೂ ಕಡಿಮೆ ತೆರಿಗೆಯನ್ನು ಗೊತ್ತು ಮಾಡಿದ್ದೇವೆ. ಆದ್ದರಿಂದ ತಮಗೆ ಈ ವಿಚಾರದಲ್ಲಿ ಹೆಚ್ಚಿನ ಭಿನ್ನಾಭಿಪ್ರಾಯವಿಲ್ಲದಿರುವುದರಿಂದ ಈ ವಿಚಾರವನ್ನು ಇಷ್ಟಕ್ಕೇ ಬಿಟ್ಟುಬಿಡುತ್ತೇನೆ. ಆದರೆ ಇದೇ ಮಾನ್ಯ ಸಭೆಯಲ್ಲಿ ಶ್ರೀ ಎಸ್. ಕರಿಯಪ್ಪನವರೂ ಶ್ರೀಮಾನ್ ಯು. ಎಂ. ಮಾದಪ್ಪನವರೂ, ಶ್ರೀಮಾನ್ ರಾಜಶೇಖರ ಮೂರ್ತಿಯವರೂ ಈ ವಿಚಾರದಲ್ಲಿ ವಿಶೇಷವಾಗಿ ಚರ್ಚೆಮಾಡಿ ಈ ತೆರಿಗೆದಾರರಿಗೆ ತಾವು ಇದರ ಬಗ್ಗೆ ಕೊಂಚ ರಿಲೀಫ್ ಕೊಟ್ಟರೆ—ಆ ರೀತಿ ಸರ್ಕಾರ ಒಂದು ಆಜ್ಞೆ ಹೊರಡಿಸಿದ್ದೇ ಆದರೆ ಇದರಲ್ಲಿ ಟ್ಯಾಕ್ಸ್ ಇವೇಷನ್ ತಪ್ಪಿಹೋಗಿ ಇನ್ನೂ ಹೆಚ್ಚಿನ ವರಮಾನ ಬರುವುದಕ್ಕೆ ಅವಕಾಶವಿದೆಯೆಂದು ಸಲಹೆ ಮಾಡಿದ್ದರು. ಅದೇ ರೀತಿ ಸರ್ಕಾರಕ್ಕೂ ಕೂಡ ಒಂದು ಮನವಿ ಬಂತು. ಆಗ ಈ ವಿಚಾರಗಳನ್ನೆಲ್ಲಾ ವಿಮರ್ಶೆ ಮಾಡಲು Taxation Enquiry Committee ಎಂಬುದಾಗಿ ಒಂದು ಸಮಿತಿಯನ್ನು ನೇಮಕ ಮಾಡಿ ಅದಕ್ಕೆ ಈ ಬಗ್ಗೆ ಒಂದು ಸೂಕ್ತ ಸಲಹೆ ನೀಡಬೇಕೆಂದು ಕೇಳಲಾಯಿತು. ಆ ಸಮಿತಿಯವರು ಈ ಬಗ್ಗೆ ಒಂದು ವಿಜಿಲೆನ್ಸ್ ಸಮಿತಿಯನ್ನು ನೇಮಕ ಮಾಡಿ ಕೆಲವು ಗೂಢಚಾರರನ್ನು ಇಟ್ಟುಕೊಂಡು ಕೆಲಸ ಮಾಡಿದರೆ ಆಗ ಒಂದು ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುವುದಕ್ಕೂ ಮತ್ತು ಈ ಟ್ಯಾಕ್ಸ್ ಇವೇಜನ್ನನ್ನು ತಪ್ಪಿಸುವುದಕ್ಕೂ ಅನುಕೂಲವಾಗುವುದೆಂದು ಶಿಫಾರ್ಸು ಮಾಡಿದರು. ಈಗ ಆ ಶಿಫಾರ್ಸುಗಳಿಗನುಗುಣವಾಗಿ ಕೆಲಸವನ್ನು ಕೈಗೊಳ್ಳಲು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ.

(ಶ್ರೀ ಎಚ್. ಎಂ. ಚನ್ನಬಸಪ್ಪ).

ಇನ್ನು ಈ ಕಂಟ್ರಾಕ್ಟರ ವಿಚಾರ ಬಂತು. ಆದರೆ ಈ ಕಂಟ್ರಾಕ್ಟರುಗಳು ಲೈಸೆನ್ಸದಾರರಾಗಿರಬೇಕು ಎಂದು ಕಾನೂನಿನಲ್ಲಿ ವಿಧಾಯಕ ಮಾಡಲಾಗಿದೆ. ಹೀಗಿದ್ದಮೇಲೂ ಅವರು ಈ ಲೈಸೆನ್ಸನ್ನು ಪಡೆಯದೆ ಕಾನೂನು ಉಲ್ಲಂಘನೆ ಮಾಡಿದ್ದಕ್ಕೆ ಅವರಿಗೆ ಶಿಕ್ಷೆ ಮಾಡುವುದರಲ್ಲಿ ತಪ್ಪೇನೂ ಇಲ್ಲ. ಈ ದಿವಸ ಈ ಸಿಮೆಂಟ್, ಕಬ್ಬಿಣ—ಇತ್ಯಾದಿ ಸಾಮಾನುಗಳ ಬಗ್ಗೆ ಆತನು ಮೊದಲನೆ ಡೀಲರ್ರೈ ಆಗಿರಲಿ. ಅಥವಾ ಎರಡನೆ ಡೀಲರ್ರೈ ಅಗಿರಲಿ ಆತನು ಆ ಸೆಕ್ಷನ್ 2 (B) (C) ಪ್ರಕಾರ. . . .

Sri B. NARAYANASWAMY.—The contractor is only a consumer. He is not a dealer. He is a purchaser of some commodity.

Sri H. M. CHANNABASAPPA.—It is a question of interpretation of law.

Sri B. NARAYANASWAMY.—It is a misinterpretation by your officer. You please see the definition of 'dealer'.

Sri H. M. CHANNABASAPPA.—That is a matter of opinion. Whether a contractor comes within the term 'dealer' or not, it is for the Courts to interpret; it is not for me to interpret it. ಇದರಲ್ಲಿ ಒಂದು ಮುಖ್ಯವಾದ ವಿಚಾರವಿದೆ. ಅವರು ಈ ಸಿಮೆಂಟು, ಕಬ್ಬಿಣ—ಇತ್ಯಾದಿ ಸಾಮಾನುಗಳನ್ನು ನೇರವಾಗಿ ನಮ್ಮ ಭದ್ರಾವತಿ ಕಾರ್ಖಾನೆಯಲ್ಲಿ ತೆಗೆದುಕೊಳ್ಳಬೇಕು ಎಂಬ ನಿರ್ಬಂಧವಿಲ್ಲ. . . .

Sri B. NARAYANASWAMY.—There are separate agents who are registered delers.

Sri H. M. CHANNABASAPPA.—Why don't you have the patience to hear me? ಅವರು ಭದ್ರಾವತಿಯಲ್ಲಾದರೂ ತೆಗೆದುಕೊಳ್ಳಬಹುದು—ಮತ್ತೆಲ್ಲಾದರೂ ತೆಗೆದುಕೊಳ್ಳಬಹುದು. ಭದ್ರಾವತಿಯಲ್ಲಾದರೆ ನಮಗೆ ಟ್ಯಾಕ್ಸ್ ಬರುತ್ತದೆ. ಆದರೆ ಅದಕ್ಕೆ ಬದಲಾಗಿ ಅವರು ಮದರಾಸಿಗೆ ಹೋಗಿ ಅಲ್ಲಿಂದ 10,000 ಮೂಟೆ ಸಿಮೆಂಟನ್ನು ತಂದರೆ ಆಗ ಅವನು ಫಸ್ಟ್ ಡೀಲರ್ ಆಗುತ್ತಾನೋ ಇಲ್ಲವೋ? ಆದರೆ ಕಡ್ಡಾಯವಾಗಿ ಅವರೆಲ್ಲರೂ ಆ ಭದ್ರಾವತಿಯಲ್ಲೇ ತೆಗೆದುಕೊಳ್ಳಬೇಕೆಂಬ ನಿರ್ಬಂಧವೇನೂ ಇಲ್ಲ. ಈ ಕಾರಣದಿಂದ ಈ ದಿವಸ ಅವರು ಬೇರೆ ಕಡೆಯಿಂದ ಈ ಮಾಲುಗಳನ್ನು ತಂದರೆ ಆಗ ಅವರು ಫಸ್ಟ್ ಡೀಲರ್ ಆಗಲು ಅವಕಾಶವಿದೆ. ಒಂದು ವೇಳೆ ಹೀಗೆ ಯಾರಾದರೊಬ್ಬ ಮದರಾಸಿಗೆ ಹೋಗಿ ಒಂದು ಹತ್ತು ಸಾವಿರ ಸಿಮೆಂಟ ಮೂಟೆಗಳನ್ನು ತಂದಿದ್ದ ಪಕ್ಷದಲ್ಲಿ ಆಗಲೂ ಕೂಡ ತಾವು ಏಕೆ ಆತನ ಮೇಲೆ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಿಲ್ಲ ಎಂದು ಕೇಳುತ್ತೀರಿ. But anyway that is a point which we have got to see. Government have some difficulties in these matters. It is not my intention that people who do not come within the operation of this Act should be taxed. But there should not be tax evasion. I hope I have the backing of all the members in this regard. I do not want tax evasion to take place. ಇನ್ನು ಈ ಮ್ಯೂಜಿಕಲ್ ಇನ್‌ಸ್ಟ್ರುಮೆಂಟ್ಸ್‌ಗಳ ಬಗ್ಗೆ ವಿಚಾರ ಎತ್ತಿದ್ದಾರೆ. ಇದರಲ್ಲಿ ತಂತಿ ಮತ್ತು ಮರ ಈ ಎರಡನ್ನೂ ಸೇರಿಸಿ ಈ ಮ್ಯೂಜಿಕಲ್ ಇನ್‌ಸ್ಟ್ರುಮೆಂಟ್‌ಗಳನ್ನು ತಯಾರಿಸುತ್ತಿದ್ದಾರೆ. ಇಂಥ ಉಪಕರಣದ ಮೇಲೆ ಈಗ ಒಂದಾಣೆ ಟ್ಯಾಕ್ಸನ್ನು ಮಾತ್ರ ಹಾಕಿದ್ದೇವೆ. ಇದರಲ್ಲಿ ತಪ್ಪೇನಿದೆ? ಆದರೆ ಈಗ ಸದ್ಯಕ್ಕೆ ಇದನ್ನು ವಜಾಮಾಡುವುದಕ್ಕಾಗುವುದಿಲ್ಲ. ಮುಂದೆ ಬೇಕಾದರೆ ನೋಡೋಣ. I think I have answered almost all points.

ಇನ್ನು ಕೊನೆಯದಾಗಿ ಈ ರೇಸ್ ಕ್ಲಬ್ಬಿನ ವಿಚಾರ ಬಹಳವಾಗಿ ಪ್ರಸ್ತಾಪಿಸಲ್ಪಟ್ಟಿದೆ. ರೂಲ್ 7ರ ಪ್ರಕಾರ ಮಾನ್ಯ ಮುಖ್ಯ ಮಂತ್ರಿಗಳವರು ಒಂದು ಹೇಳಿಕೆಯನ್ನೇ ಈ ಸಭೆಯ ಮುಂದೆ ಮಾಡಿರುತ್ತಾರೆ. ಆ ರೇಸ್ ನಡೆಸುತ್ತಿದ್ದವರಿಗೆ ಈಗ ಇದರಲ್ಲಿ ಅಷ್ಟು ಉತ್ಸಾಹವಿಲ್ಲ. ಆ ರೇಸಿನವರಿಗೆ ಇದರಿಂದ ಸಾಕಷ್ಟು ಹಣ ಬರುವಂತೆ ಕಂಡುಬರಲಿಲ್ಲ. ಆಗಲೂ ಅವರಲ್ಲಿ ಕೆಲವರು ಇದಕ್ಕೆ ಅಪ್ಲಿಕೇಷನ್ ಹಾಕಿಕೊಂಡಿದ್ದರು. ಆದರೆ ಆ ಅಪ್ಲಿಕೇಷನ್‌ಗಳು ಇನ್‌ವ್ಯಾಲಿಡ್ ಎಂಬುದಾಗಿ ತೀರ್ಮಾನವಾಯಿತು. ಆ ಬಗ್ಗೆ ನಾವು ಶೇಕಡ 17ರಷ್ಟು ತೆರಿಗೆ ರೂಪದಲ್ಲಿ ಕೊಡಬೇಕೆಂದು ಷರತ್ತು ಹಾಕಿದ್ದೆವು. ಅದನ್ನು ಅವರು ಬಹಳ ಜಾಸ್ತಿ ಎಂದು ಹೇಳುತ್ತಿದ್ದಾರೆ. ನಾವು ಕಮ್ಮಿ ಮಾಡಲು ಸಾಧ್ಯವಿಲ್ಲವೆಂದು ನಾವು ತಿಳಿಸುತ್ತಿದ್ದೇವೆ. ಈ ನಾನಾ ಕಷ್ಟಗಳಿಂದ ಅವರು ಈಗ ತಾವಾಗೇ ಸ್ವಲ್ಪ ಸುಮ್ಮನಿರುವ ಹಾಗೆ ಕಾಣುತ್ತಿದೆ. ಅವರಲ್ಲಿ ಈ ದಿವಸ ಇದರ ಬಗ್ಗೆ ಅಷ್ಟು ಉತ್ಸಾಹವಿದ್ದಂತೆ ಕಂಡುಬರುತ್ತಿಲ್ಲ. ಮೊದಲನಂತೆ ಉತ್ಸಾಹ ಈಗ ಇರುವುದಿಲ್ಲ.

ಎರಡನೆಯದಾಗಿ ಈ ಸಭೆಯಲ್ಲಿ ಎರಡು ವಾದಗಳು ಇವೆ. ವಜಾಮಾಡಬೇಕೆಂಬ ಅಭಿಪ್ರಾಯವನ್ನೂ ಕೂಡ ಕೊಟ್ಟಿದ್ದಾರೆ. ಅದರಲ್ಲಿ ನ್ಯಾಯವಿಲ್ಲದ್ದೇ ಇಲ್ಲ. ಈ ಕಾಲದಲ್ಲಿ ಜೂಜುವಗೈರೆಗಳಿಂದ ಬಡವರ ಸಂಸಾರಗಳು ಹಾಳಾಗುತ್ತಿವೆ ಎಂದು ಹೇಳತಕ್ಕ ಜನರು ದೇಶದಲ್ಲಿ ಇದ್ದಾರೆ. ಕುದುರೆ ಜೂಜನ್ನು ನಡೆಸಬೇಕೆಂದು ಹೇಳತಕ್ಕ ಜನರೂ ಸಹ ದೇಶದಲ್ಲಿ ಇದ್ದಾರೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ಬರಬೇಕೆಂದು ನಮ್ಮ ನಾಯಕರು ಹೇಳುತ್ತಾ ಇರುವಾಗ ಕುದುರೆ ಜೂಜು ವಗೈರೆ ವಜಾಮಾಡಬೇಕಾದ್ದು ನ್ಯಾಯವಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಷಯವನ್ನು ಈಗ ಸದ್ಯದಲ್ಲಿ ಅಷ್ಟು ಹೆಚ್ಚಾಗಿ ಪ್ರಸ್ತಾಪ ಮಾಡುವುದು ಅನಾವಶ್ಯಕ. ದೇಶದ ಹಿತದೃಷ್ಟಿಯಿಂದ ಯಾವರೀತಿ ಮಾಡಬೇಕೆಂಬ ಬಗ್ಗೆ ಸರ್ಕಾರದವರು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಕಾತರರಾಗಿದ್ದಾರೆ. ಅಷ್ಟು ಹೇಳಿದರೆ ಸಾಕು. ಆರ್.ಎಂ.ಡಿ.ಸಿ. ವಿಚಾರದಲ್ಲಿ. . . .

3 P.M.

Sri K. HANUMANTHAIYA (Chief Minister).—Sir, regarding R.M.D.C. I wanted to make a detailed statement. In fact I have got papers with me here

and I wanted to do so particularly because several wreckless allegations are made. I now learn that Sri Chamarbaugwala has filed a case against the Government demanding that the collection of the tax cannot be made legally and the suit is pending. Therefore I am unable to explain the position, since the matter is *sub judice*.

Sri K. PUTTASWAMY.—When did he file the suit ?

Sri K. HANUMANTHAIYA.—About a year ago or even earlier. I do not know the exact date. I learnt today that it has been pending for some time.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಆದ್ದರಿಂದ ಆ ವಿಷಯದ ಬಗ್ಗೆ ಸದ್ಯದಲ್ಲಿ ಪ್ರಸ್ತಾಪಮಾಡಬೇಕಾದದ್ದು ಅನಾವಶ್ಯಕ. ಒಟ್ಟಿನಲ್ಲಿ ಈ ಸೇಲ್ಸ್‌ಟ್ಯಾಕ್ಸ್ ಡಿಮ್ಯಾಂಡಿನ ವಿಷಯದಲ್ಲಿ ಮಾನ್ಯ ಸದಸ್ಯರು ಯಾವ ಯಾವ ರಚನಾತ್ಮಕವಾದ ಸಲಹೆಗಳನ್ನು ಕೊಟ್ಟಿದ್ದಾರೋ ಅವೆಲ್ಲವನ್ನೂ ವಿಶ್ವಾಸದಿಂದ ಪರಿಶೀಲನೆ ಮಾಡಿ, ಅವುಗಳನ್ನು ಉಪಯೋಗಿಸಿಕೊಳ್ಳಲಿಕ್ಕೆ ಸರ್ವಪ್ರಯತ್ನವನ್ನು ಕೂಡ ಮಾಡುತ್ತೇವೆ ಮತ್ತು ನಾನು ಕೊಟ್ಟಿರತಕ್ಕ ವಿವರಣೆಗಳಿಂದ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಏನು ಶಂಕೆ ಇತ್ತೋ ಅದು ಪರಿಹಾರವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ, ಆದಕಾರಣ ಇದಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ಕೊಡಬೇಕೆಂದು ಹೇಳುತ್ತೇನೆ.

*Sri Mulka GOVINDA REDDY (Chitaldrug).—I want one explanation whether they are going to appoint staff to detect tax evasion. While making a statement there may be some split personalities, speaking one thing and doing another. It is well known that in most of these departments, especially in the Anti-corruption and Prohibition Departments, allegations have been made on the floor of this House. Even against the Police allegation has been made that the Police are conniving at with regard to Prohibition. Also that some of the staff, not all, of the Anti-Corruption Department are not free from corruption. When I interjected and said that such a thing should not happen, the Minister was pleased to make a certain remark. I would like to have an explanation given on that.

Sri H. M. CHANNABASAPPA.—I made the remark that the world consists of good and bad people and that it is rather difficult to avoid all bad people and select only good people. That is my explanation.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ನಿಮ್ಮ ಸರ್ಕಾರಿ ಆಫೀಸರುಗಳ ಪೈಕಿ ಎಷ್ಟು ಜನ ಕೆಟ್ಟವರು, ಎಷ್ಟು ಜನ ಒಳ್ಳೆಯವರು ಇದ್ದಾರೆ? ಪರ್ಸೆಂಟೇಜ್ ಕೊಟ್ಟರೆ ಸಾಕು.

Sri H. M. CHANNABASAPPA.—Very well.

Mr. SPEAKER.—The question is.—

"That a sum not exceeding Rs. 17,61,000 be granted to the Government to defray the charges which will come in course of payment during the year ending 31st day of March 1957, in respect of 'Other Taxes and Duties'."

The motion was adopted.

Mr. SPEAKER.—The House will now adjourn and meet at 3-35 P.M.

The House adjourned for lunch at Five Minutes past Three of the Clock and re-assembled at Forty Minutes past Three of the Clock.

[MR. SPEAKER in the Chair.]

DEMAND NO. 14—ADMINISTRATION OF JUSTICE.

27. ADMINISTRATION OF JUSTICE.

Mr. SPEAKER.—Motion moved:

"That a sum not exceeding Rs. 28,05,600 be granted to the Government to defray the charges which will come in course of payment during the year ending 31st day of March 1957 in respect of 'Administration of Justice'."

*Sri H. C. LINGA REDDY (Malur).—I support the demand. While doing so, I would like to bring to the notice of the Government a few points. I had tabled a few cut motions covering a few points. The first one was about the implementation of Mallappa's Committee Report on the question of pecuniary and territorial jurisdiction. This Report was submitted by the Committee a year ago. It contains very many important aspects relating to the administration of justice. Whenever certain points were raised on the floor of this House with regard to the

(SRI H. C. LINGA REDDY.)

separation of the judiciary from the Executive, with regard to reorganisation of courts in the State and such other things, the Government were pleased to tell us that as soon as the Committee submitted its report the various points would be attended to, that the separation of the Judiciary from the Executive would be effected and that courts also would be reorganised and so on and so forth. But now though this Report was submitted by the Committee as long as a year ago, I am afraid very precious little has been done by the Government and very many issues that are outstanding in the Department of Judiciary remain undecided. It is said that justice delayed is justice denied. Today our courts are congested; work is accumulating and the litigant public will have to travel a long distance to reach the seats of courts. We have to take justice as near the litigant public as possible and justice should be cheap. It should not be expensive. It is from that point of view the Government were pleased to appoint a Committee and that Committee gave their Report, as I said, a long time back. Amongst so many other things this Committee has mentioned in the Report, the location of a few courts in taluk headquarters is one; it is in a way decentralising the administration of justice. For instance, in respect of Kolar District they have said—of course they have said that there should not be additional courts, increasing the number of courts that one of the courts at Kolar may be located at Chintamani for the benefit of the litigant public of Chintamani, Bagepalli and Srinivasapur Taluks and that the Munsiff's Court at Kolar may be converted into Munsiff-Magistrate Court. Similarly the Committee have made some other recommendations for the Kolar District without prejudice to finance. The number of courts will be the same but the accumulation of courts in one place is avoided and courts are decentralised in a way. They are recommended to be located, one of them being shifted from district headquarters to some other place. Thereby justice will have been taken as near as possible to the litigant public. Therefore, from this point of view if the Committee's Report had been implemented, it would have been of great advantage to the litigant public. Justice will no doubt be taken nearer but litigation cannot be avoided. As long as human nature is what it is, the establishment of courts is inevitable and instead of accumulating all courts in one place, it is better they are decentralised. It is from that point of view some of the courts are recommended to be shifted to places which are more convenient to the litigant public.

And again Sir, another recommendation that has been made by this Committee as contained in the Report is about the changes to be made with regard to the pecuniary jurisdiction of the various courts. The Munsiffs' Courts for example are now vested with the power to try cases of the value not exceeding Rs. 1,500. They have now suggested that they may try suits of the value of Rs. 3,000 and that small cause suits may be of the value of Rs. 200 and they have similarly suggested that the District Magistrate cum Civil Judges Courts that will be coming into being may try cases ranging between Rs. 10,000 and Rs. 20,000 and the present Subordinate Judge's Courts may try suits up to the value of Rs. 2,500 up to Rs. 10,000. If these recommendations had been implemented, it would have been very convenient as I said at the very outset for the litigant public.

Another point I would like to refer to in this connection is Sir, about the remuneration to be paid to the Copyists. Even last year, some representations were made to the Government by Hon'ble Members of this House that the way the Copyists are paid now is not conducive to the quick and smooth working of the copying sections in the Judiciary. Formerly Copyists used to be paid a moiety of the cost of copying sheets and now Copyists are paid regular salary. And this change in the mode of payment to the Copyists has brought about a good deal of corruption and

has led to many mal practices among the Copyists. Because they are paid salaries, they become lazy and they are not particular about the preparation of copies and they go on whiling away their time. The Advocates and litigant public will not be in a position to get copies in time. In the result, it will be very difficult for the parties to obtain stay order or prefer an appeal as the case may be. While formerly because their remuneration depended upon the copies prepared, they were quite vigilant and they were active and doing their duty properly and in time. This system of payment of regular salary to the Copyists has led to this laziness and corruption and malpractices as, I said already. The Government Sir, even in the last Budget Session said that the question of changing the system was under consideration of the Government. But I do not know why action has not so far been taken in the matter.

With these few observations, I support the Demand.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಕಡೂರಿನಲ್ಲಿ ಒಂದು ಕೋರ್ಟು ಆಗಬೇಕು ಎಂದು ಪದೇ ಪದೇ ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತದೆ. ನಾನು ಅಸೆಂಬ್ಲಿ ಮೆಂಬರಾಗಿ ನಾಲ್ಕು ವರ್ಷವಾಯಿತು. ಆಗಿನಿಂದಲೂ ಕೇಳುತ್ತಿದ್ದೇನೆ. ಇನ್ನೂ ಕೊಟ್ಟಿಲ್ಲ. ಇನ್ನೂ ಎಂಟು ತಿಂಗಳಿಗೆ ನಮ್ಮ ಸದಸ್ಯತ್ವದ ಅವಧಿ ಮುಗಿಯುತ್ತದೆ. ನಮ್ಮ ತಂದೆಯವರು ಮಿರ್ಜಾ ಸಾಹೇಬರ ಹತ್ತಿರ ಕೂಡ ಕಡೂರಿಗೆ ಒಂದು ಕೋರ್ಟು ಕೊಡಬೇಕೆಂದು ಕೇಳಿದ್ದರು. ಆವಾಗಿನಿಂದಲೂ ಕೇಳುತ್ತಿದ್ದೇವೆ. ಪ್ರಾಯಶಃ ನನ್ನ ಮಗ ಸದಸ್ಯನಾದಾಗ ಏನಾದರೂ ಕೊಡುತ್ತಾರೆಯೋ ಏನೋ ಗೊತ್ತಿಲ್ಲ. ಕಡೂರು 1,20,000 ಜನ ಸಂಖ್ಯೆ ಇರುವ ತಾಲ್ಲೂಕು. ಚಿಕ್ಕಮಗಳೂರು ಜಿಲ್ಲೆಯ ಜನಸಂಖ್ಯೆ ನಾಲ್ಕು ಲಕ್ಷ. ನಮ್ಮ ಜಿಲ್ಲೆಯಾದ ಚಿಕ್ಕಮಗಳೂರಿನಲ್ಲಿ ಚಿಕ್ಕಮಗಳೂರು ಮತ್ತು ತರೀಕೆರೆ ಈ ಎರಡು ಕಡೆಗಳಲ್ಲಿ ಮಾತ್ರ ಕೋರ್ಟು ಇದೆ. ಹಿಂದೆ ಶ್ರೀ ಮಲ್ಲಪ್ಪ ಕಮಿಟಿಯವರು ಬಂದಕಾಲದಲ್ಲಿ ಕಡೂರು ಟೌನಿನಲ್ಲಿ ಅನೇಕರು ಸೇರಿ ಅಂಕಿ ಅಂಶಗಳನ್ನೂ ಕೊಟ್ಟೆವು. ಕಡೂರು ತಾಲ್ಲೂಕಿಗೆ ಒಂದು ಕೋರ್ಟು ಕೊಡತಕ್ಕದ್ದು ನ್ಯಾಯವೆಂದು ಆ ಸಮಿತಿಯವರೂ ಕೂಡ ಹೇಳಿದ್ದರು. ಏಕೆಂದರೆ ತರೀಕೆರೆ ಮತ್ತು ಚಿಕ್ಕಮಗಳೂರು ಕೋರ್ಟುಗಳಲ್ಲಿನ ಕೇಸುಗಳ ದಾಖಲಾತಿಯನ್ನು ತೆಗೆದುಕೊಂಡರೆ ಎರಡು ಕೋರ್ಟುಗಳಲ್ಲಿಯೂ ಹೆಚ್ಚಾಗಿರತಕ್ಕದು ಕಡೂರು ತಾಲ್ಲೂಕಿನ ಕೇಸುಗಳು. ಕಡೂರು ತಾಲ್ಲೂಕಿನ ಜನಸಂಖ್ಯೆಯೂ ಜಾಸ್ತಿ, ಕೇಸುಗಳೂ ಜಾಸ್ತಿ. ಕಡೂರು ತಾಲ್ಲೂಕಿನ ಕೊನೆಯಲ್ಲಿರುವ ಒಂದು ಹಳ್ಳಿಯಿಂದ ಚಿಕ್ಕಮಗಳೂರು ಮತ್ತು ತರೀಕೆರೆ ಈ ಸ್ಥಳಗಳಿಗೆ ಹೋಗಬೇಕಾದರೆ 50-60 ಮೈಲಿ ಫಾಸಲೆಯಾಗುತ್ತದೆ. ಕಡೂರು ತಾಲ್ಲೂಕಿನ ಕೆಲವು ಹೋಬಳಿಗಳನ್ನು ತರೀಕೆರೆ ಕೋರ್ಟಿಗೂ, ಕೆಲವನ್ನು ಚಿಕ್ಕಮಗಳೂರು ಕೋರ್ಟಿಗೂ ಸೇರಿಸಿದ್ದಾರೆ. ಹಿಂದೆ ಒಂದು ಸಲ ಚೀಫ್ ಜಸ್ಟಿಸ್‌ರವರು ಚಿಕ್ಕಮಗಳೂರಿಗೆ ಬಂದಕಾಲದಲ್ಲಿ ಅನೇಕರು ಮನವಿಯನ್ನು ಒಪ್ಪಿಸಿದರು. ಅವರೂ ಸಹ ಅಂಕಿ ಅಂಶಗಳನ್ನು ನೋಡಿ ಕಡೂರಿಗೆ ಒಂದು ಕೋರ್ಟು ಕೊಡುವುದು ನ್ಯಾಯವಾದದ್ದು ಎಂದು ಹೇಳಿದರು. ಹೀಗೆಯೇ ಬೇರೆ ಕಮಿಟಿಗಳವರೂ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ನಾನೂ ಮತ್ತು ಕಡೂರು ತಾಲ್ಲೂಕಿನ ಅನೇಕ ಸ್ನೇಹಿತರೂ ಈಗಿರತಕ್ಕ ಮುಖ್ಯ ಮಂತ್ರಿಗಳನ್ನು ಕಂಡು ನಮ್ಮ ಕಷ್ಟ ಸುಖಗಳನ್ನು ಹೇಳಿಕೊಂಡೆವು. ಅವರು ಮಲ್ಲಪ್ಪ ಕಮಿಟಿಯವರ ಶಿಫಾರಸುಗಳು ಯಾವರೀತಿ ಬರುತ್ತವೆಯೋ ಅದನ್ನು ನೋಡಿಕೊಂಡು ಸಾಧ್ಯವಾದ ಮಟ್ಟಿಗೆ ಕಡೂರು ತಾಲ್ಲೂಕಿಗೆ ಒಂದು ಕೋರ್ಟು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಇಷ್ಟಾದರೂ ಕೂಡ ನನಗೆ ಕಡೂರು ತಾಲ್ಲೂಕನ್ನು ಎಲ್ಲ ವಿಧದಲ್ಲಿಯೂ ಕೂಡ ಮೈಸೂರು ಭೂಪಟದಿಂದ ಅಳಿಸಿ ಬಿಟ್ಟಿದ್ದಾರೆಯೋ ಏನೋ ಎಂಬ ಸಂಶಯವುಂಟಾಗುತ್ತಿದೆ. ಅಲ್ಲದೆ ಅನೇಕ ಸಾರಿ ನಮ್ಮ ಕಷ್ಟ ಸುಖಗಳನ್ನು ಶಾಸನ ಸಭೆಗಳಲ್ಲಿ ಕೂಲಂಕಷವಾಗಿ ಸರ್ಕಾರದ ಗಮನಕ್ಕೆ ಬರುವ ರೀತಿಯಲ್ಲಿ ಹೇಳಿದರೂ ಕೂಡ ಹೆಚ್ಚು ಗಮನ ಕೊಡದೆ ಇರುವುದನ್ನು ನೋಡಿದರೆ ನಾವಾದರೂ ಕೂಡ ಈ ಶಾಸನ ಸಭೆಗಳಿಗೆ ಯಾಕೆ ಸದಸ್ಯರಾಗಿ ಬರುತ್ತೇವೆಯೋ ಎಂದೆನ್ನಿಸುತ್ತದೆ. ಸರ್ಕಾರದವರು ಕಡೂರಿಗೆ ಒಂದು ಕೋರ್ಟು ಕೊಡುವ ವಿಷಯದಲ್ಲಿ ಸುಮ್ಮನೆ ಇರುವುದನ್ನು ನೋಡಿದರೆ ಮಲ್ಲಪ್ಪ ಕಮಿಟಿಯವರು ಯಾವ ರೀತಿ ವರದಿ ಮಾಡಿದ್ದಾರೆಯೋ, ಏನೋ, ಅಥವಾ ಅವರೂ ಕೂಡ ಕಡೂರು ತಾಲ್ಲೂಕನ್ನು ಮರೆತ್ತಿದ್ದಾರೆಯೋ ಏನೋ ಅನ್ನಿಸುತ್ತದೆ. ಸರ್ಕಾರದವರು ಈ ವಿಷಯದಲ್ಲಿ ಉದಾಸೀನ ಭಾವದಿಂದ ಇರಬಹುದು ಎಂಬ ಅನುಮಾನ ಬರುವುದಕ್ಕೆ ಕೂಡ ಅವಕಾಶವಾಗಿದೆ. ನಮ್ಮ ಜಿಲ್ಲೆಯಿಂದ ಸದಸ್ಯಣಿಯರಾಗಿ ಬಂದಿರತಕ್ಕ ಶ್ರೀಮತಿ ಸುಬ್ಬಮ್ಮನವರೇನಾದರೂ ಮಂತ್ರಿಗಳಾಗಿದ್ದರೆ ನಮ್ಮ ಕಷ್ಟ ಸುಖಗಳನ್ನು ಕೇಳುತ್ತಿದ್ದರೋ ಏನೋ. ನಮ್ಮ ಜಿಲ್ಲೆಯವರು ಯಾರೂ ಮಂತ್ರಿಗಳಾಗಿ ಇಲ್ಲದೆ ಇರುವುದರಿಂದ ಇಷ್ಟಕ್ಕೆ ಕಾರಣವಾಗಿದೆಯೋ ಏನೋ ಎಂದು ಆಗಾಗ ನನಗನ್ನಿಸುತ್ತದೆ. ಆದುದರಿಂದ ಸರ್ಕಾರದವರು ಈಗಲಾದರೂ ಮಲ್ಲಪ್ಪ ಕಮಿಟಿ ರಿಪೋರ್ಟು ಬಂದೊಡನೆಯೇ ಈ ವಿಚಾರವನ್ನು ಪುನರ್ವಿಮರ್ಶೆ ಮಾಡಿ ಕಡೂರು ತಾಲ್ಲೂಕಿಗೆ ಒಂದು ಕೋರ್ಟನ್ನು ಸಾಧ್ಯವಾದ ಮಟ್ಟಿಗೂ ಈ ವರ್ಷ ಕೊಡಬೇಕು. ಕಡೂರು ತಾಲ್ಲೂಕಿನ ಪ್ರಜೆಗಳಿಗೆ ಚಿಕ್ಕಮಗಳೂರು ಅಥವ ತರೀಕೆರೆ ಕೋರ್ಟುಗಳಿಗೆ ಹೋಗಿ ಬರಬೇಕಾದರೆ ಬಹಳ ದೂರವಾಗುವುದರಿಂದ ವ್ಯವಹಾರ ನಡೆಸಲು ಬಹಳ ತೊಂದರೆ ಇದೆ. ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಕಡೂರು ತಾಲ್ಲೂಕಿಗೆ ಒಂದು ಕೋರ್ಟನ್ನು ಕೊಡಬೇಕು ಎಂದು ಹೇಳುತ್ತೇನೆ. ಇಷ್ಟು ಮಾತ್ರ ಹೇಳಿ ಈ ಡಿಮ್ಯಾಂಡನ್ನು ಸಮರ್ಥಿಸುತ್ತೇನೆ.

(SRI K. PATTABHIRAMAN B.A., B.L., in the Chair).

*ಶ್ರೀ ಎಸ್. ಶ್ರೀನಿವಾಸಐಯ್ಯಂಗಾರ್ (ಟಿ. ನರಸಿಪುರ).—ಮೈಸೂರು ಸಂಸ್ಥಾನದಲ್ಲಿರುವ ಕೋರ್ಟುಗಳಲ್ಲಿ ಮೊಕದ್ದಮೆಗಳನ್ನು ಫೈಸಲಾತಿ ಮಾಡುವುದಕ್ಕೆ ಎಷ್ಟು ವಾಯಿದೆ ಇರಬೇಕು ಎನ್ನುವ ವಿಚಾರದಲ್ಲಿ

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್).

ಹೈಕೋರ್ಟಿನವರು ಒಂದು ಸರ್ಕ್ಯುಲರ್ ಕಳುಹಿಸಿ ಕೊಟ್ಟಿದ್ದಾರೆ. ಸಾಧಾರಣವಾಗಿ one year old rule ಎಂದು ಮಾತನಾಡತಕ್ಕ ಕಾಲದಲ್ಲಿ ಪ್ರಸ್ತಾವನೆ ಮಾಡುತ್ತಾರೆ. ಅಂದರೆ ಒಂದು ಮೊಕದ್ದಮೆಯನ್ನು ಇವೊತ್ತು ಹೂಡಿದರೆ, ಹೂಡಿದ ತಾರೀಖಿನ ಲಾಗಾಯ್ತು ಒಂದು ವರ್ಷದೊಳಗೆ ಅದನ್ನು ತಿರ್ಮಾನ ಮಾಡಬೇಕು, ಸಾಧ್ಯವಾದಷ್ಟು ತೀರ್ಮಾನ ಮಾಡಬೇಕು ಎಂದು ಕಡ್ಡಾಯ ಮಾಡಬೇಕು ಎಂದು ಇದೆ. ಆದರೆ ಈಚೀಚೆಗೆ ಅನೇಕ ಕೋರ್ಟುಗಳಲ್ಲಿ ತೀರ್ಮಾನವಾಗದೆ ಉಳಿಯುವ ಕೇಸುಗಳು ಬಹಳವಾಗಿವೆ. ಎಂದರೆ ಹೈಕೋರ್ಟಿನವರು ಕೊಟ್ಟಿರ ತಕ್ಕ ಸರ್ಕ್ಯುಲರನ್ನು ಅಕ್ಷರಶಃ ಪಾಲನೆ ಮಾಡುತ್ತಿಲ್ಲ, ಹಾಗೆ ಪಾಲನೆ ಮಾಡದೆ ಇರುವುದಕ್ಕೆ ಕಾರಣವೇನು ಎನ್ನುವುದನ್ನು ತಿಳಿದುಕೊಳ್ಳಬೇಕು ಎಂದಿದ್ದೇನೆ.

ಇದೂ ಅಲ್ಲದೆ ಕೋರ್ಟುಗಳು ಎಷ್ಟಿದ್ದರೂ ಕೂಡ ಕೇಸುಗಳ ಬಾಕಿ ಹೆಚ್ಚಾಗಿದೆ ಎಂದು ಗೊತ್ತಾಗಿದೆ. ಮುನ್ಸೀಫ್ ಕೋರ್ಟುಗಳಲ್ಲಿ, ಡಿಸ್ಟ್ರಿಕ್ಟ್ ಕೋರ್ಟುಗಳಲ್ಲಿ ಮತ್ತು ಹೈ ಕೋರ್ಟುಗಳಲ್ಲಿ ಬಹಳವಾಗಿ ಕೇಸುಗಳು ತೀರ್ಮಾನವಾಗದೆ ನಿಂತುಹೋಗಿವೆ ಎಂದು ಸಹ ತಿಳಿದು ಬಂದಿದೆ. ಇದಕ್ಕೆ ಏನು ಕಾರಣ, ಯಾತಕ್ಕೆ ಇಷ್ಟೊಂದು pendency ಇದೆ ಎನ್ನುವುದು ಒಂದು ವಿಷಯ.

ಮತ್ತೊಂದು, ಹೈಕೋರ್ಟಿನಲ್ಲಿ ಖಾಲಿ ಬಿದ್ದಿರತಕ್ಕ ಹೈಕೋರ್ಟ್ ಜಡ್ಜಿಗಳ ನೇಮಕದ ವಿಚಾರ.

4-P.M.

ಈ ಸಭೆಯಲ್ಲಿ ಈ ವಿಚಾರದಲ್ಲಿ ಪ್ರಶ್ನೋತ್ತರಗಳು ಸಹ ನಡೆದಿವೆ. ಆಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಸಹ ಕೊಟ್ಟಿದ್ದಾರೆ. ಹೈಕೋರ್ಟಿನಲ್ಲಿ ಜಡ್ಜಿಗಳ ಸ್ಥಾನ ಇರುವುದು ಆರು, ಈಗ ನಾಲ್ಕು ಜನ ಮಾತ್ರ ಇದ್ದಾರೆ, ಇನ್ನೊಬ್ಬರ ನೇಮಕ ಅನೇಕ ದಿವಸಗಳಿಂದ ನಿಂತುಹೋಗಿದೆ ಎಂಬುದು ಒಂದು ವಿಷಯ. ಇದಕ್ಕೆ ಸರ್ಕಾರದವರೂ ಸಹ ಸಲಹೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದರು, ಆ ಸಲಹೆಯನ್ನು ಕೇಂದ್ರ ಸರ್ಕಾರದವರು ನಿರಾಕರಿಸಿ ಒಂದಲ್ಲ ಎರಡುಸಲ ಕಳುಹಿಸಿದ್ದಾರೆ ಎಂದು ಅಲ್ಲಲ್ಲಿ ಗುಸುಗುಸು ಎಂದು ಮಾತನಾಡುತ್ತಾರೆ. ನಮಗೆ ಆ ವಿಷಯ ಗೊತ್ತಿಲ್ಲ. ಸರ್ಕಾರದಿಂದ ಕಾರಣ ಸೂಚಿಸಲ್ಪಟ್ಟಿಲ್ಲ. ಕೇಂದ್ರದಿಂದ ತಿರಸ್ಕಾರಮಾಡಿ ಮೈಸೂರು ಸರ್ಕಾರಕ್ಕೆ ಕಳುಹಿಸಿದ ಹಾಗೆ ಅಲ್ಲಲ್ಲಿ ಹೇಳುತ್ತಿದ್ದಾರೆ. ಆದ್ದರಿಂದ ಏಕೆ ನಿಧಾನವಾಗಿದೆ, ಏನು ಕಾರಣದಿಂದ, ಒಂದು ನಿಯಮವಿಲ್ಲವೆ, ಶಿಫಾರ್ಸು ಮಾಡುವುದಕ್ಕೆ ಒಂದು ತತ್ವವಿಲ್ಲವೆ, ಅದರ ಪ್ರಕಾರ ಮಾಡುತ್ತಿದ್ದಾರೆಯೆ ಅಥವಾ ಸರ್ಕಾರಕ್ಕೆ ಬಹಳ ಆಪ್ತರಾಗಿರುವ ಒಬ್ಬ ವ್ಯಕ್ತಿಯಿದ್ದರೆ ಆ ವ್ಯಕ್ತಿ, ಉತ್ಸುಕತೆ ಮತ್ತು ಇನ್‌ಫ್ಲೂಯೆನ್ಸ್ ಆಧಾರದ ಮೇಲೆ ಸೂಚನೆ ಮಾಡುತ್ತಾರೆಯೇ ಎಂದು ತಿಳಿದುಕೊಳ್ಳಬೇಕಾಗಿದೆ. ಹಾಗೆ ಮಾಡಿದ್ದರೆ ಅದು ಬಹಳ ದೊಡ್ಡ ತಪ್ಪು ಎಂದು ಭಾವಿಸಬೇಕು.

ಮೂರನೆಯದು ಮಲ್ಲಪ್ಪ ಕಮಿಟಿ ಶಿಫಾರ್ಸು ವಿಚಾರ. ನಾನೂ ಸಹ ಪ್ರತಿ ತಾಲ್ಲೂಕಿನಲ್ಲೂ ಒಂದೊಂದು ಕೋರ್ಟನ್ನು ಸ್ಥಾಪನೆಮಾಡಿ ಎಂದು ವಾದ ಮಾಡುತ್ತಿದ್ದೆ, ಈಚೆಗೆ ಸ್ವಲ್ಪ ಬದಲಾಯಿಸಿ ಕೊಳ್ಳಬೇಕೆಂದು ಅನ್ನಿಸಿದೆ. ಎಷ್ಟೋ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಕೋರ್ಟುಗಳಿಗೆ ಕೆಲಸವೇ ಇರುವುದಿಲ್ಲ, ಮಧ್ಯಾಹ್ನ ಒಂದು ಗಂಟೆ ಹೊತ್ತಿಗೆ ಕೆಲಸ ಪೂರೈಸಿರುತ್ತದೆ. ಇದಲ್ಲದೆ ಅನುಭವದಿಂದ ಕೆಲವು ವಿಚಾರಗಳು ತಿಳಿದಿವೆ. ಸಮ್ಮರಿ ಡಿಸ್ಪೋಸಲ್ ಮಾಡಿ ಅನುಕೂಲ ಮಾಡಲೆಂದು ಟೆನೆನ್ಸಿ ಕೋರ್ಟಿನಲ್ಲಿ ತಾಲ್ಲೂಕು ಅಮಲ್ದಾರರಿಗೆ ಅಧಿಕಾರ ಕೊಟ್ಟರು. ಇದಾದ ಮೇಲೆ ಪಟ್ಟಣಗಳಿಂದ ಲಾಯರುಗಳನ್ನು ನೂರಾರು ರೂಪಾಯಿಗಳನ್ನು ಖರ್ಚುಮಾಡಿ ಟೆನೆನ್ಸಿ ಕೋರ್ಟಿಗೆ ಇಂದು ಕರೆಸುತ್ತಿದ್ದಾರೆ. ಹೀಗೆ ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ಕೋರ್ಟನ್ನು ಸ್ಥಾಪನೆ ಮಾಡಿದ್ದರಿಂದ ಒರಿಜಿನಲ್ ಸ್ಕೈಡ್‌ನಲ್ಲಿ ಬರುವ ಕೇಸುಗಳನ್ನು ಸಾಧಿಸುವುದಕ್ಕೆ ಈಗ ಹೆಚ್ಚಾಗಿ ಖರ್ಚಾಗುತ್ತಿದೆ. ನಿಷ್ಣಾತರು ಪಟ್ಟಣಗಳಲ್ಲಿರುತ್ತಾರೆ. ಅವರನ್ನು ತಾಲ್ಲೂಕುಗಳಿಗೆ ಕರೆಸುವುದರಿಂದ ಹೆಚ್ಚು ಖರ್ಚಾಗುತ್ತದೆ. ಆದ್ದರಿಂದ ಶ್ರೀ ತಿಮ್ಮಪ್ಪಗೌಡರು ಹೇಳಿದ ಹಾಗೆ ಪ್ರತಿಯೊಂದು ವ್ಯಾಜ್ಯವೂ ಇರುವ ಜಾಗದಲ್ಲೇ ಇರಲಿ ಎಂದು ಬದಲಾಯಿಸಬೇಕಾಗುತ್ತದೆಯೆ ಎಂದು ಅನುಮಾನ ಬರುತ್ತಿದೆ. ಆದರೆ ಕೆಲವು ಸಣ್ಣ ಸಣ್ಣ ಅಪರಾಧಗಳಿವೆ; ಗಾಡಿಗೆ ದೀಪವಿರಲಿಲ್ಲ ಎಂದು ಹೇಳುವುದು ಮುಂತಾದ ಸಣ್ಣ ತಪ್ಪು ಮಾಡಿದರೆ ಅದನ್ನು ವಿಮರ್ಶೆ ಮಾಡುವುದಕ್ಕೆ ತಾಲ್ಲೂಕುಗಳಲ್ಲಿ ಅವಕಾಶವಿರಬೇಕು. ಅಂಥ ಸಂದರ್ಭದಲ್ಲೂ ಸಹ ಮೈಸೂರು ಸಿಟಿಗೆ ಬಂದು ಅಥವಾ ದೊಡ್ಡ ಪಟ್ಟಣಕ್ಕೆ ಬಂದು ನ್ಯಾಯಪಡೆಯಬೇಕೆಂದು ಹೇಳಿದರೆ ಬಹಳ ದುಬಾರಿ ಖರ್ಚಾಗುತ್ತದೆ. ಆಗ ತಾಲ್ಲೂಕುಗಳಲ್ಲೇ ನ್ಯಾಯ ದೊರೆಯುವ ಹಾಗೆ ಅಥವಾ ತಾಲ್ಲೂಕುಗಳಲ್ಲೇ ಪರಿಶೀಲಿಸಿ ಶಿಕ್ಷೆಯಾಗುವ ಹಾಗೆ ಏರ್ಪಾಡು ಮಾಡಿದರೆ ಅನುಕೂಲವಾಗುತ್ತದೆಂಬುದು ನನ್ನ ಅಭಿಪ್ರಾಯ.

ಮಲ್ಲಪ್ಪ ಕಮಿಟಿ ಸಮಿತಿ ಶಿಫಾರ್ಸುಗಳಲ್ಲಿ ಸರ್ಕಾರದವರು ಜಾರಿಗೆ ತಂದಿರುವುದು ಎರಡು ವಿಷಯ. ಸರ್ಕಾರದವರು ನೇಮಕ ಮಾಡಿದ್ದ ಅನೇಕ ಸಮಿತಿಗಳಲ್ಲಿ ತೀರ್ಮಾನವಾಗಿರುವುದನ್ನು ಸರ್ಕಾರ ವಿಮರ್ಶೆ ಮಾಡಿ ತೀರ್ಮಾನ ಮಾಡಿರುವುದು ಎರಡು ಸಮಿತಿ ವಿಚಾರ. ಈ ನಾಲ್ಕು ವರ್ಷಗಳ ಅನುಭವದಲ್ಲಿ ಹತ್ತಾರು ಸಮಿತಿಗಳಾದರೂ ಅವುಗಳ ಶಿಫಾರ್ಸನ್ನು ಜಾರಿಗೆ ತಂದಿಲ್ಲ, ತಂದಿರುವುದು ಥ್ಯಾಕರ್ ಸಮಿತಿ ಶಿಫಾರ್ಸಿನಂತೆ ಹೈಡ್ರೊಎಲೆಕ್ಟ್ರಿಕ್ ಟ್ಯಾರಿಫ್‌ರೇಟ್ ರಿವೈಸ್ ಮಾಡುವುದು ಮತ್ತು ಡಿಸ್ಟ್ರಿಕ್ಟ್ ಜಡ್ಜಿಗಳಿಗೆ ಸಂಬಳ ಹೆಚ್ಚಿಸುವುದು. ಮಲ್ಲಪ್ಪ ಕಮಿಟಿ ಶಿಫಾರ್ಸಿನಂತೆ ಎರಡು ಶಿಫಾರ್ಸನ್ನು ಜಾರಿಗೆ ತಂದರು, ಡಿಸ್ಟ್ರಿಕ್ಟ್ ಜಡ್ಜಿಗಳ ಸಂಬಳ ಹೆಚ್ಚಿಸಿದರು, ಸಿವಿಲ್ ಜಡ್ಜಿಗಳನ್ನು ನೇಮಕ ಮಾಡಿದರು. ಬಾಕಿ ಇನ್ಯಾವುದನ್ನೂ ಮಾಡಿಲ್ಲ. ನ್ಯಾಯಾಂಗ ಮತ್ತು ಕಾರ್ಯಾಂಗ ಬೇರ್ಪಾಡು ಮಾಡುವುದಕ್ಕೇನುಮಾಡಬೇಕೋ ಅದನ್ನು ಕಡ್ಡಾಯವಾಗಿ ಮಾಡಬೇಕು. ಆಡಳಿತ ದೃಷ್ಟಿಯಿಂದ ಟೆರಿಟೋರಿಯಲ್ ಜ್ಯೂರಿಸ್‌ಡಿಕ್ಷನ್ ಆಗಿದ್ದರೂ ಅದರ ವಿಚಾರದಲ್ಲಿ ತೀರ್ಮಾನ ತೆಗೆದುಕೊಳ್ಳುವಾಗ ಸರಿಯಾಗಿ ಯೋಚನೆ ಮಾಡಲಿಲ್ಲ. ಬೇರ್ಪಡಿಸುವ ವಿಷಯ ಕೂಡಲೇ ಜಾರಿಗೆ ಬರಬೇಕು, ನಿಧಾನ ಮಾಡಿದರೆ ದೇಶಕ್ಕೆ ಅಷ್ಟಾಗಿ ಅನುಕೂಲವಾಗುವುದಿಲ್ಲ ಎಂಬುದು ನನ್ನ ದೃಷ್ಟಿ.

ಇನ್ನೊಂದು ವಿಷಯವಿದೆ. ಕೋರ್ಟಿಗೆ ಹೋದರೆ ಅಲ್ಲಿ ಕೇಸು ನಡೆಸುವುದಕ್ಕಿಂತ ಹೊರಗಡೆ ಬಿಸಿಲಲ್ಲಿ ಒಣಗುವುದು ಬಹಳ ಕಷ್ಟ. ಕುಡಿಯುವುದಕ್ಕೆ ನೀರಿಲ್ಲದೆ, ತಿನ್ನುವುದಕ್ಕೆ ಆಹಾರ ಸಿಕ್ಕದೆ ಬಿಸಿಲಲ್ಲಿ ನಿಂತು ಹಾಹಾಕಾರ ಪಡುವ ಕೆಲಸವಲ್ಲದೆ ಮತ್ತೆ ಬೇರೆ ಇಲ್ಲ. ಕೋರ್ಟುಗಳಲ್ಲಿ ದಾವಾ ಹಾಕುವುದೂ ಬೇಡ, ಬಿಸಿಲಲ್ಲಿ ನಿಂತಿರುವುದೂ ಬೇಡ ಎಂದು ಅನ್ನಿಸುತ್ತದೆ.

ವರಮಾನ ಕೊಡುವವರಿಗೆ, ಸ್ಟ್ಯಾಂಪ್ ಕೊಡುವವರಿಗೆ ಅಥವಾ ಫೀಜು ಕೇಳುವವರಿಗೆ ನಿಂತುಕೊಳ್ಳುವುದಕ್ಕಾಗಲಿ ಅಥವಾ ಕುಳಿತುಕೊಳ್ಳುವುದಕ್ಕಾಗಲಿ ಜಾಗವಿರುವುದಿಲ್ಲ, ವರಾಂಡಗಳಲ್ಲಿ ಕಂಬ ಒರಗಿಕೊಂಡು ನಿಂತಿರಬೇಕು. ಅಲ್ಲಿ ಕೂತುಕೊಳ್ಳಲು ಜಾಗವಿರಬೇಕು, ನ್ಯಾಯ ಕೇಳುವವರಿಗೆ ಕೂತುಕೊಳ್ಳಲು ಅವಕಾಶ ಮಾಡಬೇಕು ಎಲ್ಲಾ ಕೋರ್ಟುಗಳಲ್ಲೂ, ಪ್ರತಿಯೊಂದು ಜಿಲ್ಲೆಯಲ್ಲೂ ಎಲ್ಲಿ ಕೋರ್ಟಿದೆಯೋ ಅಲ್ಲಿಗೆ ಲಿಟಿಗೆಂಟ್ಸ್ ಬಂದರೆ ಕುಳಿತುಕೊಳ್ಳುವುದಕ್ಕೆ, ಕುಡಿಯುವುದಕ್ಕೆ ನೀರು ದೊರೆಯುವುದಕ್ಕೆ ಸರ್ಕಾರ ಸೌಕರ್ಯ ಮಾಡಬೇಡವೆ ? ಇವನ್ನು ಕೂಡಲೆ ಮಾಡಬೇಕೆಂಬುದು ನನ್ನ ಅಭಿಪ್ರಾಯ.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ನ್ಯಾಯಾಂಗಕ್ಕೆ ಸಂಬಂಧಪಟ್ಟಿರುವಂಥ ಈ ಡಿಮ್ಯಾಂಡ್ ಮಾನವಿಯನ್ನು ವಿರೋಧಿಸುತ್ತಾ ಒಂದೆರಡು ವಿಷಯಗಳನ್ನು ತಿಳಿಸುತ್ತೇನೆ. ಈಗಾಗಲೆ ಮಾತನಾಡಿರತಕ್ಕ ಶ್ರೀ ಲಿಂಗಾರೆಡ್ಡಿಯವರು ತಮ್ಮ ಅನುಭವದಲ್ಲಿ ಕಂಡುಬಂದಿರತಕ್ಕ ಲೋಪ ದೋಷಗಳನ್ನು ತಿಳಿಸಿದ್ದಾರೆ. ನಾನು ಮುಖ್ಯವಾಗಿ ಹೈಕೋರ್ಟಿನಲ್ಲಿ ಮತ್ತು ಇತರ ಕೋರ್ಟುಗಳಲ್ಲಿ ಕೇಸುಗಳನ್ನು ತಡವಾಗಿ ಬಗೆಹರಿಸುವ ವಿಷಯದಲ್ಲಿ ಸಭೆಯ ಗಮನವನ್ನು ಸೆಳೆಯುವುದಕ್ಕೆ ಆಸೆ ಪಡುತ್ತೇನೆ. ಮುಖ್ಯವಾಗಿ ರಿಟ್ ವಿಷಯ. ಎಷ್ಟು ರಿಟ್‌ಗಳು ಕಳೆದ ಮೂರು ವರ್ಷಗಳಿಂದ ಹೈಕೋರ್ಟಿಗೆ ಬಂದಿದ್ದವು, ಎಷ್ಟು ಬಗೆಹರಿಸಲ್ಪಟ್ಟವು ಮತ್ತು ಬೇರೆ ಅಪೀಲು ಇತ್ಯಾದಿ ಎಷ್ಟಿವೆ ಎಂದು ನಾನು ಒಂದು ಪ್ರಶ್ನೆ ಕೂಡ ಕಳುಹಿಸಿದ್ದೆ. ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಹೇಳಿದ ಹಾಗೆ ಮೊದಲು ಮೈಸೂರು ಸಂಸ್ಥಾನದಲ್ಲಿ 5 ಜನ ಹೈಕೋರ್ಟ್ ಜಡ್ಜಿಗಳಿರುತ್ತಿದ್ದರು, ಈಗ 4 ಜನ ಮಾತ್ರ ಇದ್ದಾರೆ, ಇನ್ನೂ 2 ಸ್ಥಾನಗಳು ಖಾಲಿ ಬಿದ್ದಿವೆ, ಅದನ್ನು ಭರ್ತಿ ಮಾಡದಿರುವುದು ಈ ರೀತಿ ಕೇಸುಗಳು ತಡವಾಗುವುದಕ್ಕೆ ಕಾರಣವಾಗಿದೆ ಎಂದು ಹೇಳಿದ್ದಾರೆ. ಅದು ನಿಜವಾಗಿಯೇ ಇದೆ.

ಇನ್ನೊಂದೇನೆಂದರೆ ಮೈಸೂರಿಗೆ ಈಗ ನ್ಯಾಯಾಂಗದ ವಿಷಯದಲ್ಲಿ ಬಳ್ಳಾರಿ ಮತ್ತು ಕೊಡಗು ಎರಡೂ ಸೇರಿರುವುದರಿಂದ ಜ್ಯೂರಿಸ್ ಡಿಕ್ಷನ್ ಹೆಚ್ಚಾಗಿದೆ ಮತ್ತು ಕೇಸುಗಳ ಸಂಖ್ಯೆ ಕೂಡ ಈಚೆಗೆ ಹೆಚ್ಚಾಗಿದೆ. ಆದ್ದರಿಂದ ಖಾಲಿ ಬಿದ್ದಿರುವ ಸ್ಥಾನಗಳನ್ನು ಭರ್ತಿ ಮಾಡುವುದು ಸರ್ಕಾರದ ಮೊದಲನೆಯ ಕರ್ತವ್ಯ.

ರಿಟ್ ವಿಚಾರದಲ್ಲಿ ಸ್ಥಾನಗಳನ್ನು ಭರ್ತಿ ಮಾಡದಿರುವುದರಿಂದ ತಡವಾಗಿದೆಯೆನ್ನುವ ಅಭಿಪ್ರಾಯವನ್ನು ಯಾರಾದರೂ ಹೇಳಿದರೆ ತಪ್ಪಾಗುವುದಿಲ್ಲ. ಏಕೆಂದರೆ ಸಾಮಾನ್ಯವಾಗಿ ಒಂದು ಮೂಲಭೂತವಾದ ಹಕ್ಕಿಗೆ ತೀವ್ರವಾದ ಧಕ್ಕೆ ಬಂದಾಗ ಹೈಕೋರ್ಟಿಗೆ ರಿಟ್ ಹಾಕುತ್ತೇವೆ. ಅಂಥ ಸಂದರ್ಭದಲ್ಲಿ ಹೈಕೋರ್ಟು ತಡಮಾಡಿದರೆ ಆ ರಿಟ್ ಯಾವ ನ್ಯಾಯವನ್ನೂ ದೊರಕಿಸಿಕೊಡಲಾರದು. ಉದಾಹರಣೆ ಹೇಳಬೇಕೆಂದರೆ ಹಿಂದೆ ವಿದ್ಯಾರ್ಥಿಗಳನ್ನು ಸೆಲೆಕ್ಟ್ ಮಾಡಿದಾಗ ಯಾರೋ ಒಬ್ಬರು ಸೀಟುಕೊಟ್ಟಿಲ್ಲ, ನನಗೆ ಅನ್ಯಾಯವಾಗಿದೆ ಎಂದು ರಿಟ್‌ಹಾಕಿದರು. ಅದನ್ನು ಕಳೆದ ತಿಂಗಳಲ್ಲಿ ಫೈಸಲು ಮಾಡಿದ್ದಾರೆಂದು ಪತ್ರಿಕೆಯಲ್ಲಿ ಹಾಕಿದ್ದಾರೆ. ಇದನ್ನು ಯೋಚನೆ ಮಾಡಬೇಕು. ಹೀಗಾದರೆ ಮೂಲಭೂತವಾದ ಹಕ್ಕಿಗೆ ಧಕ್ಕೆ ಬಂದ ಹಾಗಾಗುತ್ತದೆ. ರಿಟ್ ವರ್ಷಗಟ್ಟಲೆ ತೀರ್ಮಾನವಾಗದಿದ್ದರೆ ಎಷ್ಟುಮಟ್ಟಿನ ನ್ಯಾಯ ದೊರಕುತ್ತದೆಂದು ಕೇಳಬೇಕಾಗಿದೆ. ಹೀಗೆ ನ್ಯಾಯ ದೊರಕಿಸುವುದರಲ್ಲಿ ತಡವಾದರೆ ಶ್ರೀ ಲಿಂಗಾರೆಡ್ಡಿಯವರು ಹೇಳಿದಹಾಗೆ ನ್ಯಾಯ ದೊರಕಿಸಿಲ್ಲವೆಂದು ಹೇಳಬಹುದು. ಅಪೀಲುಗಳ ವಿಚಾರವೂ ಇಷ್ಟೆ. ಅವು ಬಹು ದಿವಸಗಳವರೆಗೆ ತಡವಾಗುವುದೂ ಉಂಟು. ಕೆಲವು ಸಂದರ್ಭಗಳಲ್ಲಿ ಸಂಬಂಧಪಟ್ಟವರು ತೀರಿಹೋದಮೇಲೆ ಕೇಸು ಫೈಸಲಾಗುವುದೂ ಉಂಟು. ಈ ರೀತಿಯಾದರೆ ನ್ಯಾಯ ದೊರೆಯುವುದಿಲ್ಲ. ನಮ್ಮ ದೇಶದಲ್ಲಿ ಮೂಲಭೂತವಾದ ಒಂದು ತೊಡಕಿದೆ. ಈಗ ಬ್ರಿಟನ್ನಲ್ಲಿ ಏನೊಂದು ಪದ್ಧತಿಯಿದೆಯೋ ಅದನ್ನು ನಾವು ಒಪ್ಪಿದ್ದೇವೆ, ಅಲ್ಲಿರುವಂತೆಯೇ ಕಾನೂನಿದೆ. ಅದರ ಜೊತೆಯಲ್ಲಿ ಇಂಗ್ಲೀಷ್ ಭಾಷೆಯನ್ನು ಒಪ್ಪಿಕೊಂಡಿದ್ದೇವೆ. ಈ ಭಾಷೆ ಬಹಳವಾಗಿ ತೊಡಕಿನದಾಗಿದೆಯೆಂದು ಈ ದಿವಸ ಆಲೋಚಿಸುತ್ತಿದ್ದೇವೆ. ಏಕೆಂದರೆ ಮುಖ್ಯವಾಗಿ ಜಡ್ಜಿಗಳಾಗಲಿ ಅಥವಾ ವಕೀಲರಾಗಲಿ ಎಲ್ಲರೂ ಕಾನೂನನ್ನು ಇಂಗ್ಲೀಷ್ ಭಾಷೆಯಲ್ಲೇ ಕಲಿತವರಾಗಿರಬೇಕು. ಮತ್ತು ಆ ಭಾಷೆಯನ್ನೇ ಈ ದಿವಸ ಮುಂದುವರಿಸುತ್ತಿದ್ದೇವೆ. ನಾನು ಸಾಮಾನ್ಯ ಮನುಷ್ಯನ ದೃಷ್ಟಿಯಿಂದ ಈ ಕಾನೂನನ್ನು ನೋಡಿದೆ. ನೋಡಿದಾಗ ಅನೇಕವೇಳೆ ಒಬ್ಬ ಮನುಷ್ಯ ಕೋರ್ಟಿನಲ್ಲಿ ಹಾಜರಿದ್ದರೂ ತನ್ನ ತಕ್ಸೀರು ವಿಷಯದಲ್ಲಿ ಏನು ಚರ್ಚೆಯಾಯಿತು, ತನ್ನ ಪರವಾಗಿ ಹೇಳಿದರೇ ಅಥವಾ ವಿರೋಧವಾಗಿ ಹೇಳಿದರೇ ಎಂದು ತಿಳಿಯದೆ ಸುಮ್ಮನಿರುತ್ತಾನೆ. ಇದೊಂದು ದೊಡ್ಡ ಅಡಚಣೆಯೆಂದು ತಿಳಿದಿದ್ದೇನೆ. ಈ ಒಂದು ಅಡಚಣೆಯನ್ನು ಬಗೆಹರಿಸುವುದಕ್ಕೆ ತೀವ್ರವಾದ ಪ್ರಯತ್ನ ನಡೆಯಬೇಕು.

ಇನ್ನೊಂದು : ಕೋರ್ಟುಗಳಲ್ಲಿ ಸಾಮಾನ್ಯವಾಗಿ ಕೇಸ್ ಮುಂದೆ ಹಾಕುತ್ತಾರೆ. ಅನೇಕ ಸಂದರ್ಭಗಳಲ್ಲಿ ನೋಡಿರುವಹಾಗೆ ನ್ಯಾಯವಾದಿಗಳು ಈ ಹೊತ್ತು ಅದ್ಯಕ್ಷರಾಗಿದ್ದಾರೆ. ವಕೀಲರ ಮತ್ತು ಮ್ಯಾಜಿಸ್ಟ್ರೇಟರ ಅನುಕೂಲಕ್ಕೆ ತಕ್ಕಹಾಗೆ ಕೇಸನ್ನು ಮುಂದಕ್ಕೆ ಅಡ್ಜರ್ನ್ ಮಾಡಿಕೊಂಡು ಹೋಗುತ್ತಾರೆ. ಇವರಿಂದ ರೈತರಿಗೆ, ಬಡವರಿಗೆ ಸಾಮಾನ್ಯವಾಗಿ ಇಂಥ ಮೊಕದ್ದಮೆಗಳಲ್ಲಿ ಸಿಕ್ಕಿದವರಿಗೆ ಹೆಚ್ಚಿನ ತೊಂದರೆ. ಮುಖ್ಯವಾಗಿ ಶೀಘ್ರವಾಗಿ ನ್ಯಾಯ ದೊರೆಯಬೇಕು, ಇದನ್ನು ದೊರಕಿಸಲು ಸರ್ಕಾರ ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕು. ಮೊದಲಿನಿಂದ ಚರ್ಚೆ ಮಾಡುವಾಗ ನ್ಯಾಯಾಂಗ ಮತ್ತು ಕಾರ್ಯಾಂಗ ಬೇರ್ಪಡಿಸಬೇಕೆಂದು ಹೇಳುತ್ತಿದ್ದುದನ್ನು ಗಮನಿಸಿ ಮೈಸೂರು ಸರ್ಕಾರದವರು ಸದ್ಯದಲ್ಲೇ ಅದನ್ನು ಬೇರ್ಪಡಿಸುವರೆಂದು ಮುಖ್ಯಮಂತ್ರಿಗಳು ತಮ್ಮ ಭಾಷಣದಲ್ಲಿ ತಿಳಿಸಿದ್ದಾರೆ. ಈ ಕೆಲಸ ನಾಲ್ಕಾರು ವರ್ಷಗಳ ಹಿಂದೆಯೇ ಆಗಬೇಕಾಗಿತ್ತು. ಈಗ ಆಗುತ್ತಿರುವುದು ಒಂದು ಒಳ್ಳೆಯ ಸೂಚನೆ, ಈ ವಿಚಾರದಲ್ಲಿ ಹೆಚ್ಚು ತಡವಿಲ್ಲದೇನೆ ಕೆಲಸ ಮುಂದುವರೆಯಬೇಕು. ಯಾರನ್ನು ನೇಮಕಮಾಡಬೇಕೆಂಬ ಸಮಸ್ಯೆ ಸರ್ಕಾರದ ಮುಂದೆ ಬರಬಾರದು. ಇಂಥ ಸ್ಥಾನಕ್ಕೆ ಯಾರನ್ನು ಹಾಕಬೇಕೆಂಬ ಸಮಸ್ಯೆ ಮುಂದೆ ಬಂದು ವರ್ಷಗಟ್ಟಲೆ ಕೆಲವು ಸಂದರ್ಭಗಳಲ್ಲಿ ಹಣ ಬೇಕಾದ್ದನ್ನು ಒದಗಿಸದೆ ಸ್ಥಾನ ಭರ್ತಿಮಾಡದೆ ಮುಂದುವರೆದಿರುವುದುಂಟು. ಆದ್ದರಿಂದ ಧೈರ್ಯದಿಂದ ನಿಷ್ಪಕ್ಷಪಾತವಾಗಿ ಮೈಸೂರು ಸರ್ಕಾರ ಈ ಕೆಲಸವನ್ನು ಆದಷ್ಟು ಬೇಗ ಕಾರ್ಯಗತ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ– ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ನ್ಯಾಯಾಂಗಕ್ಕೆ 28,05,600 ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಸರ್ಕಾರ ಈ ಡಿಮ್ಯಾಂಡನ್ನು ಸಭೆಯ ಮುಂದೆ

(ಶ್ರೀ ಬಿ. ಟಿ. ಕೆಂಪರಾಜ್)

ಇಟ್ಟಿದೆ. ಈಗ ಬೆಂಗಳೂರಿನಲ್ಲಿರತಕ್ಕ ಕೋರ್ಟುಗಳು ಎಲ್ಲೆಲ್ಲಿವೆಯೆಂದು ಯೋಚನೆ ಮಾಡುವುದಾದರೆ ಮ್ಯಾಜಿಸ್ಟ್ರೇಟ್ ಕೋರ್ಟು ಕಾರ್ಪೊರೇಷನ್ ಆಫೀಸಿನ ಹತ್ತಿರ ಇದೆ. ಆಮೇಲೆ ಸಿವಿಲ್ ಕೋರ್ಟುಗಳು ಡೆಪ್ಯುಟಿ ಕಮಿಷನರ ಆಫೀಸ್ ಪ್ರೆಮಿಸಸ್‌ನಲ್ಲಿವೆ.

ಆಮೇಲೆ ಇನ್ನೂ ಕೆಲವು ಕೋರ್ಟುಗಳು ಈ ಬೆಂಗಳೂರಿನ ನಾನಾ ಭಾಗಗಳಲ್ಲಿರುತ್ತವೆ. ಆ ಎಲ್ಲಾ ಕೋರ್ಟುಗಳಿಗೂ ಈ ವಾದಿ-ಪ್ರತಿವಾದಿಗಳ ಲಾಯರ್‌ಗಳು ಹೋಗಿ ಅವರವರ ಕೇಸುಗಳನ್ನು ನಡೆಸುವುದಕ್ಕೆ ಬಹಳ ಕಷ್ಟವಾಗಿದೆ. ಹೀಗೆ ಒಂದೊಂದು ಕೋರ್ಟು ಒಂದೊಂದುಕಡೆ ಇರುವುದರಿಂದ ಅನೇಕ ಕೇಸುಗಳಿಗೆ ಈ ಲಾಯರುಗಳು ಹೋಗುವುದಕ್ಕೆ ಸಾಧ್ಯವಾಗದೆ ಕಕ್ಷಿಗಾರರುಗಳಿಗೆ ಬಹಳ ತೊಂದರೆಯಾಗುತ್ತಿದೆ. ಈ ಹಿಂದೆ ಈ ವಿಚಾರವೆತ್ತಿದ ಕೂಡಲೇ ಸರ್ಕಾರದವರು ವಿಧಾನಸೌಧದ ಕಟ್ಟಡ ಪೂರೈಸಲಿ, ಆಗ ಈ ಅಠಾರ ಕಛೇರಿಯಲ್ಲಿರತಕ್ಕಂಥ ಆಫೀಸುಗಳೆಲ್ಲಾ ಆ ಹೊಸ ಬಿಲ್ಡಿಂಗಿಗೆ ಹೋಗುತ್ತವೆ, ಆಗ ಈ ಅಠಾರಾ ಕಛೇರಿ ಕಟ್ಟಡವನ್ನೆಲ್ಲಾ ನಾನಾ ಕೋರ್ಟುಗಳನ್ನು ಒಂದೇ ಕಡೆ ನಡೆಸಲು ಅನುಕೂಲವಾಗಿರುವಂತೆ ಮಾಡಲು ಬಿಟ್ಟುಕೊಡುವುದಾಗಿ ಹೇಳುತ್ತಲೇ ಬಂದರು. ಆದರೆ ಈ ಹಿಂದೆ ಆ ರೀತಿ ಕೊಟ್ಟಿದ್ದಂಥ ಭರವಸೆಗೆ ವಿರುದ್ಧವಾದ ಸಮಾಚಾರವನ್ನು ನಾನೀಗ ಕೇಳುತ್ತಿದ್ದೇನೆ. ಅದೇನೆಂದರೆ ಈಗ ಈ ಅಠಾರ ಕಛೇರಿ ಬಹಳ ವಿತರಣೆಯಿಂದ ಇಟ್ಟುಕೊಂಡು ಬರಲಾಗಿದೆ ಅಂಥ ಈ ಕಟ್ಟಡವನ್ನು ಈ ದಿವಸ ಈ ಕೋರ್ಟುಗಳಿಗೆ ಬಿಡಿಸಿಕೊಟ್ಟರೆ ಆಗ್ಗ ಈ ಕಟ್ಟಡವೆಲ್ಲಾ ಬಹಳ ಕೆಟ್ಟು ಹೋಗುತ್ತದೆ, ಆದ್ದರಿಂದ ಇಲ್ಲಿ ಕೋರ್ಟುಗಳಿಗೆ ಸ್ಥಳ ಕೊಡುವುದಿಲ್ಲವೆಂಬ ಸಮಾಚಾರ ಕೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ನಾವೀಗ ಒಂದು ಅಂಶವನ್ನು ಆಲೋಚನೆ ಮಾಡಬೇಕಾಗಿದೆ. ಈ ದಿವಸ ಡೆಪ್ಯುಟಿ ಕಮಿಷನರ್ ಆಫೀಸಿನಲ್ಲಿ ನಡೆಸಲಾಗುತ್ತಿರುವ ಕೋರ್ಟುಗಳಲ್ಲಿ ಎಂದರೆ ಆ ಕೋರ್ಟು ಹಾಲಿನಲ್ಲಿ ಲಾಯರುಗಳಿಗೆ ಕುಳಿತು ಕೊಳ್ಳುವುದಕ್ಕೆ ಸ್ಥಳವಿಲ್ಲ. ಬರತಕ್ಕಂಥ ಪಾರ್ಟಿಗಳಿಗೆ ಅಲ್ಲಿ ನಿಲ್ಲುವುದಕ್ಕೆ ಅವಕಾಶವಿಲ್ಲ. ಆಡಳಿತದಲ್ಲಿ ಆದಾಯ ಹೆಚ್ಚಿದಂತೆಲ್ಲಾ ವೆಚ್ಚವೂ ಅಧಿಕವಾಗುತ್ತಿದೆ, ಆನಾಗ್ಯೂ ಲಾಯರ್‌ಗಳಿಗೆ ಮಾತ್ರ ಸರಿಯಾದ ಅನುಕೂಲಗಳನ್ನು ಕಲ್ಪಿಸುತ್ತಿಲ್ಲ. ಹೀಗೆ ಮಾಡುತ್ತಿರುವುದು ಲಾಯರುಗಳ ಸ್ಥಾನಕ್ಕೇ ಬಹಳ ಕುಂದುಕವನ್ನುಂಟು ಮಾಡಿದಂತಾಗಿದೆ. ಈ ದಿವಸ ಈ ಬೆಂಗಳೂರು ಒಂದರಲ್ಲೇ ಸುಮಾರು 500 ಜನ ಲಾಯರುಗಳಿರುತ್ತಾರೆ. ಇದರ ಜೊತೆಗೆ ಹೊರಗಡೆಯಿಂದಲೂ ಬಂದು ಇಲ್ಲಿ ಕೇಸುಗಳನ್ನು ನಡೆಸತಕ್ಕಂಥ ಲಾಯರುಗಳ ಸಂಖ್ಯೆ ಕೂಡ ಜಾಸ್ತಿಯಾಗಿದೆ. ಆದಕಾರಣ ಈ ದಿವಸ ಈ ಎಲ್ಲಾ ಕೋರ್ಟುಗಳೂ ಒಂದೇ ಕಡೆಯಲ್ಲಿ ನಡೆಯುವಂತೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಈಗಾಗಲೇ ಶ್ರೀ ಗೋಪಾಲಗೌಡರು ಹೇಳಿದಹಾಗೆ ಲಾಯರುಗಳು ಒಂದೊಂದು ಕಡೆ ಒಂದೊಂದು ಕೋರ್ಟು ಇರುವುದರಿಂದ ಇವರು ಅನೇಕ ಕೋರ್ಟುಗಳಿಗೆ ಹೋಗಿ ಬರಬೇಕಾಗಿರುವುದರಿಂದ ಈ ಲಾಯರುಗಳೇನಾದರೂ ಸಕಾಲಕ್ಕೆಬಾರದೆ ಸ್ವಲ್ಪ ತಡವಾದರೆ ಆ ಕೋರ್ಟಿನ ನ್ಯಾಯಾಧೀಶರು ಅದೇ ಒಂದು ಕಾರಣದಮೇಲೆ ಆ ಕೇಸುಗಳನ್ನೇ ಮುಂದಕ್ಕೆ ಅಡ್‌ಜರ್ನ್ ಮಾಡಿ ಬಿಡುತ್ತಿದ್ದಾರೆ. ಇದರಿಂದ ಲಿಟಿಗೆಂಟ್ಸ್‌ಗಳಿಗೆ ಬಹಳ ತೊಂದರೆ ಆಗುತ್ತಾ ಇದೆ. ಆದರೆ ನಾವು ಈ ದಿವಸ ಇಲ್ಲಿ ಕುಳಿತುಕೊಂಡು ಯಾರಿಗೆ ನ್ಯಾಯ ಬೇಗ ದೊರೆಯಬೇಕು, ಸುಲಭವಾಗಿ ಅದು ಅತನಿಗೆ ಲಭಿಸಬೇಕು ಎಂದು ಏನು ವಾದ ಮಾಡುತ್ತಿದ್ದೇವೋ ಅಂಥಾ ಮನುಷ್ಯನಿಗೇ ಈ ದಿವಸ ಆ ನ್ಯಾಯದ ಅನುಕೂಲತೆಗಳು ಸರಿಯಾಗಿ ದೊರೆಯದಂತಾಗಿದೆ. ಆತನಿಗೆ ಹೆಚ್ಚು ಅನಾನುಕೂಲವಾಗಿದೆ. ಈಗ ನಾನು ಹೇಳಿದಂಥ ತೊಂದರೆಗಳಿಂದ ಆತನಿಗೆ ನ್ಯಾಯ ಬೇಗ ದೊರೆಯುವಂತೆ ಮಾಡಲು ಅವಕಾಶವಿಲ್ಲ. ಅದಕ್ಕಾಗಿಯೇ ನಾನೀಗ ಈ ಎಲ್ಲ ಕೋರ್ಟುಗಳನ್ನೂ ಎಲ್ಲಿಯಾದರೂ ಅನುಕೂಲವಿರುವಂಥ ಸ್ಥಳದಲ್ಲಿ ಒಂದುಕಡೆ ಕೇಂದ್ರೀಕೃತ ಮಾಡಬೇಕೆಂದು ಹೇಳುತ್ತಿದ್ದೇನೆ.

ಇನ್ನು ಎರಡನೆಯದಾಗಿ ಈ ಎರಡನೇ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಒಬ್ಬ ಸ್ಟೆನೋಗ್ರಾಫರ್ ಇಲ್ಲ. ಇದರಿಂದ ಎಷ್ಟು ತೊಂದರೆಯುಂಟಾಗಿದೆ ಎನ್ನುವುದು ಲಾಯರುಗಳಿಗೇ ಗೊತ್ತು—ಆ ವಿಚಾರ ಆ ಕಕ್ಷಿಗಾರರಿಗೇ ಗೊತ್ತು. ಈ ಒಂದು ಕಾರಣದಿಂದ ಅನೇಕ ತಿಂಗಳುಗಳವರೆಗೆ ಅನೇಕ ಕೇಸುಗಳು ನಿಧಾನವಾಗುತ್ತಿವೆ. ಈಗ ಈ ಸ್ಟೆನೋಗ್ರಾಫರುಗಳು ಎಲ್ಲ ಕೋರ್ಟಿನಲ್ಲೂ ಇದ್ದಾರೆ. ಆದರೆ ಇವರು ಎರಡನೇ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಇಲ್ಲದೆ ಇರುವುದರಿಂದ ಬಹಳ ತೊಂದರೆಗಳುಂಟಾಗಿರುತ್ತವೆ. ಈ ದಿವಸ ಈ ತೊಂದರೆಗಳಿಗೆ ಸರಿಯಾಗಿ ಕೋರ್ಟಿನಲ್ಲಿ ಕೇಸುಗಳು ಬೇರೆ ದಿನದಿನಕ್ಕೂ ಜಾಸ್ತಿಯಾಗುತ್ತಿವೆ. ಮ್ಯಾಜಿಸ್ಟ್ರೇಟರೇ ಕುಳಿತುಕೊಂಡು ಈ ಎಲ್ಲ ಕೇಸುಗಳ ತೀರ್ಮಾನವನ್ನೂ ಬರೆಯಬೇಕೆಂದರೆ ಬಹಳ ಕಷ್ಟವಿದೆ. ಅವರು ಕೇಸುಗಳನ್ನೂ ವಿಚಾರಣೆಮಾಡಿ ತೀರ್ಮಾನಗಳನ್ನೂ ಅವರೇ ಬರೆಯಬೇಕೆಂದರೆ ಅವರಿಗೆ ತುಂಬ ಕಷ್ಟವಾಗುತ್ತದೆ. ಇದರಿಂದ ಬಹಳ ಕಾಲ ಹಿಡಿಯುತ್ತದೆ. ಈ ಕಾಲ ಪರಿಮಿತಿಯನ್ನು ಕಾಪಾಡಬೇಕಾಗಿದ್ದರೆ ಸ್ಟೆನೋಗ್ರಾಫರುಗಳು, ಅಗತ್ಯ ಬೇಕೇ ಬೇಕು. ಇವರುಗಳಿದ್ದರೆ ಕೇಸುಗಳ ತೀರ್ಮಾನದ ಬಗ್ಗೆ ಜಡ್ಜ್‌ಮೆಂಟ್ ಬರೆಯಲು ನ್ಯಾಯಧೀಶರಿಗೆ ತುಂಬ ಸಹಾಯವಾಗುತ್ತದೆ. ಆದ್ದರಿಂದ ಈ ಎರಡನೆಯ ನ್ಯಾಯಾಧೀಶರ ಕೋರ್ಟುಗಳಿಗೂ ಸ್ಟೆನೋಗ್ರಾಫರುಗಳನ್ನು ಕೂಡಲೇ ನೇಮಿಸುವಂತೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

*ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಶಾಖೆಗಳ ಮಂತ್ರಿಗಳು).—ಸ್ವಾಮಿ, ಇಲ್ಲಿಯವರೆಗೂ ನಡೆದಿರತಕ್ಕಂಥ ಚರ್ಚೆಯಲ್ಲಿ ಒಂದು ಬಹಳ ಮುಖ್ಯವಾದಂಥ ವಿಚಾರ ಎಂದರೆ ಅದು ಶ್ರೀ ಮಲ್ಲಪ್ಪ ಸಮಿತಿಯವರ ವಿಚಾರ. ಆ ಶ್ರೀ ಮಲ್ಲಪ್ಪ ಸಮಿತಿಯವರ ಶಿಫಾರ್ಸುಗಳಿಗೆ ಸರ್ಕಾರ ಎಷ್ಟರ ಮಟ್ಟಿಗೆ ಗಮನ ಕೊಡಬೇಕಾಗಿತ್ತೋ ಅಷ್ಟರ ಮಟ್ಟಿಗೆ ಗಮನ ಕೊಡಲಿಲ್ಲ, ಅಷ್ಟರ ಮಟ್ಟಿಗೆ ಅದನ್ನು ಕಾರ್ಯಗತ ಮಾಡಲಿಲ್ಲ ಎಂಬ ಅಂಶವನ್ನು ಮಾನ್ಯ ಸದಸ್ಯರು ಪ್ರಸ್ತಾಪಮಾಡಿದ್ದಾರೆ. ನಿಜ. ಈ ಬಗ್ಗೆ ಕೊಂಚ ಕಾಲವಿಳಂಬವಾಗಿದೆ ಎನ್ನುವುದನ್ನು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಆದರೆ ಆ ಸಲಹೆಗಳಲ್ಲಿ ಅನೇಕ ವಿಷಯಗಳಿಗೆ ಸರ್ಕಾರದವರು ಪೂರ್ಣ ಗಮನವನ್ನು ಕೊಟ್ಟಿದ್ದಾರೆ. ಅನೇಕ ವಿಷಯಗಳನ್ನು ಈಗಾಗಲೇ ಪರಿಶೀಲನೆಮಾಡಿದ್ದಾರೆ. ಮತ್ತೆ ಕೆಲವು ಪ್ರಾಮುಖ್ಯವಾದಂಥ ವಿಚಾರಗಳ ಬಗ್ಗೆ ಹೈಕೋರ್ಟಿನವರ ಸಲಹೆಗಳನ್ನೂ ಮತ್ತು ಅವರ ಅಭಿಪ್ರಾಯಗಳನ್ನೂ ಕೇಳಿ ತಿಳಿದುಕೊಳ್ಳಲಾಗಿದೆ. ಆದರೆ ಇದೇ ಸಂದರ್ಭದಲ್ಲಿ ಹಾಸನ ಮೈಸೂರುಗಳಲ್ಲಿ ಕೋರ್ಟುಗಳು ರೀ-ಆರ್ಗನೈಜ್ ಆಗತಕ್ಕ ವಿಚಾರದಲ್ಲಿ ಈಗಾಗಲೇ ಚರ್ಚೆ ನಡೆದು ಅದು ಫೈಸಲಾಗುವಮಟ್ಟದಲ್ಲಿದೆ ಎಂದು ತಿಳಿಸಲಿಚ್ಛಿಸುತ್ತೇನೆ. ಇನ್ನೂ ನಾವು ಬಾಕಿ ಜಿಲ್ಲೆಗಳ

ವಿಚಾರಕ್ಕೆ ಬಂದಿಲ್ಲ. ಅಂತೂ ಎಲ್ಲಾ ಜಿಲ್ಲೆಗಳ ಕೋರ್ಟಿನ ಬಗ್ಗೆಯೂ ಆದಷ್ಟು ಜಾಗ್ರತೆ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕ ಮಾಡುವ ತತ್ವವನ್ನು ನಾವು ಅಂಗೀಕಾರ ಮಾಡಿದ್ದೇವೆ. ಇದನ್ನು ಕಾರ್ಯರೂಪಕ್ಕೆ ತರಲು ಒಂದು ಹೊಸ ದರ್ಜೆಯ ಸಿವಿಲ್ ಜಡ್ಜ್‌ಗಳ ಸ್ಥಾನದ ಬಗ್ಗೆ ಸ್ವಲ್ಪ ಚರ್ಚೆ ಆಗಬೇಕಾಗಿತ್ತು. ಈಗ ಅದೂ ಸಹ ತೀರ್ಮಾನವಾಯಿತು. ಆ ಬಗ್ಗೆ ಅಗತ್ಯವಾದ ತಿದ್ದುಪಡಿಗಳನ್ನೂ ಕೂಡ ಕಾನೂನಿನಲ್ಲಿ ಅಡಕ ಮಾಡಲಾಗಿದೆ. ಈ ದಿವಸವೇ ಇದನ್ನು ಪ್ರತ್ಯೇಕ ಮಾಡುವುದಕ್ಕೂ ಕೂಡ ಅವಕಾಶವಿದೆ. ಇನ್ನು ಮುನಿಸಿಫ್ ಕೋರ್ಟುಗಳಲ್ಲಿ 1—2 ಸ್ಥಾನಗಳು ಖಾಲಿ ಬೀಳುವಂಥಾ ಪ್ರಸಂಗವಿತ್ತು. ಅವುಗಳನ್ನೂ ಸಹ ಭರ್ತಿ ಮಾಡುವುದಕ್ಕೆ ಸೂಕ್ತ ಅಮೆಂಡ್‌ಮೆಂಟುಗಳನ್ನು ಕಾನೂನಿನಲ್ಲಿ ಸೇರಿಸಲಾಗಿದೆ. ಆದ್ದರಿಂದ ಈ ವಿಚಾರವನ್ನು ವಿನಾಕಾರಣ ಸರ್ಕಾರಕ್ಕೆ ಮುಂದುವರಿಸಿಕೊಂಡು ಹೋಗಬೇಕೆಂಬ ಉದ್ದೇಶ ಖಂಡಿತ ಇಲ್ಲ. ಅನೇಕ ವರ್ಷಗಳಿಂದ ಏನೊಂದು ಈ ವಿಚಾರವಾಗಿ ನಾವೆಲ್ಲರೂ ಬಹಳವಾಗಿ ವಾದ ಮಾಡುತ್ತಿದ್ದೆವೋ ಅದು ಈಗ ಸಧ್ಯದಲ್ಲೇ ಕಾರ್ಯಗತವಾಗತಕ್ಕ ಮಟ್ಟಕ್ಕೆ ಮುಟ್ಟಿದೆ ಎಂಬ ಭರವಸೆಯನ್ನು ನಾನೀಗ ಈ ಮಾನ್ಯ ಸಭೆಗೆ ನೀಡಬಲ್ಲೆ.

ಕಡೂರು ಕೋರ್ಟಿನ ವಿಚಾರದಲ್ಲಿ ರಿಪೋರ್ಟು ಬಂದಿದೆ. ಈ ದಿವಸ ಅಲ್ಲೇ ಅಕ್ಕಪಕ್ಕಗಳಲ್ಲಿ ತರಿಕೆರೆ ಮತ್ತು ಚಿಕ್ಕಮಗಳೂರಿನಲ್ಲಿ ಕೋರ್ಟುಗಳಿರುತ್ತವೆ. ಆ ಕೋರ್ಟುಗಳಿಗೇ ಅಲ್ಲಿ ಸಾಕಷ್ಟು ಕೆಲಸಗಳಿಲ್ಲ. ಹೀಗೆ ಅಲ್ಲೇ ಸ್ಥಾಪನೆ ಮಾಡಿರುವ ಒಂದೆರಡು ಕೋರ್ಟುಗಳಿಗೇ ಕೆಲಸವಿಲ್ಲದಿರುವಾಗ ನಾವು ಈಗ ಪುನಃ ಅಲ್ಲೇ ಮತ್ತೊಂದು ಹೊಸ ಕೋರ್ಟನ್ನು ಸ್ಥಾಪನೆ ಮಾಡುವುದು ಸರಿಯಾದದ್ದೇ ಎಂಬುದನ್ನು ಮಾನ್ಯ ಸದಸ್ಯರುಗಳೇ ಆಲೋಚನೆ ಮಾಡಬೇಕಾಗಿದೆ.

ಕೋರ್ಟುಗಳ ಎಕ್ವಿಪ್‌ಮೆಂಟ್ ವಿಚಾರದಲ್ಲಿ ಚರ್ಚೆ ಮಾಡಲಾಯಿತು. ಕುರ್ಚಿ—ಮೇಜು ಇತ್ಯಾದಿ ಸಣ್ಣ ಪುಟ್ಟ ಸಾಮಾನುಗಳ ಬಗ್ಗೆ ಈಗಾಗಲೇ ನಾವು ಬಡ್ಜೆಟ್ಟಿನಲ್ಲಿ 80 ಸಾವಿರ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಆ ಹಣ ಇನ್ನೂ ಸಾಲದೆಂದು ಕಂಡು ಬಂದರೆ ಮತ್ತಷ್ಟು ಹಣವನ್ನು ಕೊಡುವುದಕ್ಕೆ ನಾವು ಸಿದ್ಧವಾಗಿದ್ದೇವೆ. ಇನ್ನು ಲಿಟಿಗೆಂಟ್ಸ್ ಪಬ್ಲಿಕ್ಕಿಗೆ ಸೌಕರ್ಯಗಳನ್ನು ಒದಗಿಸಬೇಕಾದ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ಆದರೆ ಇದರಲ್ಲೊಂದು ತೊಂದರೆಯಿದೆ. ಈ ದಿವಸ ಕೆಲವು ಕಡೆ ಕೋರ್ಟುಗಳು ಸರ್ಕಾರಿ ಬಿಲ್ಡಿಂಗ್‌ನಲ್ಲಿವೆ. ಮತ್ತೆ ಕೆಲವು ಕಡೆಗಳಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಕೋರ್ಟುಗಳನ್ನು ನಡೆಸಲಾಗುತ್ತಿದೆ. ಇಂಥ ಬಾಡಿಗೆ ಕಟ್ಟಡಗಳಲ್ಲಿ ಆ ಕೋರ್ಟುಗಳು ಎಷ್ಟು ಕಾಲದವರೆಗೆ ಕೆಲಸ ಮಾಡುತ್ತವೆಂಬುದನ್ನು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ. ಹೀಗಿರುವಾಗ ಸರ್ಕಾರದವರು ಆ ಬಾಡಿಗೆ ಕಟ್ಟಡಗಳ ಬಳಿ ಈ ರೀತಿ ಕೋರ್ಟುಗಳಿಗೆ ಬರತಕ್ಕ ಜನರಿಗೆ ಅನುಕೂಲಗಳನ್ನು ಕಲ್ಪಿಸಲು ಸರ್ಕಾರಿ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಿದೆಯೇ ಎಂಬುದು ತಾವೆಲ್ಲರೂ ಆಲೋಚನೆ ಮಾಡಬೇಕಾದಂಥ ವಿಚಾರ. ಈಗಾಗಲೇ ಇಂಥ 13 ಕಡೆಗಳಲ್ಲಿ ಅನುಕೂಲ ಕಲ್ಪಿಸಿಕೊಡಿ ಎಂದು ಕೇಳುತ್ತಿದ್ದಾರೆ. ನಾವು ಈಗ ಆರು ಕಡೆಗಳಲ್ಲಿ ವಿಟ್ನೆಸ್ ಷೆಡ್‌ಗಳನ್ನು ಹಾಕಿಸಲು ಆರ್ಡರ್ ಮಾಡಿದ್ದೇವೆ. ಆದರೆ ಆ ಜನಗಳಿಗೆ ಈ ಪರಿಹಾರಗಳೆಲ್ಲಾ ದೊರೆಯಬೇಕಾಗಿದ್ದರೆ ಸ್ವಲ್ಪ ಕಾಲ ಬೇಕು. ಎಲ್ಲಾ ಕಡೆಗಳಲ್ಲೂ ಏಕ ಕಾಲಕ್ಕೇ ಈ ಅನುಕೂಲಗಳನ್ನು ಕಲ್ಪಿಸಬೇಕೆಂದರೆ ಬಹಳ ಕಷ್ಟವಿದೆ.

ಇನ್ನು ಕಾಪಿಯಿಸ್ಟ್‌ಗಳ ಸಂಬಳದ ಬಗ್ಗೆ ಚರ್ಚೆ ನಡೆದಿದೆ. ಈ ದಿವಸ ಅವರಿಗೆ ಕೆಲವು ಭಾಗ ಸಂಬಳದ ರೂಪವಾಗಿಯೂ ಕೆಲವು ಭಾಗ ಕಮಿಷನ್ ಮೂಲಕವಾಗಿಯೂ ಕೊಡಲಾಗುತ್ತಿದೆ. ಮೊದಲೆಲ್ಲ ಇವರು ಆ ಕಮಿಷನ್ ಒಂದರ ಮೇಲೇ ಕೆಲಸಮಾಡಿಕೊಂಡು ಬರುತ್ತಿದ್ದರು. ಆದರೆ 1949ರಿಂದೀಚೆಗೆ ಈ ಎರಡು ರೀತಿಯಲ್ಲಿ ಅವರಿಗೆ ಈಗ ಸಂಭಾವನೆ ದೊರೆಯುತ್ತಿದೆ. ಮೊದಲು ಇವರು ಕಮಿಷನ್ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾಗ ಚೆನ್ನಾಗಿ ಸಂಪಾದನೆ ಮಾಡುತ್ತಿದ್ದರು. ಈಚೆಗೆ ಸಂಬಳ ಗೊತ್ತು ಮಾಡಿದ ಮೇಲೆ ಇವರಲ್ಲಿ ಸೋಮಾರಿತನ ಜಾಸ್ತಿಯಾಗಿದೆ. ಅಷ್ಟೇ ಶಿವಾಯಿ ಇವರಿಗೆ ಸಂಬಳ ಕಮ್ಮಿ ಎನ್ನುವುದಕ್ಕೆ ಆಸ್ಪದವೇ ಇಲ್ಲ. ಆದ್ದರಿಂದ ಇವರಿಗೆ ಕೆಲವು ಭಾಗ ಸಂಬಳದ ರೂಪದಲ್ಲಿ—ಕೆಲವು ಭಾಗ ಕಮಿಷನ್ ರೂಪದಲ್ಲಿ ಕೊಡುವುದನ್ನೇ ಮುಂದುವರಿಸಿದರೆ ಅನುಕೂಲವಾಗಿರುತ್ತದೆಂದು ತಿಳಿದು ಬಂದಿದೆ. ಈ ವಿಚಾರದಲ್ಲಿ ನಾವೀಗ ಹೈಕೋರ್ಟಿನವರ ಅಭಿಪ್ರಾಯವನ್ನು ಕೇಳಿದ್ದೇವೆ. ಅವರ ಅಭಿಪ್ರಾಯವನ್ನು ತಿಳಿದುಕೊಂಡ ನಂತರ ಇದನ್ನು ಒಂದು ಅನುಕೂಲ ವಾದ ರೀತಿಯಲ್ಲಿ ತೀರ್ಮಾನ ಮಾಡಬಹುದು.

Sri M. LINGANNA (Nanjangud).—On a point of information. Now so far as the Copyists are concerned, in view of the changed Criminal Procedure Code, I believe most of the copies are given to the parties concerned, including the statement of witnesses and also charge-sheets, but there is no necessity to copy out the charge-sheets or the statements made before the Police. In view of the changed position, how would the Government react to these Copyists ?

Sri A. G. RAMACHANDRA RAO.—I do not quite catch the point made by the Hon'ble Member.

Mr. CHAIRMAN (SRI K. PATTABHIRAMAN).—Under the amended Criminal Procedure Code, the Police are expected to supply copies to the accused even before the trial starts. To that extent, the necessity of the Copying staff being enlisted to make the copies will be minimised.

Sri A. G. RAMACHANDRA RAO.—That is the least part of the work of the Copyists. Much work has to be done by the Copyists. Compared to that, the supply of copies of charge-sheets is a very small item. Therefore, it does not materially alter the situation.

(SRI A. G. RAMACHANDRA RAO.)

Regarding the vacancy in the High Court, a statement was made that there was provision for six Judges. The maximum fixed for the High Court is six, but both the High Court and the Mysore Government have accepted that it would be five and on the basis of adequacy of five Judges, the work is going on. Of the five, there is one vacancy. It is true the Government are trying their best, as has been explained on previous occasions, to fill up the vacancy and I hope it will be done very early. There are no vacancies in the Munsiffs' cadre or in the Subordinate Judges' cadre. There is one vacancy in the District Judges' cadre.

ಈ ಒಂದು ಕಾರಣದಿಂದಲೇ ಕೇಸುಗಳು ಡಿಲೇ ಆಗುತ್ತವೆಯೆಂದು ಹೇಳುವುದು ಸರಿಯಲ್ಲ. ಜಡ್ಜಿಗಳನ್ನು ನೇಮಕ ಮಾಡದಿರುವುದರಿಂದಲೇ ಕೇಸುಗಳ ತೀರ್ಮಾನ ನಿಧಾನವಾಗುತ್ತಿಲ್ಲ. ಈ ನಿಧಾನಕ್ಕೆ ಕಾರಣ ತ್ರಿಗುಣಾತ್ಮಕವಾಗಿದೆ. ಒಂದು ಕಡೆ ಕಕ್ಷಿಗಾರರು ಸಕಾಲಕ್ಕೆ ಸರಿಯಾಗಿ ತಮ್ಮ ತಮ್ಮ ಕಡೆಯ ಸಾಕ್ಷಿಗಾರರನ್ನು ಕರೆತರದಿರುವುದೂ ಕೇಸುಗಳ ಡಿಲೆಗೆ ಒಂದು ಮುಖ್ಯ ಕಾರಣವಾಗಿದೆ. ಇನ್ನು ಎರಡನೆಯದಾಗಿ ಜಡ್ಜಿಗಳಿಲ್ಲದಿರುವುದೂ ಸಹ ಒಂದು ಕಾರಣ. ಮೂರನೆಯದಾಗಿ ಲಾಯರ್‌ಗಳು ಸರಿಯಾಗಿ ಕೇಸುಗಳಿಗೆ ಹಾಜರಾಗದೆ ಇರುವುದು. ಹೀಗೆ ಈ ಮೂರು ಕಾರಣಗಳಿಂದಲೂ ಕೇಸುಗಳ ತೀರ್ಮಾನ ನಿಧಾನವಾಗುತ್ತಿದೆ. ಈಗಾಗಲೇ ಈ ಸಂಬಂಧವಾಗಿ ಸ್ಟ್ರಿಕ್ಟ್ ಸರ್‌ಕ್ಯುಲರ್‌ಗಳನ್ನು ಎಲ್ಲರಿಗೂ ಕಳುಹಿಸಿದ್ದೇವೆ. ಈಗ ನಮ್ಮ ಪಾರ್ಲಿಯಮೆಂಟಿನ ಮುಂದೆ ಈ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳ ಹೊಂದಾವಣಿಕೆಯ ಬಗ್ಗೆ ಒಂದು ಅಮೆಂಡ್‌ಮೆಂಟ್ ಕೂಡ ತಂದು ಅದನ್ನು ಸರಿಪಡಿಸಬೇಕೆಂಬುದು ಆಲೋಚನೆಯಲ್ಲಿದೆ. ಅದು ಆದ ಬಳಿಕ ಈ ಕೋರ್ಟುಗಳ ಕಾರ್ಯಕ್ರಮಗಳೆಲ್ಲಾ ಸರಿಹೋಗಬಹುದೆಂದು ಕಾಣುತ್ತದೆ. ಆದ ಪ್ರಯುಕ್ತ ಈಗ ತಾವುಗಳೆಲ್ಲರೂ ಈ ಡಿಮ್ಯಾಂಡ್ ಮನವಿಯಲ್ಲಿ ಕೇಳಿಕೊಂಡಿರುವ ಮೊಬಲಗಿಗೆ ತಮ್ಮ ಅಂಗೀಕಾರವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

MR. CHAIRMAN.—The question is :

"That a sum not exceeding Rs. 28,05,600 be granted to the Government to defray the charges which will come in course of payment during the year ending 31st day of March 1957, in respect of 'Administration of Justice'."

The motion was adopted.

4-30 P.M.

DEMAND NO. 15.—JAILS.

28. JAILS AND CONVICT SETTLEMENTS.

MR. CHAIRMAN.—Motion moved :

"That a sum not exceeding Rs. 15,77,000 be granted to the Government to defray the charges which will come in course of payment during the year ending 31st day of March 1957, in respect of 'Jails and Convict Settlements'."

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ-ನರಸೀಪುರ).—ಸ್ವಾಮಿ, ಈ ಬಂದೀಖಾನೆಗಳಲ್ಲಿ ಕೈಗಾರಿಕೆಯನ್ನು ಸ್ಥಾಪಿಸಬೇಕು. ತನ್ಮೂಲಕ ಶಿಕ್ಷೆಗೆ ಒಳಗಾದಂಥಾ ಬಂದಿಗಳಿಗೆ ಕಸಬನ್ನು ಕಲಿಸಿಕೊಟ್ಟಹಾಗಾಗುತ್ತದೆ. ಅವರು ಬಂದೀಖಾನೆಗೆ ಬಂದು, ಬಿಡುಗಡೆ ಆದ ತಕ್ಷಣ ಸಮಾಜದಲ್ಲಿ ನ್ಯಾಯವಾದ ಜೀವನವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯೂ ಒಂದು. ಈಗ ಬೆಂಗಳೂರಿನಲ್ಲಿರುವ ಸೆಂಟ್ರಲ್ ಜೈಲಿನಲ್ಲಿ ಡ್ರುಗೆಟ್ಸ್ ತಯಾರು ಮಾಡುತ್ತಾರೆ ಮತ್ತು ಇನ್ನು ಅನೇಕ ವಿಧವಾದ ಬಟ್ಟೆಗಳನ್ನು ತಯಾರು ಮಾಡುತ್ತಾರೆ. ನಮ್ಮ ದೇಶದಲ್ಲಿ ಮತ್ತು ಹೊರಗಡೆಯೂ ಸಹ ಈ ಡ್ರುಗೆಟ್ಸ್‌ಗೆ ಬಹಳ ಗಿರಾಕಿ ಇದೆ, ರಫ್ತು ಕೂಡ ಮಾಡುತ್ತೇವೆ. ಆದ್ದರಿಂದ ಏಕೆ ನಾವು ಇದನ್ನು ಇನ್ನು ಹೆಚ್ಚಿಸಿಕೊಳ್ಳಬಾರದು ? ಮೈಸೂರಿನಲ್ಲಿರತಕ್ಕ ಬಂದೀಖಾನೆ, ಬೆಂಗಳೂರಿರಲ್ಲಿರಕತ್ಕ ಬಂದೀಖಾನೆ, ಬಳ್ಳಾರಿಯಲ್ಲಿರತಕ್ಕ ಬಂದೀಖಾನೆ ಇವುಗಳಲ್ಲಿ ಅವಕ್ಕೆ ಯಾವ ಯಾವ ಯಂತ್ರ ಸಾಮಗ್ರಿಗಳು ಬೇಕೋ ಅವನ್ನು ಒದಗಿಸಿಕೊಟ್ಟು, ಅಲ್ಲಿರತಕ್ಕವರೆಲ್ಲರಿಗೂ ಅಭ್ಯಾಸ ಮಾಡಿಸಿ ಹೆಚ್ಚು ಪದಾರ್ಥಗಳನ್ನು ತಯಾರು ಮಾಡಿ ತನ್ಮೂಲಕ ಅವರಿಗೆ ಕಸಬನ್ನು ಕಲಿಸಬಹುದು. ಎರಡನೆಯದು ಬಂದೀಖಾನೆಗಳಿಗೆ ಆಗತಕ್ಕ ಖರ್ಚು ಕೂಡ ಕಡಿಮೆ ಮಾಡಿದಹಾಗಾಗುತ್ತದೆ ಎಂದು ನನ್ನ ಭಾವನೆ. ಈಗ ಈ ಬಡ್ಜೆಟ್ ಅಂದಾಜಿನ ಪ್ರಕಾರ ಬಂದೀಖಾನೆಯಲ್ಲಿರತಕ್ಕ ಬಂದಿಗಳಿಗೆ ಆಹಾರಕ್ಕಾಗಿ 7 ಲಕ್ಷ ರೂಪಾಯಿ ಖರ್ಚಾಗುತ್ತಾ ಇದೆ. ಎರಡು ಹೊತ್ತು ಕೊಡತಕ್ಕ ಊಟಕ್ಕೆ, ಅದು ಸ್ವಲ್ಪವೇ ಆದರೂ ಕೂಡ, 7 ಲಕ್ಷ ರೂಪಾಯಿ ಖರ್ಚಾಗುತ್ತಾ ಇದೆ. ಆದ್ದರಿಂದ ಅವರಿಗೆ ಆದಷ್ಟು ಕಸಬನ್ನು ಕಲಿಸಿ, ತಯಾರಾದ ಪದಾರ್ಥಗಳನ್ನು ಮಾರಾಟ ಮಾಡಿದ್ದೇ ಆದರೆ ಆ ಮೂಲಕ ಆರ್ಥಿಕಸ್ಥಿತಿ ಉತ್ತಮವಾಗುತ್ತದೆ ಎಂಬ ದೃಷ್ಟಿಯಿಂದ ಯೋಚನೆ ಮಾಡುತ್ತಾ ಇದ್ದೇನೆ. ಈಗ ಅಲ್ಲಿ ತಯಾರಾಗತಕ್ಕ ಪದಾರ್ಥಕ್ಕೆ ಸರಿಯಾದ ಪ್ರಚಾರ ಇಲ್ಲ. ಜೈಲುಗಳಲ್ಲಿ ಏನು ತಯಾರಾಗುತ್ತಿದೆ ಎಂಬುದಕ್ಕೆ ಪ್ರಚಾರ ಕಡಿಮೆ. ಈ ಪ್ರಚಾರದ ಜೊತೆಗೆ ತಯಾರಾದ ಪದಾರ್ಥಗಳನ್ನು ಎಕ್ಸಿಬಿಷನ್‌ನಲ್ಲಿ ಇಟ್ಟದ್ದೇ ಆದರೆ ಹೆಚ್ಚು ಪ್ರಚಾರವಾಗುತ್ತದೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಈಗಲೂ ಇಡುತ್ತಾ ಇದ್ದಾರೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಬಹಳ ಕಡಿಮೆ ಮಟ್ಟದಲ್ಲಿ ಆಗುತ್ತದೆ, ಇನ್ನೂ ಹೆಚ್ಚಾಗಿ ಮಾಡಬೇಕು. ಬಂದೀಖಾನೆಯಲ್ಲಿ ಶಿಕ್ಷೆ ಅನುಭವಿಸಿ

ಬಿಡುಗಡೆಯಾಗಿ ಬಂದನಂತರ ಅವನನ್ನು ದೂರ ತಳ್ಳುವುದಕ್ಕಾಗುವುದಿಲ್ಲ. ಅವನು ಸಮಾಜದಲ್ಲಿ ಇರಬೇಕು. ಸಮಾಜದಲ್ಲಿ ಇರಬೇಕಾದರೆ ನ್ಯಾಯವಾದ ರೀತಿಯಲ್ಲಿ ಜೀವನ ಸಾಗಿಸುವುದಕ್ಕೆ ಸಹಾಯಕವಾದ ಕಸಬನ್ನು ಕಲಿಸಿಕೊಡಬೇಕು. ವಿಧಾನಸೌಧದಲ್ಲಿ ಅವರಿಂದ ಕೆಲಸಮಾಡಿಸುತ್ತಿದ್ದೀರಿ. ಅವರಿಗೆ ಎಷ್ಟು ಹಣ ಕೂಲಿ ರೂಪದಲ್ಲಿ ಪಾವತಿ ಮಾಡುತ್ತಿದ್ದೀರಿ, ಎಷ್ಟು ಹಣ ಅವರ ಲೆಕ್ಕದಲ್ಲಿದೆ ಎಂಬುದು ಗೊತ್ತಿಲ್ಲ. ಹೋದ ವರ್ಷ ಒಂದು ಪ್ರಶ್ನೆ ಕೇಳಿದಾಗ ಪೀಸ್‌ವರ್ಕ್ ಸಿಸ್ಟಂ ಪ್ರಕಾರ ಏನು ಕೆಲಸ ಮಾಡುತ್ತಾನೋ ಅದಕ್ಕೆ ತಕ್ಕಷ್ಟು ಕೂಲಿ ಕೊಡುತ್ತೇವೆ, ಅದನ್ನು ಅವನ ಲೆಕ್ಕದಲ್ಲಿ ಇಟ್ಟು ಬಿಡುಗಡೆ ಆದ ನಂತರ ಅವನಿಗೆ ಕೊಡುತ್ತೇವೆ ಎಂದು ಹೇಳಿದರು. ಆ ವಿಷಯದಲ್ಲಿ ಸರ್ಕಾರದವರು ಹೆಚ್ಚು ಗಮನ ಕೊಡಬೇಕೆಂಬ ದೃಷ್ಟಿಯಿಂದ ಈ ಕತ್ತರಿ ನಿರ್ಣಯವನ್ನು ಸೂಚಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಚಿಕ್ಕ ವಯಸ್ಸಿನ ಅಪರಾಧಿಗಳ ವಿಚಾರವನ್ನು ಚರ್ಚೆಮಾಡಬೇಕೆಂದು ಒಂದು ಖೋತಾ ನಿರ್ಣಯವನ್ನು ತಂದಿದ್ದೇನೆ. ಈ ಚಿಕ್ಕ ವಯಸ್ಸಿನ ಅಪರಾಧಿಗಳ ವಿಷಯದಲ್ಲಿ ಅನೇಕ ಹೊಸ ಗ್ರಂಥಗಳು ಬಂದಿವೆ. ಈ ಅಪರಾಧ ಮಾಡತಕ್ಕದ್ದು ಚಿಕ್ಕತನದ ಮನೋವೃತ್ತಿ ಒಂದೇ ಅಲ್ಲ, ಅವನು ಯಾವ ಸಮೂಹದಲ್ಲಿ ಬೆಳೆಯುತ್ತಾನೆ ಮತ್ತು ಅವನು ಹುಟ್ಟಿದಾಗಿನಿಂದ ಯಾವ ಪರಿಸ್ಥಿತಿಯಲ್ಲಿ ಇದ್ದಾನೆ ಎಂಬುದರ ಮೇಲೆ ಅವನಲ್ಲಿ ತಪ್ಪುಮಾಡತಕ್ಕ ಗುಣ, ಅಪರಾಧ ಮಾಡತಕ್ಕ ಬುದ್ಧಿ ಅವಲಂಬಿಸಿರುತ್ತದೆ ಎಂದು ಈ ವಿಷಯದಲ್ಲಿ ಆಲೋಚನೆ ಮಾಡಿರತಕ್ಕವರು ವೈಜ್ಞಾನಿಕವಾಗಿ ಪರಿಶೋಧನೆ ಮಾಡಿ ಹೇಳಿದ್ದಾರೆ. ಈ ವಿಷಯದಲ್ಲಿ ನಾವು ಈಗಿನ ಆಧುನಿಕ ನಾಗರಿಕತೆಯ ಕಾಲಕ್ಕನುಗುಣವಾಗಿ ನಡೆದುಕೊಳ್ಳಬೇಕಾಗಿದೆ. ನಮ್ಮ ಹಿಂದೂ ಶಾಸ್ತ್ರವನ್ನು ಮತ್ತು ಸಂಪ್ರದಾಯವನ್ನು ತೆಗೆದುಕೊಂಡರೆ ಈ ಸಭೆಯಲ್ಲಿ ಅನೇಕರಿಗೆ ಗೊತ್ತಿರುವಂತೆ ಸಾಮಾನ್ಯವಾಗಿ 5 ವರ್ಷಗಳವರೆಗೂ ಯಾವ ಮಗುವೇ ಆಗಲಿ ಯಾವ ಅಪರಾಧವನ್ನೇ ಮಾಡಲಿ ಅದು ದೋಷವಲ್ಲ ಎಂದು ಹೇಳತಕ್ಕ ಸಂಪ್ರದಾಯವಿದೆ, ಆ ರೀತಿ ಹೇಳುತ್ತಾರೆ. ಎಂದರೆ ಆ innocence ಇರುವುದು 5 ವರ್ಷದವರೆಗೂ ಇರುತ್ತದೆ ಎಂದು ಹೇಳಿ ಈ ಒಂದು ರೀತಿಯಾದ ಸಂಪ್ರದಾಯ ಶಾಸ್ತ್ರವಾಗಿ ಬೆಳೆದುಕೊಂಡು ಬಂದಿದೆ. ಅದನ್ನೇ ಇನ್ನು ಸ್ವಲ್ಪ ಹೆಚ್ಚು ವಯಸ್ಸಿನವರಿಗೂ ಬೆಳೆಸಿಕೊಂಡು ಬರಬಹುದು. ಸಾಮಾನ್ಯವಾಗಿ 15-16 ವರ್ಷದವರೆಗೂ ಕೂಡ ಕೆಲವು ಮಕ್ಕಳನ್ನು ಹತೋಟಿಗೆ ತರುವುದು ಕಷ್ಟ. ಸ್ಕೂಲಿನಲ್ಲಿ ಅವರನ್ನು ಹತೋಟಿಗೆ ತರುವುದಕ್ಕೆ ಆಗುವುದಿಲ್ಲ. ಮನೆಯಲ್ಲಿ ಹತೋಟಿಗೆ ತರುವುದಕ್ಕೆ ಆಗುವುದಿಲ್ಲ. ಇದು ಅವರಲ್ಲಿ ಸರ್ವೇಸಾಧಾರಣವಾಗಿ ಹುಟ್ಟುಗುಣವಾಗಿ ಬಂದಿರುತ್ತದೆ. ಕೆಟ್ಟ ಉದ್ದೇಶ ಇಲ್ಲದೆ, ಮಗುವು ಯಾವ ರೀತಿ ಹಾಲು ಕುಡಿಯುತ್ತದೆಯೋ ಅದೇ ರೀತಿ ಗಲಭೆ ಮಾಡುವುದೂ ಕೂಡ ಅವರಲ್ಲಿ ಹುಟ್ಟುಗುಣವಾಗಿ ಬಂದಿರುತ್ತದೆ. ಆದ್ದರಿಂದ ಆ ವಿಷಯದಲ್ಲಿ ಶಿಕ್ಷಣ ಯಾವ ರೀತಿಯಾಗಿ ನಡೆಯಬೇಕು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಚಿಕ್ಕಮಕ್ಕಳು ಅಪರಾಧಗಳನ್ನು ಮಾಡುವುದಕ್ಕೆ ಸಿನಿಮಾಗಳು ಬಹುಮಟ್ಟಿಗೆ ಜವಾಬ್ದಾರಿಯಾಗಿವೆ ಎಂದು ಹೇಳಬಹುದು. ಸಿನಿಮಾದಲ್ಲಿ ಬರತಕ್ಕ ಚಿತ್ರಗಳಲ್ಲಿ ಕಳವು ಹೇಗೆ ಮಾಡುತ್ತಾನೆ, ಯಾವ ರೀತಿಯಾಗಿ ದರೋಡೆ ಮಾಡುತ್ತಾನೆ, ಯಾವ ರೀತಿಯಾಗಿ ಪಿಕ್‌ಪಾಕೆಟ್ ಮಾಡುತ್ತಾನೆ ಎಂಬುದನ್ನೆಲ್ಲಾ ತೋರಿಸುತ್ತಾರೆ. ಅದನ್ನೆಲ್ಲಾ ನೋಡಿಕೊಂಡು ನಮ್ಮ ಹುಡುಗರು ನಮ್ಮ ಜಾಣತನ ಹೇಗೆ ಇದೆ ಪ್ರಯೋಗ ಮಾಡೋಣ ಎಂದು ಹೇಳಿ ಪ್ರಯೋಗ ಮಾಡುತ್ತಾರೆ. ಆದ್ದರಿಂದ ಇದು ಬಹಳ ಕಷ್ಟತರವಾದ ಸಮಸ್ಯೆ. ನನಗೆ ಇರತಕ್ಕ ಈ ಅಲ್ಪ ಕಾಲದಲ್ಲಿ ಅದನ್ನೆಲ್ಲಾ ಲಂಬಿಸಿ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಯಾವ ರೀತಿ ಅಪರಾಧ ಮಾಡಿದರೆ ಜೈಲಿಗೆ ಹೋಗುತ್ತೇನೆ, ಸಮಾಜದಲ್ಲಿ ಗಣ್ಯಸ್ಥಾನ ದೊರಕುವುದಿಲ್ಲ ಎಂಬ ಭಾವನೆ ಈ ಚಿಕ್ಕ ಅಪರಾಧಿಗಳ ಮನಸ್ಸಿನಲ್ಲಿ ಮೂಡುವಂತೆ ಮಾಡುವುದಕ್ಕೆ ಯಾವ ರೀತಿ ಸಾಧ್ಯವಿದೆ ಎಂಬುದನ್ನು ಯೋಚನೆಮಾಡಿ ಅದಕ್ಕೆ ತಕ್ಕ ಏರ್ಪಾಡು ಮಾಡಬೇಕು. ಅದಕ್ಕೆ ಬಾರ್‌ಸ್ಟಲ್ ಸ್ಕೂಲು ಮುಂತಾದುವೆಲ್ಲಾ ಇವೆ. ಅಲ್ಲಿ ಸರ್ಕಾರದವರು ಏನು ಕ್ರಮ ಕೈಕೊಂಡಿರುವರೋ ಗೊತ್ತಿಲ್ಲ. ಈ ವಿಷಯದಲ್ಲಿ ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

*Sri H. C. LINGA REDDY (Malur).—I rise to support this Demand. I do not know whether the jails or the lock-ups we have now got are called convict settlements.

Sri S. SRINIVASA IYENGAR.—That is the general head of account.

Sri H. C. LINGA REDDY.—I think the words 'convict settlements' are very advisedly used, because if we see our jails and lock-ups, I am afraid they are not in a properly settled place. They are very insanitary, very congested. They are either in urban areas or in localities round which there are a number of houses. It is said that man is a creature of his environment. Specially it is so in the case of a convict. It is only when his surroundings are happy, good and attractive, he can be a healthy creature. I think our present jails and lock-ups in various district headquarters, from that point of view, require a good deal of attention, especially the lock-ups. No doubt some of the jails in Bangalore, namely, the Central Jail and the Sub-Jail at Hassan and a number of jails in Bellary are supposed to house our prisoners. In these areas we have some industries for these prisoners. But in the other district headquarters where we have lock-ups, they are very much congested and they are very narrow and insanitary and it will be very difficult for the convicts to develop a healthy sort of life. I think it is necessary, specially in the district lock-ups in some district headquarters, to make the atmosphere of the surroundings as congenial as

(SRI H. C. LINGA REDDY.)

possible. We do not want any industries started for the benefit of these convicts in the district lock-ups. I think prisoners sentenced to imprisonment for one month and less are lodged in district lock-ups and those sentenced to more than one month will be transferred to the Central Jail or the Jail in Hassan or probably to the several jails in Bellary. In the district lock-ups as I have said already the surroundings are very bad, the area is very narrow and conjested and it is better we take away the lock-ups from those areas and build a sort of convict settlement far removed from the town so that in those settlements we may give them various kinds of local industries and we may start agricultural occupations also for these convicts. Government have collected a very vast extent of land for the use of the young children so that they may learn agriculture and other avocations and also start some industries akin to agriculture. I think it is necessary we should have some lands acquired for the sake of convicts, whether it be for the convicts in the urban areas like the cities of Bangalore, Mysore or other places or whether it is for the prisoners that have to be lodged in the district lock-ups. The idea of punishment in the ancient days was in accordance with the theory of retributive punishment and later we have had the theory of deterrent punishment. But in modern days the theory is one of reforming the person. We have to reform the person. As Sri Ramaiya submitted, on account of circumstances people become criminals. For example, take the offence of theft. Theft occurs as a result of poverty. I think that many prisoners go to jail because of thefts committed by them. Of course there will be various other reasons also. If there is no poverty and they are sufficiently prosperous, I think many of the crimes can be avoided. It is from that point of view that we have to reform the prisoner. We have to create a good environment. We have to create opportunities for him to lead a healthy sort of life and give up bad habits. We have got to make him earn a living for himself. We have to teach him some handicrafts so that after his term of imprisonment he may become a healthy civilised human being. Both from the point of view of reform of the prisoner and also from the point of view of having sufficient income to the State Exchequer as Sri Srinivasa Iyengar also was submitting, we may have some agriculture and other handicrafts introduced in the jails and make the convicts there useful citizens. In order to do that, it is very necessary to take away the Central jail out of the City here and other jails out of the urban area and establish a sort of convict settlement. If we do that, I am sure we will be in a position to reform convicts to a very great extent and also at the same time bring sufficient money to the State. I think it is very necessary that the Government should set up a Committee to go into this question of Jail Reform so that they make suitable recommendations which we may act upon and they will be of much use to the convicts.

With these few words, I support the Demand, Sir.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಜೈಲುಗಳ ವಿಷಯದಲ್ಲಿ ಕಳೆದ ವರ್ಷ ಬೀಡಿ ಬೇಡಿಕೆಯನ್ನು ಮಾನ್ಯ ಮಂತ್ರಿಗಳ ಮುಂದೆ ಇಟ್ಟಿದ್ದೆ. ಅದರ ಬಗ್ಗೆ ಇನ್ನೂ ಸರ್ಕಾರದವರು ಏನೂ ಮಾಡಿದಂತೆ ಕಾಣ ಬರಲಿಲ್ಲ. ನಾವು ಎಲ್ಲಿಯಾದರೂ ವಿಧಾನ ಸೌಧದ ಹತ್ತಿರ ಹೋಗಿದ್ದರೆ ನಮ್ಮ ಬೀಡಿ ಬೇಡಿಕೆ ಉಳಿದು ಹೋಯಿತು ಎಂದು ಹೇಳುತ್ತಾರೆ. ಇದಕ್ಕೆ ಖರ್ಚಾಗುವ ಹಣ ಕಡಿಮೆ. ಆದರೂ ನಾಲ್ಕು ಗೋಡೆಗಳ ಮಧ್ಯೆ ಇರತಕ್ಕ ಪರಿಸ್ಥಿತಿಯಲ್ಲಿ ತಂಬಾಕು ಬಹಳ ಸ್ನೇಹಿತನಂತೆ ಅವರಿಗೆ ಮನಸ್ಸಿಗೆ ಒಂದು ರೀತಿಯ ಸ್ವಾಸ್ಥ್ಯವನ್ನು ಕೊಡುತ್ತದೆ ಎಂಬ ಅಭಿಪ್ರಾಯವನ್ನು ಕೇಳಿದ್ದೇನೆ. ಖೈದಿಗಳು ಈ ಒಂದು ಬೇಡಿಕೆಯನ್ನು ಕೇಳುತ್ತಾರೆ. ಹೋದಸಲ ಸರ್ಕಾರದವರು ಇದಕ್ಕೆ ಎಷ್ಟೋ ರೂಪಾಯಿ ಖರ್ಚಾಗುತ್ತದೆ, ಪರಿಶೀಲನೆ ಮಾಡುತ್ತೇವೆ ಎನ್ನುವ ಉತ್ತರ ಕೊಟ್ಟರು. ಅದು ಇನ್ನೂ ನೆರವೇರಿಲ್ಲ. ಆದುದರಿಂದ ಈ ಸಲವೂ ಕೂಡ ನಾನು ಖೈದಿಗಳ ಪರವಾಗಿ ಈ ಬೀಡಿ ಬೇಡಿಕೆಯನ್ನು ಸರ್ಕಾರದವರ ಮುಂದೆ ಇಡುತ್ತೇನೆ. ಇವರಲ್ಲಿ ಎಲ್ಲರೂ ಬೀಡಿ ಸೇದುವುದಿಲ್ಲ. ಬೀಡಿ ಸೇದುವವರು ತಮಗೆ ಕೊಟ್ಟಿರುವ ಅನ್ನವನ್ನು ಮಾರಾಟ ಮಾಡಿ ಬೀಡಿ ಪಡೆಯುತ್ತಾರೆಂದು ಕೇಳಿದ್ದೇನೆ. ಬೆಂಗಳೂರಿನಲ್ಲಿರುವ ಜೈಲಿಗೆ ಹೋಗಿ ನೋಡಿದರೆ ಖೈದಿಗಳು ಇದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಇದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ವಿಚಾರ.

ಶ್ರೀ ಲಿಂಗಾರೆಡ್ಡಿಯವರು ಲಾಕ್-ಅಪ್ಸ್ ವಿಷಯ ಹೇಳಿದರು. ನಾನೂ ಅದೇ ವಿಷಯವನ್ನು ಹೇಳಬೇಕೆಂದಿದ್ದೆ. ಲಾಕ್-ಅಪ್ಸ್ ಬಹಳ ಚಿಕ್ಕದಾಗಿರುತ್ತವೆ,

ಮತ್ತು ಸಾಕಷ್ಟು ಚೊಕ್ಕಟವಾಗಿರುವುದಿಲ್ಲ. ಇದರಲ್ಲಿ ಇನ್ನೊಂದೇನೆಂದರೆ, ಕ್ರಿಮಿನಲ್ ಏನಾದರೂ ತಕ್ಸೀರು ಮಾಡಿ ಸಿಕ್ಕಿದನೆಂದರೆ ಅವನನ್ನು ನೋಡಿಕೊಳ್ಳುವ ರೀತಿ, ನಮ್ಮ ಸ್ನೇಹಿತರು ಪೋಲೀಸಿನವರು ಯಾವ ರೀತಿಯ ಭಾಷೆ ಉಪಯೋಗಿಸುತ್ತಾರೆಂದರೆ ತಕ್ಷಣವೇ ಏಕವಚನದಲ್ಲಿ ಷುರು ಮಾಡಿ ಕೈ ಹಾಕಿ ಕಾಲಿನಿಂದ ಮೆಟ್ಟುವ ಸ್ಥಿತಿ ಬರುತ್ತದೆ. ಸರ್ಕಾರದವರು ಈ ವಿಚಾರದಲ್ಲಿ ಅವರಿಗೆ ಸ್ವಲ್ಪ ವಿದ್ಯಾಭ್ಯಾಸವನ್ನು ಮಾಡಿಸಬೇಕು. ಮೊದಲು ಪೋಲೀಸಿನವರಿಗೆ ಮತ್ತು ಜೈಲು ವಾರ್ಡರುಗಳಿಗೆ ಈ ವಿದ್ಯಾಭ್ಯಾಸ ಕೊಡಬೇಕು. ಯಾಕೆಂದರೆ, ಈಗ ಅಂಡರ್ ಟ್ರಯಲ್ ಪ್ರಿಸನರ್ಸ್ ಇರುತ್ತಾರೆ. ಯಾವುದಾದರೂ ತಕ್ಸೀರಿನಲ್ಲಿ ಗುಮಾನಿ ಮೇಲೆ ಹಿಡಿದು ಜೈಲಿನಲ್ಲಿಟ್ಟಿರುತ್ತಾರೆ. ನಾನು ಮಟ್ಟಿದೊಡ್ಡಿ ಕೇಸಿನ ಸಮಯದಲ್ಲಿ ರಾಮನಗರದ ಲಾಕ್-ಅಪ್‌ಗೆ ಹೋಗಿದ್ದೆ. ಸುಮಾರು 20 ಜನರು ಇದ್ದರು ಎಂದು ಕಾಣುತ್ತದೆ. ಜಾನುವಾರುಗಳನ್ನೂ ಕೂಡ ಅಷ್ಟು ಒತ್ತಾಗಿ ಕೂಡುವುದಿಲ್ಲ, ಹಾಗೆ ಕೂಡಿದ್ದರು. ಒಳಗಿದ್ದವರನ್ನು ಹೊರಗಡೆ ಬಯಲಿಗೆ ಹೋಗಬೇಕಾದರೂ ಬಿಡದೆ ಇದ್ದರು. ಆ ಕೊಠಡಿಗೆ ಮೇಲ್ಗಡೆ ಒಂದು ಕಿಟಿಕಿ ಇತ್ತು. ಅವರು ಅಧರಿಂದ ಕೂಗಿ ಕೂಗಿ ಬಹಳ ಕಷ್ಟಪಟ್ಟರು. ಈ ರೀತಿಯ ಮನೋಭಾವ ತೀರ ಕೆಟ್ಟದ್ದು. ಅವರಿಗೆ ಸ್ನಾನ ಮಾಡಿಸಿ, ಒಳ್ಳೆಯ ಊಟ ಕೊಟ್ಟು ಉಪಚಾರಮಾಡಿ ಬಹಳ ಗೌರವದಿಂದ ಕಾಪಾಡಿಕೊಂಡು ಹೋಗಬೇಕು ಎಂಬ ಅಭಿಪ್ರಾಯದಿಂದ ಹೇಳುತ್ತಿಲ್ಲ. ಸಾಮಾನ್ಯವಾಗಿ ಮನುಷ್ಯನಿಗೆ ಯೋಗ್ಯವಾದ ರೀತಿಯಲ್ಲಿ, ನಡೆದುಕೊಳ್ಳಬೇಕಾದ ರೀತಿಯಲ್ಲಿ ನಡೆದುಕೊಳ್ಳುವುದಿಲ್ಲ. ನಾನು ಅನೇಕ ಕಡೆ ಇದನ್ನು ನೋಡಿದ್ದೇನೆ. ಅಲ್ಲೆಲ್ಲ ದೊಡ್ಡ ಲಾಕ್-ಅಪ್ ಬೇಕಾಗಿಲ್ಲ. ಸ್ಯಾನಿಟರಿ ಕಂಡೀಷನ್ಸ್ ಇರಲಿಲ್ಲವೆಂದು ಮಾತ್ರ ಹೇಳಿದೆ. ಇದನ್ನು ಸರಿಯಾಗಿ ನಡೆಸಿಕೊಂಡು ಹೋಗದೆ ಇದ್ದರೆ ಹೇಗೆ? ಬೆಂಗಳೂರು ಜೈಲಿನಲ್ಲಿ 3-4 ಮೂತ್ರಿಗಳನ್ನು ಕೊಟ್ಟಿದ್ದಾರೆ. ಆದರೆ ಈ ಮೂತ್ರಿಗಳನ್ನು ತೊಳೆಯದೆ ಎಷ್ಟು ಗಲೀಜಾಗಿವೆ ಎಂದು ಹೇಳಲು ಅಸಾಧ್ಯ. ಆದುದರಿಂದ ಈ ಮನೋಭಾವವೇನಿದೆ ಅದು ಹೋಗಬೇಕು. ಮಾನ್ಯಮಂತ್ರಿಗಳು ಪ್ರವಾಸ ಹೋದಾಗ ಜೈಲುಗಳಿಗೆ ಒಂದು ಸಲ ಭೇಟಿ ಕೊಟ್ಟು ಇವನ್ನೆಲ್ಲ ನೋಡಿ, ಸರಿಪಡಿಸಬೇಕು. ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ, ಮುಖ್ಯವಾಗಿ ಜೈಲು ವಾರ್ಡರುಗಳು ಮತ್ತು ಪೋಲೀಸಿನವರು ಇವರುಗಳಿಗೆ ತಿಳಿವಳಿಕೆ ಕೊಟ್ಟು ಖೈದಿಗಳನ್ನು ಸರಿಯಾದ ರೀತಿಯಲ್ಲಿ ನೋಡಿಕೊಳ್ಳಬೇಕು. ಇನ್ನು ಮುಂದಾದರೂ ಈಗಿನಂತೆಯೇ ವರ್ತಿಸಬಾರದು ಎಂದು ಹೇಳಬೇಕು. ಮೇಲ್ಕಂಡ ವಿಷಯಗಳನ್ನೆಲ್ಲ ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದೆಂದು ಹೇಳುತ್ತೇನೆ.

*ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಸ್ವಾಮಿ, ಒಂದು ಪ್ರಶ್ನೆ ಕೇಳುತ್ತೇನೆ. ಜೈಲಿನಲ್ಲಿ ಉತ್ಪತ್ತಿ ಮಾಡತಕ್ಕ ಪದಾರ್ಥಗಳು ಸ್ವಾಭಾವಿಕವಾಗಿ ಚೆನ್ನಾಗಿವೆ ಮತ್ತು ಬೆಲೆಯೂ ಸಾಧಾರಣವಾಗಿದೆ ಎಂದು ಅನೇಕರ ಭಾವನೆ. ಹಾಗಿದ್ದರೂ ಕೂಡ ಸಂಪಾದನೆಗಿಂತ ಖರ್ಚು ಹೆಚ್ಚಾಗಿದೆಯಲ್ಲ. ಅದರಲ್ಲೂ ಈ ವರ್ಷ ಪ್ರೊವೈಡ್ ಮಾಡಿರುವುದರಲ್ಲಿ! 1,10,000 ರೂಪಾಯಿಗಳ ಉತ್ಪತ್ತಿ ಬರುತ್ತದೆ ಎಂದು ನಿರೀಕ್ಷಿಸಿದ್ದೀರಿ. ಮತ್ತು 1,36,000 ರೂಪಾಯಿಗಳ ಬೆಲೆ ಬಾಳುವ ಕಚ್ಚಾ ಪದಾರ್ಥಗಳನ್ನು ಕೊಂಡುಕೊಳ್ಳುವುದಕ್ಕೆ ಎಂದು ಒದಗಿಸಿದ್ದೀರಿ. ಆದುದರಿಂದ 1,36,000 ರೂಪಾಯಿಗಳ ಪದಾರ್ಥಗಳನ್ನು ಕೊಂಡು ಕೊಂಡು, 1,10,000 ರೂಪಾಯಿಗಳ ವರಮಾನವನ್ನು ನಿರೀಕ್ಷಿಸಿದರೆ, ಇದು ಹೇಗೆ ಎಂದು ಸ್ವಲ್ಪ ತಿಳಿಸಿದರೆ ಒಳ್ಳೆಯದು.

* ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಶಾಖೆಯ ಮಂತ್ರಿಗಳು)—ಸ್ವಾಮಿ, ಜೈಲುಗಳನ್ನು ಲಾಕ್-ಅಪ್‌ಗಳು, ಸಬ್ ಜೈಲುಗಳು ಮತ್ತು ಜೈಲುಗಳು ಎಂದು ಮೂರು ಭಾಗವಾಗಿ ವಿಂಗಡಣೆ ಮಾಡಬಹುದು ಎಂದು ಕಾಣುತ್ತದೆ. ಇವೆಲ್ಲ ಸಾರ್ವಜನಿಕ ಸ್ಥಳಗಳು. ಇವು ಚೊಕ್ಕಟವಾಗಿರಬೇಕು, ಸ್ಯಾನಿಟರಿ ಕಂಡೀಷನ್ಸ್ ಇರಬೇಕು ಎನ್ನುವುದರಲ್ಲಿ ಯಾವ ವಿವಾದವೂ ಇಲ್ಲ. ಆದರೆ ಚೊಕ್ಕಟವಾಗಿಲ್ಲದೆ ಇರುವುದಕ್ಕೆ ಅನೇಕ ಕಾರಣಗಳಿವೆ. ಸರಿಯಾದ ರೀತಿಯಲ್ಲಿಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಮತ್ತು ಇನ್ನೂ ಉತ್ತಮಪಡಿಸುತ್ತಿದ್ದೇವೆ ಎಂದು ಭರವಸೆ ಕೊಡುತ್ತೇನೆ. ಮೂತ್ರಿ ವಗೈರೆ ಸ್ವಚ್ಛ ಮಾಡಿಸುತ್ತಿಲ್ಲವೆಂಬುದಾಗಿ ಹೇಳಿದರು. ಸಿಬ್ಬಂದಿಯನ್ನು ಕೊಟ್ಟು ಈ ಕೆಲಸವನ್ನೂ ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ನಾನು ಜೈಲುಗಳು ಮತ್ತು ಸಬ್ ಜೈಲುಗಳಿಗೆ ಭೇಟಿಯನ್ನೂ ಕೊಟ್ಟಿದ್ದೇನೆ. ಲಾಕ್-ಅಪ್‌ಗಳನ್ನು ಮಾತ್ರ ನೋಡಿಲ್ಲ. ಲಾಕ್-ಅಪ್‌ಗಳು ಪೋಲೀಸು ಇಲಾಖೆಯ ಆಡಳಿತದಲ್ಲಿರುತ್ತವೆ. ಇನ್ನು ಮುಂದೆ ಅವನ್ನೂ ಭೇಟಿ ಮಾಡುತ್ತೇನೆ.

ಜೈಲುಗಳಲ್ಲಿ ಕೈಗಾರಿಕೆಗಳನ್ನು ಮಾಡಬೇಕು ಎಂದು ಸೂಚನೆ ಬಂದಿದೆ. ಈ ಕೈಗಾರಿಕೆಗಳು ನಡೆಯುತ್ತಿವೆ. ಅವನ್ನು ಇನ್ನೂ ಹೆಚ್ಚು ಮಾಡಬೇಕೆಂಬ ಪ್ರಯತ್ನವಿದೆ. ಈಗ ಎಲ್ಲ ಜೈಲುಗಳಲ್ಲಿಯೂ ಇವು ನಡೆಯುತ್ತಿಲ್ಲ. ಬೆಂಗಳೂರು, ಮೈಸೂರು ಮತ್ತು ಬಳ್ಳಾರಿ ಜೈಲುಗಳಲ್ಲಿದೆ. ಅದರ ಬಗ್ಗೆ ಅಂಕಿ ಅಂಶಗಳನ್ನೂ, ಉತ್ಪತ್ತಿಯನ್ನೂ ಕೊಡುತ್ತೇನೆ. ಉತ್ಪತ್ತಿಗಿಂತ ಕಚ್ಚಾ ಪದಾರ್ಥಗಳಿಗೆ ಖರ್ಚು ಹೆಚ್ಚಾಗುತ್ತಿದೆ ಎಂಬುದರ ಬಗ್ಗೆ ಹೇಳಬೇಕೆಂದರೆ ಇದರಲ್ಲಿ ಯಂತ್ರೋಪಕರಣಗಳ ಭಾಗವೂ ಇರುತ್ತದೆ, ಕಚ್ಚಾ ಪದಾರ್ಥಗಳ ಭಾಗವೂ ಇರುತ್ತದೆ. ಇದರಲ್ಲಿ ನಿಖರವಾದ ಲೆಕ್ಕಪತ್ರಗಳನ್ನೂ ಬೇಕಾದರೆ ತರಿಸಿಕೊಡುತ್ತೇನೆ. ಸಂಸ್ಥಾನದ ಜೈಲುಗಳಲ್ಲಿ ಈ ಕೆಳಗೆ ಕಂಡಂತೆ ಕೈಗಾರಿಕೆಯ ಕೆಲಸಗಳು ನಡೆಯುತ್ತಿವೆ. ಬೆಂಗಳೂರು ಜೈಲಿನಲ್ಲಿ handloom, powerloom, spinning plant, tailoring, mat-weaving, rattan work, carpentry, foundry, smithy, printing and hand-spinning ಇವೆ. ಇದರ ಪೈಕಿ ಪ್ರಿಂಟಿಂಗ್‌ನಲ್ಲಿ ಬಹಳ ಚೆನ್ನಾಗಿ ಕೆಲಸ ನಡೆಯುತ್ತಿದೆ. ಅಧನ್ನ ಈಗ ಎರಡುವರ್ಷಗಳಿಂದ ಅಭಿವೃದ್ಧಿ ಮಾಡಲಾಗಿದೆ. ಮೈಸೂರು ಜೈಲ್‌ನಲ್ಲಿ textile, handloom, tailoring, mat-weaving, carpentry, carpet-weaving and agriculture ಇವೆ. ಬಳ್ಳಾರಿ ಸೆಂಟ್ರಲ್ ಜೈಲ್‌ನಲ್ಲಿ kambli-weaving, textile, wool spinning, carpentry, book-binding ಇವೆ. ಆಲಿಪುರಂ ಜೈಲಿನಲ್ಲಿ weaving, stone blasting and carpentry ಇವೆ. ಇವುಗಳನ್ನು ಇನ್ನೂ ಅಭಿವೃದ್ಧಿ ಮಾಡುವುದಕ್ಕೆ ಅವಕಾಶವಿದೆ, ಅದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈಗ ಚರಕ ಇದೆ, ಅಂಬರ್ ಚರಕವನ್ನು ಹಾಕಬೇಕೆಂದು ಹೇಳುತ್ತಾ ಇದ್ದೇವೆ, ಈ ಸಂಬಂಧದಲ್ಲಿ ಕಮಿಟಿ

(ಶ್ರೀ ಎ. ಜಿ. ರಾಮಚಂದ್ರರಾವ್.)

ರಿಫೋರ್ಮ್ ಬಂದಮೇಲೆ ಎಷ್ಟುಮಟ್ಟಿಗೆ ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನೂ ಮಾಡಲಾಗುತ್ತದೆ.

ಮತ್ತೆ ಈಗಿರುವ ಸಿಸ್ಟಂ ಬದಲಾವಣೆಯಾಗಬೇಕು, ಇದರಲ್ಲಿ ಶಿಕ್ಷೆಯ ರೂಪದಲ್ಲಿ ಇರಬೇಕೇ, ಶಿಕ್ಷಣ ರೂಪದಲ್ಲಿ ಇರಬೇಕೇ ಎಂಬ ಬಗ್ಗೆ ವಿವಾದ ಬಹಳ ದಿನಗಳಿಂದ ನಡೆಯುತ್ತಿದೆ. ಶಿಕ್ಷೆಯಿಂದ ಶಿಕ್ಷಣಕ್ಕೆ ಬದಲಾಯಿಸಿ ಅದನ್ನು ಪ್ರಯೋಗ ಮಾಡಿ ಎಲ್ಲೆಲ್ಲಿ ಫಲಕಾರಿಯಾಗಿದೆ ಎಂದು ವಿಮರ್ಶೆ ಮಾಡಿನೋಡಬೇಕಾದದ್ದು ಅತ್ಯಾವಶ್ಯಕ. ಆದರೆ ಚಿಕ್ಕಮಕ್ಕಳಿಗೆ ಶಿಕ್ಷಣವೇ ಪ್ರಾಧಾನ್ಯವಾಗಿರಬೇಕು ಮತ್ತು ದೊಡ್ಡವರಿಗೆ ಶಿಕ್ಷೆಯೇ ಪ್ರಾಧಾನ್ಯವಾಗಿರಬೇಕು ಎಂದು ತೆಗೆದುಕೊಳ್ಳಬಹುದು. ಚಿಕ್ಕಮಕ್ಕಳಿಗೆ ಬಾರ್ಸ್ಟಲ್ ಸ್ಕೂಲು ಬಳ್ಳಾರಿಯಲ್ಲಿದೆ. ಇದರ ಒಂದು ಅಂಗವನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡಬೇಕೆಂದಿದ್ದೇವೆ. ಆದರೆ ಕರ್ಣಾಟಕ ಪ್ರಾಂತವಾದ ಮೇಲೆ ಮೈಸೂರು ವಿಸ್ತಾರವಾಗುವುದರಿಂದ ಮುಂದೆ ಯಾವ ಯಾವ ಕಡೆಗಳಲ್ಲಿ ಯಾವ ಯಾವ ಅನುಕೂಲಗಳಿವೆಯೊ ನೋಡಬೇಕಾಗಿದೆ. For instance, in Bijapur there is a very good jail. ಆದುದರಿಂದ ಇರತಕ್ಕ ಎಲ್ಲ ಅನುಕೂಲಗಳನ್ನೂ ಇಟ್ಟುಕೊಳ್ಳಬೇಕು, ಆತುರ ಪಡಬಾರದು ಎಂಬ ದೃಷ್ಟಿಯಿಂದ ಇನ್ನು ಹೆಚ್ಚಾಗಿ ಹೇಳುವುದಿಲ್ಲ. ಬೆಂಗಳೂರಿನಲ್ಲಿ ಸಾಮಾನ್ಯವಾಗಿ ಅಂಡರ್ ಟ್ರಯಲ್ ಪ್ರಿಸನರ್ಸ್. 400-500 ಜನ ಇರುತ್ತಾರೆ. ಒಂದು ವರ್ಷಕ್ಕೆ ಕಡಿಮೆ ಶಿಕ್ಷೆಯಾಗಿರುವವರು 500 ಜನ, ಒಂದು ವರ್ಷಕ್ಕೆ ಮೇಲ್ಪಟ್ಟವರು 500 ಜನ ಮತ್ತು ಸಿವಿಲ್ ಪ್ರಿಸನರ್ಸ್ ಕೆಲವರು ಇರುತ್ತಾರೆ. ಆದರೆ ಎಮರ್ಜೆನ್ಸಿ ಪರ್ಪಸ್‌ಗಾಗಿ 1,000-1,500 ಜನಕ್ಕೆ ಅವಕಾಶವಿರುತ್ತದೆ. ಬೆಂಗಳೂರಿನಲ್ಲಿ ಜೈಲು ತಗೆದುಹಾಕಬೇಕು ಎಂದರೆ ಸಧ್ಯಕ್ಕೆ ಅದು ಸಾಧ್ಯವಾಗದ ಕೆಲಸ. ಆದರೆ ಇದರಲ್ಲಿ ಒಂದು ವರ್ಷಕ್ಕಿಂತ ಹೆಚ್ಚಾಗಿ ಶಿಕ್ಷೆಯಾಗಿರುವವರು ಇರುವುದು ಸೂಕ್ತವಲ್ಲವೆಂದು ಅವರನ್ನು ಬೇರೆ ಕಡೆಗೆ ವರ್ಗಾಯಿಸಿದ್ದೇವೆ.

Sri H. C. LINGA REDDY.—What I said was, that the Central Jail should be shifted from its present place to a more healthy environment.

ಶ್ರೀ ಎ. ಜಿ. ರಾಮಚಂದ್ರರಾವ್.—ಸೆಂಟ್ರಲ್ ಜೈಲನ್ನು ಈಗಿರುವ ಸ್ಥಳದಿಂದ ಬದಲಾವಣೆ ಮಾಡುವುದು ಸೂಕ್ತ. ಇದನ್ನು ವಿಶ್ವವಿದ್ಯಾನಿಲಯಕ್ಕೆ ಕೊಡಬೇಕೆಂದು ಆಲೋಚಿಸಿ, ಎಷ್ಟುಮಟ್ಟಿಗೆ ಅವಕಾಶವಿರಬೇಕೋ ಅಷ್ಟು ಜನರಿಗೆ ಹತ್ತಿರದಲ್ಲೇ ಒಂದು ಜೈಲು ಕಟ್ಟಬೇಕೆಂದು ಮಾಡಿದ್ದೇವೆ.

ರಿಫಾರಂಸ್ ಕಮಿಟಿ ಆಗಬೇಕು ಎಂದು ಹೇಳಿದರು. 1940 ನೆ ಇಸವಿಯಲ್ಲಿ ಒಂದು ಕಮಿಟಿ ನೇಮಕವಾಗಿದ್ದು ಅವರ ಶಿಫಾರಸುಗಳನ್ನೆಲ್ಲ ಕಾರ್ಯಗತ ಮಾಡಲಾಗಿದೆ. ಮೈಸೂರು ದೊಡ್ಡದಾದ ಮೇಲೆ ಸುಧಾರಣೆಗಳನ್ನು ಕೈಗೊಳ್ಳಲು ಬೇಕಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ಸೂಕ್ತವೆಂದು ಕಾಣುತ್ತದೆ. With these remarks I submit, Sir, that the Demand for this item may be passed.

Sri SIRASAPPA IJARI.—Is there any idea of abolishing the Borstal School in Bellary?

Sri A. G. RAMACHANDRA RAO.—No.

Sri H. C. LINGA REDDY.—About District Lock-ups, I had pleaded that they may be improved by introducing agriculture, industries, etc.

ಶ್ರೀ ಎ. ಜಿ. ರಾಮಚಂದ್ರರಾವ್.—ಲಾಕ್-ಅಪ್‌ಗಳಲ್ಲಿ ಕೈಗಾರಿಕೆ ವಗೈರೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಕೆಲವಾರು ದಿವಸಗಳು ಮಾತ್ರವಿರುವವರು ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಸ್ವಚ್ಛವಾಗಿಟ್ಟುಕೊಂಡಿರಬೇಕು ಎಂಬ ನೀತಿಯನ್ನು ಒಪ್ಪುತ್ತೇವೆ.

Sri R. ANANTARAMAN.—Sir, we learn that the Andhra Government is due to this Government some money for the maintenance of their prisoners. Is that amount settled, Sir?

Sri A. G. RAMACHANDRA RAO.—We expect an early settlement, Sir.

5 P.M.

Mr. CHAIRMAN.—The question is:

"That a sum not exceeding Rs. 15,77,000 be granted to the Government to defray the charges which will come in course of payment during the year ending 31st day of March 1957, in respect of 'Jails and Convict Settlements'."

The motion was adopted.

THE MADRAS VILLAGE PANCHAYETS (MYSORE AMENDMENT) BILL, 1956.

Motion to consider.

Sri T. CHANNIAH (Minister for L.S.-G. and Public Health).—Sir, I move:

"That the Madras Village Panchayets (Mysore Amendment) Bill, 1956 be taken into consideration."

Sir, under Section 10 of the Madras Village Panchayets Act, 1950 the term of office of members of Panchayets in Bellary District is three years extensible by a period of three months. The term of three years of the members of the existing Panchayets has now been extended by three months, and as it will take some time for extending